ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು

ಎಂ.ಫಿಲ್ ಪದವಿಗಾಗಿ ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಎಂ.ಫಿಲ್. ಸಂಶೋಧನ ಪ್ರಬಂಧ



ಸಂಶೋಧಕರು

ಪಿ. ವಿಶ್ವನಾಥ

ಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ
ಮುಖ್ಯಸ್ಥರು, ಪ್ರಾಧ್ಯಾಪಕರು
ಹಾಗೂ ಡೀನ್ ಲಲಿತಕಲಾ ನಿಕಾಯ



ಲಲಿತಕಲಾ ನಿಕಾಯ
ದೃಶ[illegible]ಗ
ಕನ[illegible]ಯ, ಹಂಪಿ
ವಿ[illegible]. ೨೭೬
೨೦[illegible]


768

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು

ಎಂ.ಫಿಲ್. ಪದವಿಗಾಗಿ ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಎಂ.ಫಿಲ್. ಸಂಶೋಧನ ಪ್ರಬಂಧ

ಸಂಶೋಧಕರು
ಪಿ. ವಿಶ್ವನಾಥ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಮುಖ್ಯಸ್ಥರು, ಪ್ರಾಧ್ಯಾಪಕರು
ದೃಶ್ಯಕಲಾ ವಿಭಾಗ
ಹಾಗೂ ಡೀನ್ ಲಲಿತಕಲಾ ನಿಕಾಯ



ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯

ದೃಢೀಕರಣ ಪತ್ರ

'ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು' ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಲಲಿತಕಲಾ ನಿಕಾಯ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ **ಪಿ. ವಿಶ್ವನಾಥ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15-10-09
ಸ್ಥಳ : ವಿದ್ಯಾರಣ್ಯ

ಡಾ. ಎಸ್.ಸಿ. ಪಾಟೀಲ
ಮುಖ್ಯಸ್ಥರು, ಪ್ರಾಧ್ಯಾಪಕರು
ದೃಶ್ಯಕಲಾ ವಿಭಾಗ
ಹಾಗೂ ಡೀನ್ ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

'ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು' ಎಂಬ ಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಲಲಿತಕಲಾ ನಿಕಾಯ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 15/10/2009
ಸ್ಥಳ : ವಿದ್ಯಾರಣ್ಯ

ಪಿ. ವಿಶ್ವನಾಥ
ಸಂಶೋಧಕರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ


[illegible]

[illegible]

[illegible]

[illegible]

ಪರಿವಿಡಿ









ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರವೇಶ :

ಸಂಸ್ಕೃತಿಯೊಂದಿಗೆ ತಳುಕು ಹಾಕಿಕೊಂಡಿರುವ ಚಿತ್ರಕಲೆಯು ಮನುಕುಲದಷ್ಟೇ ಪುರಾತನವಾಗಿದೆ. ಮನುಷ್ಯನ ಇರುವಿಕೆಯ ಹೆಗ್ಗುರುತುಗಳು ಹಾಗೂ ಅವರ ಅನಿಸಿಕೆ, ಅಭಿವ್ಯಕ್ತಿಗಳನ್ನು ತಿಳಿದುಕೊಳ್ಳುವಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆ ಮಹತ್ವದ ಆಕರವಾಗಿದೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪ್ರಾಗೈತಿಹಾಸ ಕಾಲದ ಜನರಿಗೆ ಚಿತ್ರಕಲೆಯ ಬಗ್ಗೆ ಇದ್ದ ಉತ್ಸುಕತೆ, ಸೌಂದರ್ಯೋಪಾಸನೆಯ ಪ್ರಜ್ಞೆ ತಿಳಿಯುತ್ತದೆ. ತಮ್ಮ ಬಿಡುವಿನ ಸಮಯದಲ್ಲಿ ತಾವು ಕಂಡುಕೊಂಡ ಬಗೆ ಬಗೆಯ ವಿಚಾರಗಳನ್ನು, ಗ್ರಹಿಕೆಗಳನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿಗೊಳಿಸುತ್ತಲೇ ಪರಂಪರೆಯ ಮುಂದುವರಿಕೆಗೆ ಸಾಂಸ್ಕೃತಿಕ ನೆಲೆಘಟ್ಟನ್ನು ಒದಗಿಸಿದ್ದಾರೆ. ಆದಿಮಾನವರು ತಮ್ಮ ವಾಸಕ್ಕಾಗಿ ಆಯ್ದುಕೊಂಡಿದ್ದ ಗವಿಗಳು ಹಾಗೂ ಶಿಲಾಶ್ರಯಗಳಲ್ಲಿ ವೈವಿಧ್ಯ ಚಿತ್ರಗಳನ್ನು ರಚಿಸಿದ್ದಾರೆ. ತಮ್ಮಲ್ಲಿರುವ ಅನನ್ಯತೆ, ಅನಿಸಿಕೆ, ಅಭಿಪ್ರಾಯ ಹಾಗೂ ಸೃಜನಶೀಲತೆಗಳನ್ನು ಅನಾವರಣಗೊಳಿಸಲು ಚಿತ್ರಕಲೆಯ ಮಾಧ್ಯಮವನ್ನು ಪ್ರಮುಖವಾಗಿ ಬಳಸಿಕೊಂಡಿದ್ದಾರೆ. ಪ್ರಾಗೈತಿಹಾಸಿ ಕಾಲದ ಜನರು ಬಳಕೆ ಮಾಡಿರುವ ಬಣ್ಣ ಮತ್ತು ರೇಖೆಗಳು, ಕೆಲವು ಸಂಕೇತ ಹಾಗೂ ತಾಂತ್ರಿಕತೆಯಿಂದ ಕೂಡಿದುದ್ದಾಗಿದೆ. ಈ ರೀತಿಯ ಕೆಲವು ನಿಗೂಢತೆಗಳನ್ನು ಹೊಂದಿದ ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ವಿಶ್ಲೇಷಣಾತ್ಮಕವಾಗಿ, ವಿಮರ್ಶಾತ್ಮಕವಾಗಿ ವಿವೇಚಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ ಎಂದು ಹೇಳಬಹುದು.

[illegible]

[illegible]

[illegible]

ಪ್ರಾಗೈತಿಹಾಸಿಕ ಕಾಲಘಟ್ಟಗಳಲ್ಲಿ ರಚನೆಯಾದ ಚಿತ್ರಕಲೆಯು ಕೇವಲ ಮನೋರಂಜನಾತ್ಮಕ ಹಿನ್ನೆಲೆ ಹೊಂದಿಲ್ಲ. ಅದರ ಜೊತೆಗೆ ಅಂದಿನ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಸಂಪ್ರಬಂಧವು ಪ್ರಾಗೈತಿಹಾಸಿಕ ಚಿತ್ರಕಲೆಯ ಅಧ್ಯಯನವಾಗಿದ್ದರು, ಅದರ ಜೊತೆಗೆ ಚಿತ್ರದುರ್ಗ ಪ್ರದೇಶದ ಆ ಕಾಲದಲ್ಲಿನ ಮೇಲಿನ ಅಂಶಗಳನ್ನು ವಿಶ್ಲೇಷಿಸುವ ಉದ್ದೇಶ ಹೊಂದಿದೆ. ಇದರ ಜೊತೆಗೆ ಕಲೆಯ ತಾಂತ್ರಿಕ ಅಂಶಗಳು ಸಹಜವಾಗಿ ಅನಾವರಣಗೊಳ್ಳುತ್ತವೆ. ಹಾಗಾಗಿ ಇದು ಏಕಮುಖ ಅಧ್ಯಯನವಾಗಿರದೆ, ಬಹುಮುಖಿ ಹಿನ್ನೆಲೆಯಲ್ಲಿ ಕಲೆಯನ್ನು ಅರ್ಥೈಸುವ ಪ್ರಯತ್ನ ಎಂದು ಹೇಳಬಹುದು.

ಅಧ್ಯಯನದ ಉದ್ದೇಶ :

ಪ್ರಾಗೈತಿಹಾಸಿಕ ಕಾಲಘಟ್ಟದಲ್ಲಿನ ಚಿತ್ರಕಲೆಯ ಬಗ್ಗೆ ನಡೆದಿರುವ ಅಧ್ಯಯನಗಳು ಮತ್ತು ಸಂಶೊಧನೆಗಳು ಅತ್ಯಲ್ಪವೇ ಎಂದು ಹೇಳಬಹುದು. ಇದು ಇಡೀ ಭಾರತ ಮಾತ್ರವಲ್ಲದೇ ಕರ್ನಾಟಕ ಪ್ರದೇಶಕ್ಕೂ ಅನ್ವಯಿಸುತ್ತದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳು ವಿಫುಲವಾಗಿದ್ದರು, ಅದರ ಅನ್ವೇಷಣೆ, ಸಂಶೊಧನೆ, ಕಷ್ಟಕರವಾದ ಕ್ಷೇತ್ರಕಾರ್ಯವನ್ನು ಬಯಸುತ್ತದೆ. ಅಲ್ಲದೆ ಪರಿಶ್ರಮಪಟ್ಟು ಚಿತ್ರಗಳ ನೆಲೆಗಳನ್ನು ಪತ್ತೆ ಮಾಡಿದರೂ ಅದರ ಬಗೆಗಿನ ಪೂರಕ ಮಾಹಿತಿ ಅತೀ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆ. ಹಾಗಾಗಿ ವಿದ್ವಾಂಸರು ಪ್ರಾಗೈತಿಹಾಸಿಕ ಚಿತ್ರಕಲೆಯ ಬಗ್ಗೆ ಅಷ್ಟಾಗಿ ಗಮನ ಹರಿಸದಿರುವ ಅಂಶ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ಚಿತ್ರದುರ್ಗ ಪ್ರದೇಶ ವಿವಿಧ ಹೆಸರುಗಳೊಂದಿಗೆ ತಳುಕುಹಾಕಿಕೊಂಡು ಬಂದಿದೆ. ಇಂದಿಗೂ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳಿಂದಾಗಿ ದುರ್ಗದ ಇತಿಹಾಸ ವಿಸ್ತಾರವಾಗುತ್ತಲೇ ನಡೆಯುತ್ತಿದೆ. ಪ್ರಾಚೀನ ಕಾಲದಲ್ಲಿ ಚಿತ್ರದುರ್ಗಕ್ಕೆ ಸೊಳ್ಳಲನಾಡು, ಚಿತ್ರಕಲ್ಲು, ಬೆಮ್ಮತ್ತನ ಕಲ್ಲುಪಟ್ಟಣ, ಬೆಮ್ಮತ್ತನೂರು, ಚಿಂತಲದುರ್ಗ, ಛತ್ರಕಲ್ಲು, ಫರೂಕಬಾದ್, ಚಿಟ್ಸ್‌ದುಗ್ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈಗ ಚಿತ್ರದುರ್ಗ ಎಂಬ ಹೆಸರು ಬಳಕೆಯಲ್ಲಿದೆ. ಇಂತಹ ಐತಿಹಾಸಿಕ ಅಧ್ಯಯನಕ್ಕೆ ಜಿಲ್ಲೆಯ ಕೆಲವು ಶಾಸನಗಳು, ಪಾಳೆಗಾರರ ದಾಖಲೆಗಳು, ಕೈಫಿಯತ್ತು ಸಂಪುಟಗಳು ಸಹಾಯಕವಾಗಿವೆ.

ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಮಾಹಿತಿಯನ್ನು ಜಿಲ್ಲೆಯಲ್ಲಿ ಸಿಕ್ಕಿರುವ ಆದಿಮಾನವರ ಕುರುಹುಗಳನ್ನು ಆಧರಿಸಿ ಗುರುತಿಸಲಾಗಿದೆ. ಅವುಗಳಲ್ಲಿ ಹೊಸದುರ್ಗ ತಾಲ್ಲೂಕಿನ ಜಾನಕಲ್ಲು, ತಣಿಗೆಕಲ್ಲು, ಹುಲಿಕೆರೆ, ದುಗ್ಗಾವರ, ಹೊಳಲ್ಕೆರೆ ತಾಲ್ಲೂಕಿನ ಗಟ್ಟಿಹೊಸಹಳ್ಳಿ ತಾಳ್ಯ, ಹಿರಿಯೂರು ತಾಲ್ಲೂಕಿನ ಸೊಂಡೆಕೆರೆ, ಉಡುವಳ್ಳಿ-ಮುಳ್ಳಪ್ಪನಗುಡ್ಡ, ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ,

[illegible]

ಜಟಂಗರಾಮೇಶ್ವರ, ನುಂಕಿಮಲ್ಲೈ, ಸಂತೆಗುಡ್ಡ. ಚಿತ್ರದುರ್ಗ ತಾಲ್ಲೂಕಿನ ಬೂದಾರದಿಬ್ಬ, ತಮಟಗಲ್ಲು, ಚೋಳಗುಡ್ಡ, ಗಂಜಿಗುಂಟೆ, ಕುಂಚಿಗನಾಳು, ಸಂಗೇನಹಳ್ಳಿ, ಬೆಳಗಟ್ಟ ಮತ್ತು ಚಂದ್ರವಳ್ಳಿ, ಚಳ್ಳಕೆರೆ ತಾಲ್ಲೂಕಿನ ನೇರಲಕುಂಟೆ, ನನ್ನಿವಾಳ, ಸಿದ್ದೇಶ್ವರಗುಡ್ಡ ಪ್ರದೇಶಗಳು ಪ್ರಾಗೈತಿಹಾಸಿಕ ಸಂಸ್ಕೃತಿಯ ಕುರುಹುಗಳನ್ನು ಹೊಂದಿವೆ. ಇವುಗಳಲ್ಲಿ ಕೆಲವು ಪ್ರದೇಶಗಳು ಚಿತ್ರಕಲೆಯ ನೆಲೆಗಳನ್ನು ಹೊಂದಿದ್ದು, ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಚಿತ್ರದುರ್ಗ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ ಬೇರೆ ಬೇರೆ ಅರಸರ, ನಾಯಕರ, ಪಾಳೆಗಾರರ ಆಳ್ವಿಕೆಗೆ ಒಳಪಟ್ಟು ವಿಭಿನ್ನ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಪ್ರದೇಶವಾಗಿದೆ. ಅಲ್ಲದೆ ಈ ಪ್ರದೇಶದಲ್ಲಿ ಚಿತ್ರಕಲೆ ಆದಿಮಾನವರ ಕಾಲದಿಂದ ಇಂದಿನವರೆಗೆ ಬದಲಾವಣೆಗಳನ್ನು ಹೊಂದುತ್ತಾ ವೈವಿಧ್ಯಮಯವಾಗಿ ಉಳಿದುಕೊಂಡು ಬಂದಿದೆ. ಚಿತ್ರಕಲೆಯ ಜೊತೆ ಶಿಲ್ಪ, ವಾಸ್ತುಕಲೆಗಳಂತಹ ಲಲಿತಕಲೆಗಳೂ ಸಹಿತ ಈ ಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆದುಬಂದಿವೆ. ಮೌರ್ಯರ ಕಾಲದಿಂದ ಆರಂಭಿಸಿ ಚಿತ್ರದುರ್ಗದ ನಾಯಕರವರೆಗೆ ಹಲವಾರು ರಾಜ್ಯಮನೆತನಗಳು ಆಳ್ವಿಕೆ ಮಾಡಿದ ಸಂದರ್ಭದಲ್ಲಿ ಅವರ ಅಭಿರುಚಿಗನುಸಾರವಾಗಿ ಲಲಿತಕಲೆಗಳು ಈ ಪ್ರದೇಶದಲ್ಲಿ ಬೆಳೆದುಬಂದಿವೆ. ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆಕೊತ್ತಲುಗಳು, ಸಾಹಿತ್ಯ ಮತ್ತು ಚಿತ್ರಕಲಾ ಪ್ರಕಾರಗಳು ಈ ಪ್ರದೇಶದ ವಿವಿಧ ಕಾಲಘಟ್ಟಗಳಲ್ಲಿ ಯಾವ ರೀತಿಯಲ್ಲಿ ಬೆಳವಣಿಗೆ ಹೊಂದಿದವು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶವು ಪ್ರಸ್ತುತ ಅಧ್ಯಯನದಲ್ಲಿದೆ. ಇದರ ಜೊತೆಗೆ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಹಿನ್ನೆಲೆಯನ್ನು ಆ ಕಾಲದ ಸಂಸ್ಕೃತಿಯೊಂದಿಗೆ ಬಿಂಬಿಸುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ಚಿತ್ರದುರ್ಗ ಪ್ರದೇಶವು ಹಲವಾರು ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳನ್ನು ಹೊಂದಿದೆ. ಕೆಲವು ಚಿತ್ರದುರ್ಗ ಪ್ರದೇಶದಲ್ಲಿ ಮಾತ್ರವಲ್ಲದೆ ಈ ಜಿಲ್ಲೆಯಾದ್ಯಂತ ಮೊಳಕಾಲ್ಮೂರು, ಚೆಳ್ಳಕೆರೆ, ಹೊಸದುರ್ಗ, ಹಿರಿಯೂರು, ಹೊಳಲ್ಕೆರೆ ತಾಲೂಕುಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು ಕಂಡುಬಂದಿವೆ. ಪ್ರತಿಯೊಂದು ತಾಲೂಕುಗಳಲ್ಲಿಯೂ ವೈವಿಧ್ಯಮಯವಾದ ಚಿತ್ರಗಳು ರಚನೆಗೊಂಡಿವೆ. ಕೆಲವು ನೆಲೆಗಳಲ್ಲಿ ಕುಟ್ಟಿದ, ಕೊರೆದ ವರ್ಣರಹಿತ ಚಿತ್ರಗಳಲ್ಲದೇ ಗುಹೆಗಳಲ್ಲಿ ರಚಿಸಿದ ವರ್ಣಚಿತ್ರಗಳೂ ಸಹಿತ ಕಂಡುಬಂದಿವೆ. ಮತ್ತೆ ಕೆಲವು ನೆಲೆಗಳಲ್ಲಿ ಕೆಲವು ಬಯಲುಬಂಡೆ ಚಿತ್ರಗಳು ಇಲ್ಲವೆ ವರ್ಣಚಿತ್ರಗಳು ಮಾತ್ರವೆ ರಚನೆಯಾಗಿವೆ. ಈ ಚಿತ್ರಗಳ ವಸ್ತುವಿಷಯವು ವೈವಿಧ್ಯತೆಯಿಂದ ಕೂಡಿದೆ. ಕೆಲವು ಕಡೆಗೆ ಗೂಳಿಗಳು, ಜಿಂಕೆಗಳು, ಕಾಡುಹಂದಿಗಳು, ಮನುಷ್ಯರು, ಬೇಟೆಯ ದೃಶ್ಯಗಳು ಕಂಡುಬಂದರೆ ಮತ್ತೆ ಕೆಲವು ನೆಲೆಗಳಲ್ಲಿ ವೈವಿಧ್ಯಮಯ ಪ್ರಾಣಿಗಳ ಜೊತೆಗೆ ಪಕ್ಷಿ ಸಂಕುಲಗಳು ರಚನೆಯಾಗಿವೆ. ಇದಲ್ಲದೆ ಮಾನವರ ವಿವಿಧ ರೀತಿಯ ಚಟುವಟಿಕೆಗಳು ಅಂದಿನ ಕಾಲದ ನಂಬಿಕೆ, ಆಚರಣೆಗಳು ಚಿತ್ರಗಳಲ್ಲಿ

ಅನಾವರಣಗೊಂಡಿವೆ. ಇವುಗಳ ಜೊತೆಗೆ ತೇರಿನಂತಹ ವಿನ್ಯಾಸಗಳು ಗುಡಿಗೋಪುರಗಳು, ಧ್ವಜದ ಮಾದರಿಗಳು, ಉತ್ಸವದ ಸಮೂಹಗಳು ರಚನೆಯಾಗಿರುವುದು ಕಾಲಘಟ್ಟವನ್ನು ಗುರುತಿಸುವಲ್ಲಿ ಆಶ್ಚರ್ಯ ಮೂಡಿಸುತ್ತದೆ. ಈ ಎಲ್ಲ ನೆಲೆಗಳ ಚಿತ್ರಗಳ ವಿವರಣೆ ಮತ್ತು ವಿಶ್ಲೇಷಣೆಯನ್ನು ವಿಮರ್ಶಾತ್ಮಕವಾಗಿ ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು ಒಂದು ನೆಲೆಗಿಂತ ಇನ್ನೊಂದು ನೆಲೆಯಲ್ಲಿ ವಿಭಿನ್ನತೆ ಹೊಂದಿವೆ. ಕೆಲವು ವಸ್ತುವಿಷಯದಲ್ಲಿ ಮಾತ್ರವಲ್ಲದೆ ಚಿತ್ರಗಳ ಆಕಾರ, ರಚನಾ ತಂತ್ರ ಮತ್ತು ನೆಲೆಗಳಲ್ಲಿ ವಿಭಿನ್ನತೆ ಕಂಡುಬರುತ್ತವೆ. ಈ ರೀತಿಯ ಬದಲಾವಣೆಗೆ ಆಯಾ ಸಮುದಾಯದ ನಂಬಿಕೆ, ಆಚರಣೆಗಳು ರಚನಾಕಾರರ ಉದ್ದೇಶಗಳು ಮತ್ತು ಸುತ್ತಲಿನ ಪರಿಸರ ಪ್ರೇರಣೆಯನ್ನೊದಗಿಸಿರಬಹುದು. ಹೀಗೆ ಚಿತ್ರಗಳು ಮತ್ತು ಚಿತ್ರ ನೆಲೆಗಳಲ್ಲಿರುವ ವಿಭಿನ್ನತೆ ಮತ್ತು ಹೋಲಿಕೆಗಳನ್ನು ತೌಲನಿಕವಾಗಿ ವಿವೇಚಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಪ್ರಾಗೈತಿಹಾಸಿಕ ಚಿತ್ರ ರಚನೆಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಚಿತ್ರಗಳು ಕಂಡುಬರುತ್ತವೆ. ಅವುಗಳೆಂದರೆ ಗುಹಾವರ್ಣ ಚಿತ್ರಗಳು ಮತ್ತು ಬಯಲುಬಂಡೆಯ ವರ್ಣರಹಿತ ಚಿತ್ರಗಳಾಗಿವೆ. ಈ ಎರಡು ಬಗೆಯ ಚಿತ್ರಗಳ ರಚನಾ ತಂತ್ರಗಾರಿಕೆ ಬೇರೆ ಬೇರೆಯಾಗಿದೆ. ಬಯಲುಬಂಡೆಯ ಚಿತ್ರಗಳಲ್ಲಿ ಮೊದಲಿಗೆ ಚಿತ್ರದ ಹೊರರೇಖೆಯನ್ನು ಕಲ್ಲಿನ ಮೇಲೆ ಮೂಡಿಸಿಕೊಂಡು ಚೂಪಾದ ಆಯುಧದಿಂದ ಅದರ ಮೇಲೆ ನಿಂತರವಾಗಿ ಕುಟ್ಟುವ ಇಲ್ಲವೆ ಕೊರೆಯುವ ಮೂಲಕ ಚಿತ್ರ ರಚನೆಯಾಗುತ್ತದೆ. ಅದರಂತೆ ಗುಹಾವರ್ಣ ಚಿತ್ರಗಳಲ್ಲಿ ಬಣ್ಣದ ದ್ರವ್ಯಗಳನ್ನು ಪ್ರಾಕೃತಿಕವಾಗಿ ಪಡೆದುಕೊಂಡು ಬೇರೆ ಬೇರೆ ವಿಧಾನಗಳಿಂದ ಚಿತ್ರಕ್ಕೆ ಲೇಪಿಸಲಾಗುತ್ತದೆ. ಚಿತ್ರದುರ್ಗ ಪ್ರದೇಶದಲ್ಲಿಯೂ ಈ ಎರಡು ರೀತಿಯ ಚಿತ್ರಗಳಿದ್ದು, ಇಲ್ಲಿನ ಜನರು ತಮ್ಮ ಚಿತ್ರ ರಚನೆಗಾಗಿ ಯಾವ ರೀತಿಯ ಪರಿಕರಗಳನ್ನು ಉಪಯೋಗಿಸಿದ್ದರು ಮತ್ತು ಚಿತ್ರಗಳ ರಚನಾ ಹಿನ್ನೆಲೆಯಲ್ಲಿ ಯಾವ ತಾಂತ್ರಿಕತೆಯನ್ನು ಅನುಸರಿಸುತ್ತಿದ್ದರು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶವು ಪ್ರಸ್ತುತ ಅಧ್ಯಯನದಲ್ಲಿದೆ. ಜೊತೆಗೆ ಈ ಪ್ರದೇಶದ ಪಾಗೈತಿಹಾಸಿಕ ಚಿತ್ರಕಲಾ ಶೈಲಿಯನ್ನು ಇನ್ನಿತರ ಪ್ರದೇಶಗಳ ಶೈಲಿಯೊಂದಿಗೆ ತೌಲನಿಕವಾಗಿ ವಿವೇಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು :

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚಿಗಷ್ಟೇ ನಂತರದಲ್ಲಿ ಅಧ್ಯಯನಗಳು ೯೦ರ ದಶಕದಲ್ಲಿ ತೀವ್ರಗೊಂಡಿದೆ. ೧೯೮೦ರ ದಶಕದಿಂದ ಇಲ್ಲಿಯವರೆಗೆ ಕರ್ನಾಟಕದಲ್ಲಿ

[illegible]

[illegible]

[illegible]

[illegible]

ನಡೆದ ಚಿತ್ರಕಲಾ ಅಧ್ಯಯನಗಳ ವಿವರವನ್ನು ಇಲ್ಲಿ ಸ್ಥೂಲವಾಗಿ ಸಮೀಕ್ಷಿಸಲಾಗಿದೆ. ೧೯೮೦ ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿನ ಚಿತ್ರಕಲೆಯ ಕುರಿತು ಸಂಶೋಧನಾತ್ಮಕ ಆಧ್ಯತೆಗಳು ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ.ಎಸ್.ಸಿ. ಪಾಟೀಲರು ೧೯೮೩ ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ** ಎಂಬ ಸಂಶೋಧನ ಕಿರು ಪ್ರಬಂಧ ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ.

೧೯೮೭ರಲ್ಲಿ ಡಾ. ಬಿ.ಕೆ.ಹಿರೇಮಠರವರು **ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ** ಎಂಬ ಪಿ.ಹೆಚ್.ಡಿ ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳು ಮೀಸಲಾಗಿದೆ. ಇದರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಚಿತ್ರಕಲೆಯನ್ನೇ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ** ಈ ಮಹಾಪ್ರಬಂಧವನ್ನು ಡಾ. ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು, ನಮ್ಮ ದೃಶ್ಯಕಲಾ ಕ್ಷೇತ್ರದ ಮೊದಲ ಸಂಶೋಧನ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**, ೧೯೯೭ರಲ್ಲಿ ಡಾ. ಸಂಪದಾ ಭಟ್‌ರವರ **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು**, ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**, ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿ ಅವರು ಕನ್ನಡ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ, ಒಂದು ಅಧ್ಯಯನ**, ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರ ಇವರ **ಕರ್ನಾಟಕದ ಜನಪದ ಶಿಲ್ಪಕಲೆ : ಒಂದು ಅಧ್ಯಯನ**, ೨೦೦೨ರಲ್ಲಿ ಡಾ. ಗೀರಿಶ್ ರವರ **ಬುಡಕಟ್ಟು ಚಿತ್ರಕಲೆ**, ಡಾ. ಲಕ್ಷ್ಮಿದೇವಿ ಗವಾಯಿರವರ **ಕಲಾವಿದ ಎಂ.ವಿ. ಚಟ್ಟಿಯವರ ಜೀವನ, ಕಲಾಕೃತಿಗಳು : ಒಂದು ಅಧ್ಯಯನ**, ೨೦೦೨ರಲ್ಲಿ ಡಾ. ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**, ೨೦೦೨ರಲ್ಲಿ ಡಾ. ಸೌಮ್ಯ ಅವರ **ಯಂತ್ರ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಪ್ರರಿ ತಾಂತ್ರಿಕಾ ಆರ್ಟಿಸ್ಟ್**, ೨೦೦೨ರಲ್ಲಿ ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಆಂಡ್ ಕಲರ್ ಎಕ್ಸಪೋಜಿಂಗ್ ಅಂಡ್ ಡೆವಲಪ್ಮೆಂಟ್ ಆಫ್ ರಾಗಾಮಾಲಾ ಆಂಡ್ ಕಾಂಟೆಂಪ್ರರಿ ಪೇಂಟಿಂಗ್**, ೨೦೦೩ರಲ್ಲಿ ಡಾ. ವೀಣಾ ಶೇಖರ್ ಮಂಡಿಸಿದ **ಎ ಸ್ಟಡಿ ಆಫ್**

[illegible]

ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ,(೧೭೮೦-೧೮೨೦) ೨೦೦೩ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ ಕಲಾವಿದ ಆರ್.ಎಂ.ಹಡಪದ ಒಂದು ಅಧ್ಯಯನ, ೨೦೦೩ರಲ್ಲಿ ಡಾ.ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಟಿಂಗ್ ೨೦೦೪ರಲ್ಲಿ ಡಾ.ವಿ.ಎಂ.ಬಾಗಾಯತ್ ಅವರ ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ, (೧೪೦೦-೧೮೦೦) ೨೦೦೪ರಲ್ಲಿ ಡಾ. ಶಿವಕುಮಾರ ಜಿ.ಒ. ಅವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಅಯಾಮಗಳು ೨೦೦೫ರಲ್ಲಿ ಶಿವಪ್ರಕಾಶ ತುಕ್ಕಣ್ಣವರ ಅವರ ಕರ್ನಾಟಕ ರಥಶಿಲ್ಪಕಲೆ ಹಾಗೂ ೨೦೦೫ರಲ್ಲಿ ಎಚ್.ಎನ್. ಚಿತ್ರಗಾರ, ಅವರ ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ೨೦೦೫ ರಲ್ಲಿ ಡಾ. ಶಶಿಕಲಾ ಹೂಗಾರ್ ರವರ ಕರ್ನಾಟದ ತೊಗಲು ಗೊಂಬೆ ಚಿತ್ರಕಲೆ ೨೦೦೫ ರಲ್ಲಿ ಡಾ. ಹೆಚ್.ಎನ್. ಚಿತ್ರಗಾರ್ ರವರ ಕರ್ನಾಟದ ಹಸ್ತ ಪ್ರತಿ ಚಿತ್ರಕಲೆ ೨೦೦೫ ರಲ್ಲಿ ಡಾ. ಅನಂದ ಪೂಜಾರ ಅವರ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ ಒಂದು ಅಧ್ಯಯನ ೨೦೦೫ ರಲ್ಲಿ ಡಾ. ಎಸ್.ವಿ. ವೆಂಕಟೇಶಯ್ಯ ರವರು ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ ೨೦೦೬ ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ ರಂಗೋಲಿ ಚಿತ್ರಕಲೆ, ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ ಸುರಪುರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ, ೨೦೦೮ರಲ್ಲಿ ಡಾ. ಟಿ.ಪಿ. ಲಕ್ಕಣ್ಣವರ ಅವರ ಕರ್ನಾಟಕ ಚಿತ್ರಕಲಾ ಸಾಹಿತ್ಯ : ಒಂದು ಅಧ್ಯಯನ, ೨೦೧೯ರಲ್ಲಿ ಡಾ. ಲಕ್ಷ್ಮೀಪತಿ ಅವರ ದಕ್ಷಿಣ ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ ಇವೆಲ್ಲವು ಚಿತ್ರಕಲೆಯ ಕುರಿತು ಬಂದ ಪಿಎಚ್.ಡಿ ಮಹಾಪ್ರಬಂಧಗಳಾಗಿವೆ.

೨೦೦೦ ರಲ್ಲಿ ಡಾ. ದೇವದಾಸ್ ಪ.ಕಳಸದ ಅವರ ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗ ವಿನ್ಯಾಸ ಒಂದು ಶಾಸ್ತ್ರೀಯ ಅಧ್ಯಯನ, ೨೦೦೫ ರಲ್ಲಿ ಡಾ. ಡಿ.ಎ. ಉಪಾಧ್ಯ ಅವರ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಾ. ಆನಂದ ಪೂಜಾರ ಅವರ ಕರಾವಳಿ ಕರ್ನಾಟಕದ ಕರಾವಳಿ ಚಿತ್ರಕಲೆ ಇವು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಡಿ.ಲಿಟ್ ಮಹಾಪ್ರಬಂಧಗಳಾಗಿವೆ.

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜಿ.ಎಸ್.ಖಂಡೇರಾವ್ : ಒಂದು ಅಧ್ಯಯನ, ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ ೨೦೦೫ ರಲ್ಲಿ ಶಂಕರ ಕುಂದಗೋಳ ಅವರ ಚಿತ್ರಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಮತ್ತು ಸಿ.ಡಿ. ಜಟ್ಟಣ್ಣವರ ಅವರ ಚಿತ್ರಕಲಾವಿದ

[illegible]

ಎಂ.ವಿ.ಮಿನಜಗಿಯವರ ಬದುಕು ಮತ್ತು ಕಲಾಕೃತಿಗಳು, ೨೦೦೬ ರಲ್ಲಿ ಸುಚಿತ್ರ ಲಿಂಗದಳ್ಳಿ ಇವರ ವಿಜಯನಗರದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಮತ್ತು ರವಿ ವಸರಾಮ ನಾಯಕ ಇವರ ಕಿನ್ನಾಳ ಕಲೆ ಒಂದು ಅಧ್ಯಯನ, ಉಮೇಶ್‌ರವರು ಜೈನ ಚಿತ್ರಕಲೆ, ಶೈಲಾ ಬರಡೋಲ ಅವರ ಅಜ್ಞಾತ ಕಲಾವಿದ ಸಂತ ಶುಭರಾಯ ಜೀವನ ಕಲಾಕೃತಿಗಳು, ೨೦೦೮ ರಲ್ಲಿ ಕೃಷ್ಣೇಗೌಡ ಹೆಚ್.ಎನ್. ಅವರು ಕರ್ನಾಟಕದಲ್ಲಿ ಟಿಬೇಟಿಯನ್ ಚಿತ್ರಕಲೆ, ಗಿರಿಜಾ ಎಸ್. ಬಿರಾದಾರ ಬಿಜಾಪುರ ಜಿಲ್ಲೆಯ ಚಿತ್ರಕಲೆ, ಮಾಹಾಕೋಟೆಶ್ವರಗೌಡಾ. ಎಸ್. ಪಾಟೀಲ ಅವರ ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಬಸವರಾಜ ಗವಿಮಠ ಅವರ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಕೃಷ್ಣವೇಣಿ ರವರ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಮಹಾಂತೇಶ ಪಲದಿನ್ನಿ ಅವರ ಲಜ್ಜಾಗೌರಿ ಶಿಲ್ಪಕಲೆ : ಒಂದು ದೃಶ್ಯಾತ್ಮಕ ಅಧ್ಯಯನ, ಸಂತೋಷ ಕುಲಕರ್ಣಿಯವರ ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಜಯರಾಜ ಚಿಕ್ಕಪಾಟೀಲ ಅವರ ಕರ್ನಾಟಕದಲ್ಲಿ ಸಾಂಸ್ಕೃತಿ ಜಾಹಿರಾತುಗಳ ಅಧ್ಯಯನ, ಮಹೇಶ ಉಮತಾರ ಅವರ ಬಿ,ಪಿ. ಬಾಯಿರಿ ಅವರ ಕಲಾ ಬದುಕು, ಸುರೇಶ ಎಸ್.ಬಡಗೇರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಚಿತ್ರಕಲೆ : ಒಂದು ಅಧ್ಯಯನ, ಯೋಗಿಶ್ .ಹೆಚ್ ಅರವ ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಈ ಪ್ರಬಂಧಗಳು ದೃಶ್ಯಕಲೆಯ ಕುರಿತಾಗಿ ಎಂ.ಫಿಲ್. ಸಂಶೋಧನ ಅಧ್ಯಯನಗಳಾಗಿವೆ. ಅಲ್ಲದೆ ಈಗ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ ಮತ್ತು ಕನ್ನಡ ವಿ.ವಿಗಳಲ್ಲಿ ಪಿ.ಹೆಚ್.ಡಿ ಅಧ್ಯಯನಕ್ಕೆ ಹಲವಾರು ವಿಧ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ಅನೇಕ ಬಿ.ಎಫ್.ಎ, ಬಿ.ವಿಎ ಪದವಿ ಹಾಗೂ ಎಮ್.ಎಫ್.ಎ, ಎಂ.ವಿ.ಎ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯದ ಭಾಗವಾಗಿ ಕಿರು ಸಂಶೊಧನ ಪ್ರಬಂಧಗಳು ರಚನೆಯಾಗಿದ್ದು, ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೊಧನೆ ತೀವ್ರವಾಗಿ ಮುನ್ನಡೆಯುತ್ತಲಿದೆ.

ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ಕುರಿತು ಇದುವರೆಗೆ ನಡೆದ ಅಧ್ಯಯನಗಳು :

* ಅ. ಸುಂದರ ಅವರು ೧೯೮೩ರಲ್ಲಿ **'ಕರ್ನಾಟಕ ಪ್ರಾಗೈತಿಹಾಸಿಕ ಚಿತ್ರಕಲೆ'** ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳಾದ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಪರಿಸರದ ಗವಿವರ್ಣಚಿತ್ರ ಮತ್ತು ಬಯಲುಬಂಡೆ ಚಿತ್ರಗಳ ಬಗ್ಗೆ ಹಾಗೂ ಅಲ್ಲಿ ಸಿಕ್ಕಂತಹ ಮಣ್ಣಿನ ಪಾತ್ರೆಗಳು, ಆಯುಧಗಳು, ಆಭರಣಗಳು, ಮೃತ್ಯಪಾತ್ರೆಗಳು, ಶಿಲಾಗೋರಿಗಳು ಇತ್ಯಾದಿ ವಸ್ತುಗಳನ್ನು ಸಂಶೋಧನೆ ಮಾಡಿ ವರದಿ ಮಾಡಿದಾರೆ.

* ಶ್ರೀಶೈಲ ಆರಾಧ್ಯ ಅವರು ತಾವೇ ಬಿಡುಗಡೆ ಮಾಡಿದ **'ಸಂಶೋಧನೆ ಹಾದಿಯಲ್ಲಿ'** ಎಂಬ ಪುಸ್ತಕದಲ್ಲಿ ಚಿತ್ರದುರ್ಗ ಜಿಲ್ಲೆ ಪ್ರಾಗೈತಿಹಾಸಿಕ ಚಿತ್ರಕಲೆಯ ಒಟ್ಟು ಮಾಹಿತಿಯನ್ನು ಕಟ್ಟಿಕೊಟ್ಟಿದ್ದಾರೆ.

* ಪಿ.ಆರ್. ತಿಪ್ಪೇಸ್ವಾಮಿ ಅವರ ೧೯೯೪ರ **'ಕರ್ನಾಟಕ ಪ್ರಾಗೈತಿಹಾಸಿಕ ಕಾಲದ**

ಚಿತ್ರಕಲೆ' ಎಂಬ ಗ್ರಂಥದಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ಕುರಿತು ಸಮಗ್ರವಾಗಿ ಉಲ್ಲೇಖಿಸಿದ್ದಾರೆ.

* ಎಚ್. ತಿಪ್ಪೇಸ್ವಾಮಿಯವರು ೨೦೦೦ರಲ್ಲಿ **'ಇತಿಹಾಸ ಸಂಪುಟ-೧೫'** ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕು ನುಂಕಿಮಲ್ಲೈ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ಕುರಿತು ಲೇಖನವಿದೆ.

* ಶಿವತಾರಕ ಕೆ.ಬಿ. ೨೦೦೧ರಲ್ಲಿ **'ಕರ್ನಾಟಕದ ಪುರಾತತ್ವ ನೆಲೆಗಳು'** ಗ್ರಂಥದಲ್ಲಿ ಚಿತ್ರದುರ್ಗದ ಕುರಿತು ವಿವರಿಸುವಾಗ ಸಾಂದರ್ಭಿಕವಾಗಿ ಗವಿವರ್ಣ ಚಿತ್ರಗಳು ಹಾಗೂ ಬಯಲುಬಂಡೆಯ ಚಿತ್ರಗಳ ಬಗ್ಗೆ ಉಲ್ಲೇಖಿಸಿದ್ದಾರೆ.

* ಜಯಣ್ಣ ಉಲ್ಲಾನಹಳ್ಳಿ ೨೦೦೨ರಲ್ಲಿ ಮೊಳಕಾಲ್ಮೂರು ತಾಲೂಕಿನ ಹಾನಗಲ್ಲು 'ಇತಿಹಾಸ ದರ್ಶನ-೧೭', ಮೊಳಕಾಲ್ಮೂರು ತಾಲೂಕಿನ ಹಾನಗಲ್ಲಿನಲ್ಲಿ ಉತ್ಖನನ ಮಾಡಿ ಸಂದರ್ಭದಲ್ಲಿ ಅಲ್ಲಿ ಸಿಕ್ಕ ಮಡಿಕೆ ಚೂರುಗಳು, ಗೊಂಬೆಗಳು, ಮಣಿಗಳ ಕುರಿತು ವಿವರಿಸಿದ್ದಾರೆ.

* ಡಾ. ಯಾದಪ್ಪ ಪರದೇಶಿ ೨೦೦೧ರಲ್ಲಿ **'ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಒಂದು ಅಧ್ಯಯನ'**, ಪಿಎಚ್.ಡಿ ಎಂಬ ಮ.ಪ್ರದಲ್ಲಿ ಕರ್ನಾಟಕದಲ್ಲಿನ ಪ್ರಾಗೈತಿಹಾಸಿಕ ಚಿತ್ರಕಲೆಯ ಕುರಿತು ಹೇಳುವಾಗ ಚಿತ್ರದುರ್ಗದ ಪ್ರಾಗೈತಿಹಾಸಿಕ ಚಿತ್ರಗಳ ವೈವಿಧ್ಯತೆಯನ್ನು ವಿವೇಚಿಸಿದ್ದಾರೆ.

* ಪ್ರೊ. ಲಕ್ಷ್ಮಣ ತೆಲಗಾವಿ ೧೯೮೭ರಲ್ಲಿ **'ಹರತಿಸಿರಿ'** ಎಂಬ ಗ್ರಂಥದಲ್ಲಿ ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು ಎಂಬ ಅಧ್ಯಾಯದಲ್ಲಿ ಚಿತ್ರದುರ್ಗದಲ್ಲಿ ಸಂಶೋಧನೆ ಸಮಯದಲ್ಲಿ ಮೃತ್‌ಪಾತ್ರೆಗಳು, ಶಿಲಾ ನಿವೇಶನಗಳು, ಶಿಲಾಗೋರಿಗಳು ಹಾಗೂ ಗವಿವರ್ಣಚಿತ್ರಗಳು ಮತ್ತು ಬಯಲುಬಂಡೆಯ ಚಿತ್ರಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಿದ್ದಾರೆ.

* ಪ್ರೊ. ಶೇಕ್ ಅಲಿ, (ಸಂ), **'ಕರ್ನಾಟಕ ಚರಿತ್ರೆ' ಸಂಪುಟ-೧,** ಅಧ್ಯಾಯ ಆರರಲ್ಲಿ ಪ್ರಾಗೈತಿಹಾಸಿಕ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ ಎಂಬ ಅಧ್ಯಾಯದಲ್ಲಿ ಚಿತ್ರದುರ್ಗ ಜಿಲ್ಲೆಯ ಇತಿಹಾಸ ಪೂರ್ವ ಕಾಲದ ಚಿತ್ರಗಳು, ಮೃತ್‌ಪಾತ್ರೆಗಳು, ಶಿಲಾಗೋರಿಗಳು, ಮಣ್ಣಿನ ಪಾತ್ರೆಗಳು ಹಾಗೂ ಶಿಲಾಯುಧಗಳ ಹಾಗೂ ಅವುಗಳ ರಚನಾ ತಂತ್ರಗಾರಿಕೆ ಮತ್ತು ವಿಧಾನಗಳ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆ.

* ಡಾ. ಎಸ್.ಸಿ. ಪಾಟೀಲ ಅವರ ೧೯೯೩ರಲ್ಲಿ **'ಕರ್ನಾಟಕದ ಜನಪದ ಚಿತ್ರಕಲೆ'**, ಅಧ್ಯಾಯ ಮೂರರಲ್ಲಿ ಕರ್ನಾಟಕದ ಪ್ರಾಚೀನ ಚಿತ್ರಕಲೆ ಕುರಿತು ವಿವೇಚಿಸುವಾಗ ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ಕುರಿತು ವಿವರಿಸಿದ್ದಾರೆ.

* ಪಿ.ಆರ್. ತಿಪ್ಪೇಸ್ವಾಮಿ ಅವರು ೧೯೯೪ರ **'ಕಲಾ ಕೋಶ'**, ಎಂಬ ಗ್ರಂಥದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ಕುರಿತು ವಿವೇಚಿಸಿದ್ದಾರೆ.

[illegible]

* ಡಾ. ಶಿವಾನಂದ ಬಂಟನೂರ ಅವರ ೨೦೦೨ರಲ್ಲಿ **'ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ' ಒಂದು ಅಧ್ಯಯನ,** ಪಿಎಚ್.ಡಿ, ಮ.ಪ್ರದಲ್ಲಿ ಪ್ರಾಚಿನ ಶಿಲ್ಪಗಳ ಕುರಿತು ವಿವೇಚಿಸುವಾಗ ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಶಿಲ್ಪಗಳ ವಿವರಣೆಯನ್ನು ನೀಡಿದ್ದಾರೆ.

* ಡಾ. ಆರ್. ಗೋಪಾಲ್, (ಸಂ) ಅವರು ೨೦೦೫ರಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದಿಂದ ಪ್ರಕಟಗೊಂಡ **'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ',** ಎಂಬ ಸಂಪಾದನಾ ಗ್ರಂಥದಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಶಿಲ್ಪಕಲೆ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಕುರಿತಾದ ಸಮಗ್ರ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಭಾರತಾದಾದ್ಯಂತ ಪ್ರಾಗೈತಿಹಾಸಿಕ ಕಾಲದಿಂದಲೂ ಆದಿಮಾನವರು ಕಾಡಿನೊಂದಿಗೆ ಜೀವನ ಬೆಸೆದುಕೊಂಡು ಇತಿಹಾಸದ ಆರಂಭದವರೆಗೆ ಬೆಳವಣಿಗೆಯ ಮಾರ್ಪಾಡು ಹೊಂದಿದ್ದಾನೆ. ಇಂತಹ ವಿಶಿಷ್ಟವಾದ ನೆಲೆಗಳು ದೇಶದ ಅನೇಕ ಕಡೆಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಅನೇಕ ರಾಜ್ಯಗಳಲ್ಲಿ ಕಂಡುಬಂದಿವೆ. ಅದೇ ರೀತಿ ಕರ್ನಾಟಕದಲ್ಲಿಯ ಹಲವು ಜಿಲ್ಲೆಗಳಲ್ಲಿಯ ಪ್ರಾಗೈತಿಹಾಸಿಕ ನೆಲೆಗಳು ಕಂಡುಬರುತ್ತವೆ. ಇತಿಹಾಸದಲ್ಲಿ ತನ್ನನ್ನು ಗುರ್ತಿಸಿಕೊಂಡಿರುವ ಚಿತ್ರದುರ್ಗವು ಪ್ರಾಗೈತಿಹಾಸಿಕ ಚಿತ್ರಕಲೆಯಲ್ಲೂ ಅಪರೂಪವಾದ ಕೊಡುಗೆಯನ್ನು ನೀಡಿದೆ. ಈ ಪ್ರದೇಶದ ಪ್ರಾಗೈತಿಹಾಸಿಕ ನೆಲೆಗಳೆಂದರೆ ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ಪ್ರಸ್ತುತ ಪ್ರಬಂಧವು ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಬರುವ ಪ್ರಾಗೈತಿಹಾಸಕ ಸ್ಥಳಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳ ಬಗ್ಗೆ ವಿವರಣೆ ಕೊಡುವುದರ ಜೊತೆಗೆ ಸಂಪ್ರಬಂಧದ ಸಮಷ್ಟಿ ಆಶಯವನ್ನು ಅನಾವರಣಗೊಳಿಸಲಾಗುತ್ತದೆ. ಅಧ್ಯಯನಕ್ಕಾಗಿ ಆರಿಸಿಕೊಂಡಿರುವ ಆಕರ ಮಾಧ್ಯಮಗಳು ವ್ಯಾಪ್ತಿ ವೈಧಾನಿಕತೆಗಳನ್ನು ಈ ಭಾಗದಲ್ಲಿ ಪರಿಚಯ ಮಾಡಿಕೊಡಲಾಗುತ್ತದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ಹೇಳಲಾಗಿದೆ.

ಅಧ್ಯಾಯ ಎರಡರಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕತೆ ಮತ್ತು ಸಾಂಸ್ಕೃತಿಕ ಪರಿಸರದ ಬಗ್ಗೆ ಹೇಳಲಾಗಿದೆ. ಜಿಲ್ಲೆಯ ಪ್ರತಿ ತಾಲೂಕುವಾರು ಬರುವ ಪ್ರಾಗೈತಿಹಾಸಿಕ ನೆಲೆಗಳ ಭೌಗೋಳಿಕ ಲಕ್ಷಣ, ಅಲ್ಲಿ ದೊರೆತ ಶಿಲಾಯುಧ, ಉಪಕರಣ, ಶಿಲಾಗೋರಿಗಳು,

ವಾಸದ ನೆಲೆ, ಮೃತ್ ಪಾತ್ರೆಗಳು, ಹಾಗೂ ಚಿತ್ರಗಳಲ್ಲದೆ ಚಿತ್ರದುರ್ಗದ ಸ್ಥಳನಾಮ, ಅಲ್ಲಿನ ನೆಲ-ಜಲ, ಬೆಟ್ಟ-ಗುಡ್ಡ, ನದಿ-ಸರೋವರಗಳ ಪ್ರಾಚೀನದ ಬಗ್ಗೆ ಹೇಳಲಾಗಿದೆ. ಅಲ್ಲದೆ ಚಿತ್ರದುರ್ಗದ ಪರಂಪರೆ, ಆಡಳಿತ ವ್ಯವಸ್ಥೆ, ಪ್ರಮುಖ ಅರಸರು, ಅವರು ನಿರ್ಮಿಸಿದ ದೇವಾಲಯ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಚಿತ್ರಕಲೆಗಳನ್ನು ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ತಿಳಿಸಿಕೊಡಲಾಗಿದೆ.

ಅಧ್ಯಾಯ ಮೂರರಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳು, ಪ್ರತಿ ನೆಲೆಗಳ ಚಿತ್ರಗಳ ವಸ್ತುವಿಷಯ, ಚಿತ್ರಗಳ ವಿವರಣೆ ವಿಶಿಷ್ಟತೆಗಳನ್ನು ಕಟ್ಟಿಕೊಡಲಾಗಿದೆ. ಇಲ್ಲಿ ಪ್ರತಿ ತಾಲೂಕು, ಅವುಗಳಲ್ಲಿನ ನೆಲೆಗಳು, ನೆಲೆಗಳಲ್ಲಿನ ಗುಹೆಗಳು, ಶಿಲಾಶ್ರಯಗಳು, ಬಯಲುಬಂಡೆಯ ಚಿತ್ರಗಳು ಎಲ್ಲವನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಕಲೆಯ ವಸ್ತುವಿಷಯಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಪ್ರತಿಯೊಂದು ಸ್ಥಳದಲ್ಲಿ ಬರುವ ಗವಿವರ್ಣಚಿತ್ರ, ಬಯಲುಬಂಡೆಯ ಚಿತ್ರಗಳ ವಿವರಣೆಯ ಜೊತೆಗೆ ಸ್ಥೂಲವಾಗಿ ಚಿತ್ರಗಳ ಸಾಮ್ಯತೆ, ವೈರುಧ್ಯ ಮುಂತಾದ ಅಂಶಗಳನ್ನು ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ವಿವಿಧ ಬಗೆಯ ಸಾಂಕೇತಿಕ ಚಿತ್ರಗಳು ಅದರಲ್ಲಿ ಇರಬಹುದಾದ ಕೆಲವು ನಿಗೂಢ ನಂಬಿಕೆಗಳು, ಸಮೂಹ ಜೀವನ, ಕೃಷಿಕ ಜೀವನ, ಪಶುಸಂಗೋಪನೆ ಮುಂತಾದ ಚಿತ್ರಗಳ ಕುರಿತಾಗಿಯು ತೌಲನಿಕವಾಗಿ ಗಮನಿಸಿರುವುದು ಪ್ರಸ್ತುತ ಅಧ್ಯಯನದಲ್ಲಿದೆ.

ಅಧ್ಯಾಯ ಐದರಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ಕುರಿತಾದ ಗವಿವರ್ಣ ರೇಖಾಚಿತ್ರಗಳು ಹಾಗೂ ಬಯಲುಬಂಡೆಗಳ ಮೇಲಿನ ಕುಟ್ಟಿಕೊರೆದ ರೇಖಾಚಿತ್ರಗಳ ರಚನಾ ತಂತ್ರಗಾರಿಕೆ, ಬಣ್ಣಗಾರಿಕೆ ಮತ್ತು ಶೈಲಿಗಳನ್ನು ಒಳಗೊಂಡಿರುವುದರ ಜೊತೆಗೆ ಅವುಗಳ ಸಿದ್ಧತಾ ವಿದಿವಿಧಾನಗಳನ್ನು ಹಾಗೂ ಪರಿಕರಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಂಪ್ರಬಂಧದ ಸಮಷ್ಠಿ ಆಶಯಗಳನ್ನು ಓರೆಗೆ ಹಚ್ಚುವ ಸಮಾರೋಪ ಭಾಗವನ್ನು ಒಳಗೊಂಡಿದೆ. ಅಧ್ಯಯನದುದ್ದಕ್ಕೂ ಕಂಡುಕೊಂಡ ವಿಚಾರಗಳನ್ನು, ಅಂಶಗಳನ್ನು ಸಮರ್ಪಕವಾಗಿ, ವಿಶ್ಲೇಷಣಾತ್ಮಕವಾಗಿ ಬಿಂಬಿಸುವಂತಹದಾಗಿದೆ. ಎಲ್ಲಾ ಅಧ್ಯಾಯಗಳಲ್ಲಿ ಚರ್ಚಿಸಿದ ವಿಷಯ ವಸ್ತುಗಳನ್ನು ಮಾಹಿತಿಗಳನ್ನು ಫಲಿತಗಳ ರೂಪದಲ್ಲಿ ಕೊಡಲಾಗುತ್ತದೆ.

ಅಧ್ಯಯನದ ವಿಧಾನ :

ಪ್ರಸ್ತುತ ಅಧಯಯನಕ್ಕೆ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗಿ

೨. ಆನುಷಂಗಿಕ ಆಕರ ಸಾಮಗ್ರಿ

[illegible]

೧. ಮೂಲ ಆಕರ ಸಾಮಗ್ರಿ :

ಕ್ಷೇತ್ರಕಾರ್ಯ :

ಸಂಶೊಧನೆಗೆ ಮೂಲ ಆಕರ ಸಾಮಗ್ರಿ ಅತಿ ಮುಖ್ಯವಾದದ್ದು. ಆದಿಮಾನವರು ನೆಲೆಸಿದ ಸ್ಥಳಗಳ ಮಾಹಿತಿ ಪದೆದು ಆಯಾ ಬೆಟ್ಟಗಳಿಗೆ ಖುದ್ದಾಗಿ ಹೋಗಿ ಸ್ಥಳ ವೀಕ್ಷಣೆ ಮಾಡಲಾಗಿದೆ. ಅಲ್ಲಿ ಬರೆದ ರೇಖಾಚಿತ್ರ, ವರ್ಣಚಿತ್ರಗಳನ್ನು ಹಾಗೂ ಬಯಲು ಬಂಡೆಗಳ ಮೇಲೆ ಕುಟ್ಟಿಕೊರೆದ ಚಿತ್ರಗಳನ್ನು ಛಾಯಚಿತ್ರಣ ಮಾಡಲಾಗಿದೆ. ನಂತರ ಸ್ಥಳ ವೀಕ್ಷಣೆ ಸಂದಂರ್ಭದಲ್ಲಿ ಸಂಬಂಧಪಟ್ಟ ಗ್ರಾಮದ ಹಿರಿಯರನ್ನು ಸಂದರ್ಶನಮಾಡಿ ಆದಿಮಾನವರು ರಚಿಸಿದ ಕಲ್ಲಾಸರೆ ವರ್ಣಚಿತ್ರಗಳು, ವರ್ಣರಹಿತ ಚಿತ್ರಗಳು ಮತ್ತು ಕುಟ್ಟಿ ಕೊರೆದ ಚಿತ್ರಗಳ ಛಾಯಾಚಿತ್ರಣವನ್ನು ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಬಂಧಿಸಿದ ಹಲವಾರು ವಿದ್ವಾಂಸರ ಜೊತೆಗೆ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಕ್ರೂಢೀಕರಿಸಿ ಪ್ರಬಂಧದ ಅಧ್ಯಯನ ಕಾರ್ಯಗಳಲ್ಲೊಂದಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ :

ಸಂದರ್ಶನ, ಪ್ರಕಟಿತ, ಅಪ್ರಕಟಿತ ಪಿಎಚ್.ಡಿ, ಎಂಫಿಲ್, ಪ್ರಬಂಧಗಳು, ಗ್ರಂಥಗಳು, ಸಂಪುಟಗಳು, ಗೆಝಿಟಿಯರ್, ಮಾಸ ಪತ್ರಿಕೆಗಳು, ವಾರ ಪತ್ರಿಕೆಗಳು ದಿನ ಪತ್ರಿಕೆಗಳು, ಕಲಾ ವಿಮರ್ಶೆಗಳು, ಈ ಕಲೆಯ ಕುರಿತಾಗಿ ಉದ್ದೇಶಿತ ಪ್ರಕಟವಾದ ಲೇಖನಗಳನ್ನು ಬಳಸುವುದರ ಜೊತೆಗೆ ಪ್ರಾಗೈತಿಹಾಸಿಕ ಚಿತ್ರಕಲೆಯ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ ಪಟ್ಟಿಕೆಗಳನ್ನು ಮಾಡಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

* * * * *

[illegible]

[illegible]

[illegible]









ಅಧ್ಯಾಯ : ಎರಡು

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕತೆ, ಸಂಸ್ಕೃತಿ ಮತ್ತು ಪರಿಸರ

ಪ್ರಾಗೈತಿಹಾಸಿಕತೆ :

ಚಿತ್ರದುರ್ಗ ಪ್ರದೇಶವು ಪ್ರಾಚೀನ ಕಾಲದಿಂದ ಜನವಸತಿಯ ನೆಲೆಯಾಗಿತ್ತೆಂದು ತಿಳಿದುಬರುತ್ತದೆ. ಈ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಪತ್ತೆಯಾಗಿದ್ದು, ಅಲ್ಲಿ ಆ ಕಾಲದ ಜನರು ರಚಿಸಿದ ಕಲಾತ್ಮಕ ಆಯುಧಗಳು, ಮೃತ್‌ಪಾತ್ರೆಗಳು, ಶಿಲಾಗೋರಿಗಳು ಮತ್ತು ಶಿಲಾಶ್ರಗಳಲ್ಲಿ ಚಿತ್ರಕಲಾಕೃತಿಗಳು ಕಂಡುಬಂದಿವೆ. ಕೆಲವು ನೆಲೆಗಳಲ್ಲಿ ಆಯುಧಗಳ, ಪಾತ್ರೆಗಳು ಮತ್ತು ಶಿಲಾಗೋರಿಗಳ ಜೊತೆಗೆ ಚಿತ್ರಕಲಾಕೃತಿಗಳು ಸಹಿತ ಕಂಡುಬಂದರೆ ಕೆಲವು ನೆಲೆಗಳಲ್ಲಿ ಚಿತ್ರಗಳು ಕಂಡುಬಂದಿಲ್ಲ. ಪ್ರಾಗೈತಿಹಾಸಿಕ ಚಿತ್ರಗಳ ಬಗ್ಗೆ ಮುಂದಿನ ಅಧ್ಯಯನದಲ್ಲಿ ವಿಸ್ತಾರವಾಗಿ ವಿಶ್ಲೇಷಿಸುವ ಉದ್ದೇಶವಿದ್ದು, ಪ್ರಸ್ತುತ ಕೇವಲ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಕಂಡುಬಂದಿರುವ ಆಯುಧಗಳು, ಮೃತ್‌ಪಾತ್ರೆಗಳು, ಶಿಲಾಗೋರಿಗಳು ಮತ್ತು ಅವುಗಳ ಕಾಲಮಾನವನ್ನು ಮಾತ್ರ ಸ್ಥೂಲವಾಗಿ ಬಿಂಬಿಸಲಾಗಿದೆ.

ಚಿತ್ರದುರ್ಗ ಪ್ರದೇಶದಲ್ಲಿ ಇರುವ ಆರು ತಾಲೂಕುಗಳಲ್ಲಿಯೂ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿದ್ದು, ಇವು ಬೇರೆ ಬೇರೆ ಕಾಲಘಟ್ಟಕ್ಕೆ ಸಂಬಂಧಪಟ್ಟಿವೆ.[೧] ಚಿತ್ರದುರ್ಗ ತಾಲೂಕಿನಲ್ಲಿ ಚಿತ್ರದುರ್ಗದ ಇಂಗಳದಾಳ, ಕೂನಬೇವು, ಚಿಪ್ಪಿನಕೆರೆ, ಜಂಪಣ್ಣನಾಯಕನ ಕೋಟೆ, ತಮಟಗಲ್ಲು, ನೇರ್ಲಗುಂದಿ, ಚಂದ್ರವಳ್ಳಿ, ಸಂಗೇಣಹಳ್ಳಿಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಹಿಡಿಯಲ್ಪಟ್ಟಿವೆ. ಇಂಗಳದಾಳದ ಪ್ರಾಗೈತಿಹಾಸಿಕ ಸಂಸ್ಕೃತಿಯು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಆದಿಮಾನವರ ಆಯುಧಗಳ ಜೊತೆಗೆ

೧. ಕೆ.ಬಿ. ಶಿವತಾರಕ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೨೧ ರಿಂದ ೩೫

[illegible]

[illegible]

ಕಲಾತ್ಮಕ ಶಿಲಾಗೋರಿಗಳು ಪತ್ತೆಯಾಗಿವೆ. ಕೂನಬೇವು ಎಂಬಲ್ಲಿ ಕಂಡುಹಿಡಿಲ್ಪಟ್ಟ ನೆಲೆಯು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದಾಗಿದೆ. ಇಲ್ಲಿ ಕಲಾತ್ಮಕ ಕಲ್ಮನೆಗಳು ಕಂಡುಬಂದಿವೆ. ಚಂದ್ರವಳ್ಳಿಯ ನೆಲೆಯು ನೂತನ ಶಿಲಾಯುಗ, ಶಿಲಾತಾಮ್ರಯುಗ ಮತ್ತು ಬೃಹತ್‌ಶಿಲಾಯುಗಕ್ಕೂ ಸಂಬಂಧಪಟ್ಟ ಸಂಸ್ಕೃತಿಯನ್ನು ಹೊಂದಿದ್ದು, ಇಲ್ಲಿ ಕಲ್ಲಿನ ಆಯುಧಗಳು, ಮೃತ್‌ಪಾತ್ರೆಗಳು ಮತ್ತು ಶಿಲಾಶ್ರಯ ಚಿತ್ರಗಳು ಕಂಡುಬಂದಿವೆ.

ಚಿತ್ರದುರ್ಗ ತಾಲೂಕು ಹೆಚ್ಚಿನ ಪ್ರಾಗೈತಿಹಾಸಿಕ ನೆಲೆಗಳನ್ನು ಹೊಂದಿದ್ದು, ಇಲ್ಲಿನ ಸಂಸ್ಕೃತಿಯು ನೂತನ ಶಿಲಾಯುಗ, ಶಿಲಾತಾಮ್ರಯುಗ ಮತ್ತು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿವೆ. ಇಲ್ಲಿನ ನೆಲೆಗಳಲ್ಲಿಯೂ ಸಹಿತ ಶಿಲಾಯುಧಗಳು ಮೃತ್‌ಪಾತ್ರೆಗಳು ಮತ್ತು ಬಂಡೆಯ ಚಿತ್ರಗಳು, ಗುಹಾವರ್ಣಚಿತ್ರಗಳು ಕಂಡುಬಂದಿವೆ. ಚಿಪ್ಪಿನಕೆರೆ ಎಂಬ ನೆಲೆಯು ಶಿಲಾತಾಮ್ರಯುಗಕ್ಕೆ ಸಂಬಂಧಪಟ್ಟಿದ್ದು, ಈ ನೆಲೆಯಲ್ಲಿ ಶಿಲಾಯುಧಗಳು ಕಂಡುಬಂದಿವೆ. ಅದರಂತೆ ತಮಟಗಲ್ಲು, ನೇರ್ಲಗುಂದಿ ಮತ್ತು ಜಂಪಣ್ಣನಾಯಕನ ಕೋಟೆ ಪರಿಸರದ ಸಂಸ್ಕೃತಿಗಳು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿಯೂ ಕಲಾತ್ಮಕ ಶಿಲಾಗೋರಿಗಳು ಶೋಧಿಸಲ್ಪಟ್ಟಿವೆ. ಚಂದ್ರವಳ್ಳಿ ಪರಿಸರವು ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಕಲಾತ್ಮಕ ಮೃತ್‌ಪಾತ್ರೆಗಳ ಜೊತೆಗೆ ಆಭರಣಗಳು, ಆಯುಧಗಳು, ನಿತ್ಯೋಪಯೋಗಿ ವಸ್ತುಗಳು ಮತ್ತು ಬಯಲುಬಂಡೆ ಚಿತ್ರಗಳು ಹಾಗೂ ಗುಹಾವರ್ಣಚಿತ್ರಗಳು ಕಂಡುಬಂದಿವೆ. ಸಂಗೇನಹಳ್ಳಿ ಪರಿಸರವು ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಕಲ್ಲಿನ ಗೋರಿಗಳು, ಶಿಲಾಯುಧಗಳು ಕಲಾತ್ಮಕ ಮಣ್ಣಿನ ಪಾತ್ರೆಗಳು, ಬಯಲುಬಂಡೆಯ ಚಿತ್ರಗಳು ಮತ್ತು ಬೂದಿದಿಬ್ಬ ದೊರಹಿಕಿವೆ.

ಚಳ್ಳಕೆರೆ ತಾಲೂಕಿನಲ್ಲಿ ಗಂಜಿಗುಂಟೆ, ಸಿದ್ದೇಶ್ವರಗುಡ್ಡ, ಚಿಕ್ಕಮಧುರೆ, ದೊಡ್ಡೇರಿ, ಪರಶುರಾಮಪುರ, ಯಾದಲಗಟ್ಟೆ ನೆಲೆಗಳಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಗಂಜಿಗುಂಟೆ ನೆಲೆಯು ಬೃಹತ್‌ಶಿಲಾಯುಗ ಕಾಲಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಕಲಾತ್ಮಕ ಕಲ್ಲು ಗೋರಿಗಳು ಕಂಡುಬಂದಿವೆ. ಚಿಕ್ಕಮಧುರೆ, ದೊಡ್ಡೇರಿ, ಪರಶುರಾಮಪುರ, ಯಾದಲಗಟ್ಟೆ ಎಂಬ ನೆಲೆಯಲ್ಲಿ ಕಂಡುಬಂದಿರುವ ಸಂಸ್ಕೃತಿಯು ನೂತನ ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಮಣ್ಣಿನ ಪಾತ್ರೆಗಳು, ಶಿಲಾಯುಧಗಳು, ಬೂದಿದಿಬ್ಬಗಳು ಕಂಡುಬಂದಿದ್ದು ಹಾಗೂ ಸಿದ್ದೇಶ್ವರಗುಡ್ಡದಲ್ಲಿ ಬಯಲುಬಂಡೆಯ ಚಿತ್ರಗಳು, ಕಂಡುಬಂದಿವೆ.

ಮೊಳಕಾಲ್ಮೂರು ತಾಲೂಕಿನಲ್ಲಿ ಜಟಿಂಗರಾಮೇಶ್ವರ, ಪೂಜಾರಹಟ್ಟಿ, ಬ್ರಹ್ಮಗಿರಿ, ಮೊಳಕಾಲ್ಮೂರು, ಹಳೆಕೆರೆ, ನುಂಕಿಮಲೈ, ಹಾನಗಲ್ಲುಗಳಲ್ಲಿ ಪ್ರಾಗೈತಿಹಾಸಿಕ ಕಾಲದ ನೆಲೆಗಳು ಕಂಡುಬಂದಿವೆ. ಜಟಂಗಿರಾಮೇಶ್ವರ ನೆಲೆಯು ನೂತನ ಶಿಲಾಯುಗ ಮತ್ತು ಶಿಲಾತಾಮ್ರಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಶಿಲಾಗೋರಿಗಳು, ಶಿಲಾಯುಧಗಳು, ಮಣ್ಣಿನ

[illegible]

[illegible]

[illegible]

[illegible]

[illegible]

ಪಾತ್ರೆಗಳು ಮತ್ತು ಆದಿಮಾನವರ ಗುಹಾವರ್ಣಚಿತ್ರಗಳು ಕಂಡುಬಂದಿವೆ. ನುಂಕಿಮಲೈ ಪರಿಸರವು ಸೂಕ್ಷ್ಮಶಿಲಾಯುಗ ಮತ್ತು ನೂತನಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಕಲ್ಗೋರಿಗಳು, ಶಿಲಾ ಉಪಕರಣಗಳು, ಕಲಾತ್ಮಕ ಮಡಿಕೆಯ ಚೂರುಗಳು ಕಂಡುಬಂದಿವೆ. ಗಡ್ಡೇರಿ ನೆಲೆಯಲ್ಲಿ ಕಂಡುಬಂದಿರುವ ಸಂಸ್ಕೃತಿಯು ನೂತನಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಕಲಾತ್ಮಕ ಕಲ್ಲಿನ ಗೋರಿಗಳು ಕಂಡುಬಂದಿವೆ. ಪೂಜಾರಹಟ್ಟಿ ಮತ್ತು ಸಂತೆಗುಡ್ಡ ಪರಿಸರವು ನೂತನಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿಯೂ ಕಲ್ಲಿನ ಗೋರಿಗಳು ಮತ್ತು ಮಡಿಕೆಯ ಚೂರುಗಳು ಕಂಡುಬಂದಿವೆ. ಮೊಳಕಾಲ್ಮೂರು ಪರಿಸರವು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಕಲ್ಲಿನ ಗೋರಿಗಳು ಕಂಡುಬಂದಿವೆ. ಹರಳಯ್ಯನಗುಡಿ, ಹಳೆಕೆರೆ, ಹಾನಗಲ್ಲು, ಬ್ರಹ್ಮಗಿರಿ ಈ ನೆಲೆಗಳ ಸಂಸ್ಕೃತಿಗಳು ಸೂಕ್ಷ್ಮಶಿಲಾಯುದ, ನೂತನಶಿಲಾಯುಗ, ಶಿಲಾತಾಮ್ರಯುಗ ಮತ್ತು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಈ ನೆಲೆಗಳಲ್ಲಿ ಜನವಸತಿಯ ಕುರುಹುಗಳಿದ್ದು, ಶಿಲೆಯ ಉಪಕರಣಗಳು ಕಲಾತ್ಮಕ ಮಡಿಕೆಯ ಚೂರುಗಳು, ಆದಿಮಾನವರ ಚಿತ್ರಗಳು ಮತ್ತು ಬ್ರಹ್ಮಗಿರಿಯಲ್ಲಿ ಬೂದಿದಿಬ್ಬ ಕಂಡುಬಂದಿವೆ.

ಹೊಸದುರ್ಗ ತಾಲೂಕಿನಲ್ಲಿ ಜಾನಕಲ್ಲು ಮತ್ತು ತಣಿಗೆಗಲ್ಲು ಸ್ಥಳಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿವೆ. ಈ ನೆಲೆಗಳು ಆದಿಹಳೆಯ ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಶಿಲಾಗೋರಿಗಳು, ಶಿಲಾಯುಧಗಳು, ಕಲಾತ್ಮಕ ಮೃತ್‌ಪಾತ್ರೆಗಳು ಹಾಗೂ ಆದಿಮಾನವರ ಬಂಡೆ ಮತ್ತು ಗುಹಾಚಿತ್ರಗಳು ಕಂಡುಬಂದಿವೆ.

ಹೊಳಲ್ಕೆರೆ ತಾಲೂಕಿನಲ್ಲಿ ತಾಳ್ಯ, ನಂದನಹೊಸೂರು, ಬೂದಿಪುರ, ಗಟ್ಟಿಹೊಸಹಳ್ಳಿ, ಹುಲಿಕೆರೆ ಸ್ಥಳಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿವೆ. ತಾಳ್ಯದ ನೆಲೆಯು ಆದಿಹಳೆಯ ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಶಿಲಾಗೋರಿಗಳು, ಶಿಲಾಯುಧಗಳು, ಮೃತ್‌ಪಾತ್ರೆಗಳು, ಬಯಲುಬಂಡೆಯ ಚಿತ್ರಗಳು ಕಂಡುಬಂದಿವೆ. ಬೂದಿಪುರ, ನಂದನಹೊಸೂರು ಮತ್ತು ಗಟ್ಟಿಹೊಸಹಳ್ಳಿಗಳಲ್ಲಿ ಕಂಡುಬಂದಿರುವ ಸಂಸ್ಕೃತಿಯು ಬೃಹತ್‌ಶಿಲಾಯುಗಕ್ಕೆ ಸಂಬಂಧಪಟ್ಟಿದ್ದು, ಇಲ್ಲಿ ಶಿಲಾಗೋರಿಗಳು, ಮೃತ್‌ಪಾತ್ರೆಗಳು, ಬಯಲುಬಂಡೆಯ ಚಿತ್ರಗಳು ಕಂಡುಬಂದಿವೆ. ಇತ್ತೀಚೆಗೆ ಹುಲಿಕೆರೆ ಎಂಬ ನೆಲೆಯಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿದ್ದು, ಮೃತ್‌ಪಾತ್ರೆಗಳು, ಕಲಾತ್ಮಕ ಮಡಿಕೆಯ ಚೂರುಗಳು, ಉಪಕರಣಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯು ಅತ್ಯಂತ ಪ್ರಾಚೀನ ಕಾಲದಿಂದಲೂ ಜನವಸತಿ ಹೊಂದಿದ ಪ್ರದೇಶವಾಗಿದ್ದು, ಅಂದಿನಿಂದಲೇ ಕಲಾಚಟುವಟಿಕೆಗಳನ್ನು ಹೊಂದಿದಂತಹ ಪ್ರದೇಶವಾಗಿದೆ.[೨] ನಾಗರಿಕತೆಯ ಹಂತದಲ್ಲಿ ಬೆಳವಣಿಗೆ ಹೊಂದಿದ ಪ್ರೌಢ ಕಲೆಗಳಿಗೆ ಈ ಪ್ರಾಗೈತಿಹಾಸಿಕ ಕಲಾ ಪ್ರಕಾರಗಳು ಅಡಿಪಾಯವನ್ನು ಒದಗಿಸಿರುವುದು ಕಂಡುಬರುತ್ತದೆ.

---

೨. ಕೆ.ಬಿ. ಶಿವತಾರಕ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೨೧ ರಿಂದ ೩೫

[illegible]

[illegible]

[illegible]

ಪ್ರಾಚೀನ ಸಂಸ್ಕೃತಿ :

ಚಿತ್ರದುರ್ಗ ಪ್ರದೇಶವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು, ಹಿಂದಿನಿಂದಲೂ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟಿದೆ. ತ್ರೇತಾಯುಗದಲ್ಲಿ ರಾವಣನು ಕೈಲಾಸ ಪರ್ವತವನ್ನು ಹೊತ್ತುತರುವಾಗ ನಂದಿಯ ಕೋಪಕ್ಕೆ ತುತ್ತಾಗಿ ನಂದಿ ರಾವಣನ್ನು ಇರಿಯಲು ಪ್ರಯತ್ನಿಸಿದಾಗ ಅವನಿಂದ ತಪ್ಪಿಸಿಕೊಂಡ ರಾವಣ ಇಲ್ಲಿ ಬೆಟ್ಟದ ಮೇಲೆ ಬಿದ್ದು, ಅವನ ಮನ ಪರಿವರ್ತನೆಯಾಗಿತ್ತೆಂದು, ಅದರಿಂದಲೆ ಇಲ್ಲಿ ಬೆಟ್ಟಗಳಿಗೆ ಚಿನ್ಮೂಲಾದ್ರಿ ಎಂದು ಹೆಸರಾಯಿತಂತೆ. ದ್ವಾಪರಯುಗದಲ್ಲಿ ಈ ಪ್ರದೇಶವನ್ನು ಹಿಡಿಂಬಾ ಕ್ಷೇತ್ರವಾಗಿದ್ದು, ಪಾಂಡವರು ವನವಾಸಕ್ಕೆ ಬಂದಾಗ ಭೀಮ ಹಿಡಿಂಬ ರಾಕ್ಷಸನನ್ನು ಕೊಂದು ಹಿಡಿಂಬೆಯನ್ನು ವಿವಾಹವಾದ ಹೇಳಿಕೆಗಳಿವೆ. ಈ ಪ್ರದೇಶದಲ್ಲಿ ಪಾಂಡವರು ಅನೇಕ ಶಿವಲಿಂಗಗಳನ್ನು ಸ್ಥಾಪಿಸಿದ್ದು, ತರುವಾಯ ಈ ಬೆಟ್ಟದಲ್ಲಿ ಹಿಡಿಂಬೇಶ್ವರ ದೇವಾಲಯವಿದೆ. ಹಾಗೂ ಪಾಂಡವರು ವಂಶಿಕ ಜನಮೋಜರಾಯ ಸರ್ಪಯಾಗಮಾಡಿ ಶ್ರೀ ಗೋಪಾಲಸ್ವಾಮಿ ದೇವಾಲಯ ಸ್ಥಾಪಿಸಿದನೆಂಬ ಉಲ್ಲೇಖಗಳಿವೆ. ಮುಂದೆ ಅಸರುಗಳ ಕಾಲಕ್ಕೆ ಚಿತ್ರದುರ್ಗ ಚಿಂಚನಕಲ್ಲು ಎಂದು ಕರೆಯಲ್ಪಟ್ಟಿದೆ.[೩]

ತೆಲಗು ಭಾಷೆಯಲ್ಲಿ ಚಿತ್ರಕಲ್‌ದುರ್ಗವೆಂದು ಕ್ರಿ.ಶ. ೧೨೮೬ರಲ್ಲಿ ಬೆಮ್ಮತ್ತನೂರು, ಕ್ರಿ.ಶ. ೧೬೯೮ರಲ್ಲಿ ಚಿನ್ಮನಗಿರಿದುರ್ಗ ಕ್ರಿ.ಶ. ೧೭೦೦ರಲ್ಲಿ ಸಿಂಗನಗಿರಿದುರ್ಗ, ಕ್ರಿ.ಶ. ೧೭೧೪ರಲ್ಲಿ ಚಿನನಗಿರಿದುರ್ಗ, ಕ್ರಿ.ಶ. ೧೭೩೦ರಲ್ಲಿ ಚಿಂತನಕಲ್ಲುದುರ್ಗ, ಕ್ರಿ.ಶ. ೧೮೭೦ರಲ್ಲಿ ಬುಕ್ಕನ ಪ್ರಕಾರ ಛತ್ರಕಲ್‌ದುರ್ಗವೆಂದು ಕರೆಯಲ್ಪಟ್ಟಿದೆ. ಕೃಷ್ಣದೇವರಾಯನ ಕಾಲದಲ್ಲಿ ಚಿಮಟದುರ್ಗ ಎಂತಲೂ ಆಯಾಗಾರರ ವಿವರದಲ್ಲಿ ಚಿನ್ಮುಲಾಗಿರಿದುರ್ಗ, ಸೂಳ್ಗಲ್ಲು, ಚಿನ್ಮತ್ತನೂರು ಪಟ್ಟಣ, ಪೇರುಮಾಳೆಪುರ, ಬ್ರಹ್ಮಗಿರಿ ಎಂದೆಲ್ಲ ಕರೆಯಲ್ಪಟ್ಟಿದೆ. ಆಂದ್ರ ಬೃತರ ಕಾಲದಲ್ಲಿ ಚಂದ್ರವಳ್ಳಿಯಂತಲು, ಟಿಪ್ಪುವಿನ ಕಾಲದಲ್ಲಿ ಫರ್ರಕಾಬಾದ ಎಂದು, ಬ್ರಿಟೀಷ್‌ರ ಅವಧಿಯಲ್ಲಿ ಚಿಟ್ಟಲುಡ್ರುಗ್ ಎಂದು ಕರೆಸಿಕೊಂಡು ಪ್ರಸ್ತುತದಲ್ಲಿ ಈ ಪ್ರದೇಶವು ಶಾಶ್ವತವಾಗಿ ಚಿತ್ರದುರ್ಗ ಎಂದು ಕರೆಯಲ್ಪಟ್ಟಿದೆ.[೪]

ಆಡಳಿತ :

ಇತಿಹಾಸ ಆರಂಭಿಕ ಕಾಲದಿಂದಲೂ ಚಿತ್ರದುರ್ಗ ಪ್ರದೇಶವನ್ನು ಅನೇಕ ರಾಜರುಗಳ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಈ ಪ್ರದೇಶಗಳಲ್ಲಿ ಸಿಕ್ಕ ಶಾಸನಗಳು, ಕೈಫಿಯತ್‌ಗಳು, ಹಸ್ತಪ್ರತಿಗಳಿಂದ ತಿಳಿದುಬರುತ್ತದೆ. ಮೌರ್ಯರ ಸಾಮ್ರಾಜ್ಯದಿಂದ ಮೊದಲುಗೊಂಡು ಶಾತವಾಹನರು, ನೊಳಂಬರು, ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರ

---

೩. ಡಾ. ಆರ್. ಗೋಪಾಲ್, (ಸಂ), ಸ್ಮಿತಾ ರೆಡ್ಡಿ ಡಿ, (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪುಟ, ೨೮೦

೪. ಡಾ. ಆರ್. ಗೋಪಾಲ್, (ಸಂ), ಸ್ಮಿತಾ ರೆಡ್ಡಿ ಡಿ, (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪುಟ, ೨೮೧

ಆಳ್ವಿಕೆಗೆ ಒಳಪಟ್ಟಿದ್ದು, ಮುಂದೆ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಆಳ್ವಿಕೆಗೆ ಒಳಪಟ್ಟು, ಸಾಮ್ರಾಜ್ಯದ ಭಾಗವಾಗಿದ್ದ ಚಿತ್ರದುರ್ಗವು ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೫೬೫ರಲ್ಲಿ ಪತನದ ನಂತರ ನಾಯಕರುಗಳ ಆಳ್ವಿಕೆಗೆ ಒಳಪಟ್ಟಿತ್ತು[೫] ಎಂಬುದನ್ನು ತಿಳಿಯಬಹುದು.

ಚಿತ್ರದುರ್ಗ ಪ್ರದೇಶವನ್ನಾಳಿದ ಪಾಳೆಗಾರರ ನಾಮವಳಿಗಳಲ್ಲಿ ಮೊದಲಿಗೆ ಮತ್ತಿತಿಮ್ಮಣ್ಣನಾಯಕ (೧೫೬೮-೧೫೮೮), ಓಬಣ್ಣನಾಯಕ (೧೫೮೮-೧೬೦೩), ಕಸ್ತೂರಿ ರಂಗಪ್ಪನಾಯಕ (೧೬೦೩-೧೬೫೨), ಇಮ್ಮಡಿ ಮದಕರಿ ನಾಯಕ (೧೬೫೨-೧೬೭೪), ಚಿಕ್ಕಣ್ಣನಾಯಕ (೧೬೭೪-೧೬೮೬), ಮುಮ್ಮಡಿಲಿಂಗಣ್ಣನಾಯಕ (೧೬೫೬-೧೬೮೯), ಬಿಚ್ಚುಗತ್ತಿ ಬರಮಣ್ಣನಾಯಕ (೧೬೮೯-೧೭೨೧), ಹಿರೆಮದಕರಿನಾಯಕ (೧೭೨೧-೧೭೪೮), ಕಸ್ತೂರಿರಂಗಪ್ಪ ನಾಯಕ (೧೭೪೮-೧೭೫೪), ರಾಜಾವೀರ ಮದಕರಿ ನಾಯಕ (೧೭೫೮-೧೭೭೯) ಒಟ್ಟು ೧೪ ಜನ ಪಾಳೆಗಾರರು ಆಳ್ವಿಕೆಯನ್ನು ನಡೆಸಿದ್ದಾರೆ. ಅಂತಿಮವಾಗಿ ರಾಜವೀರ ಮದಕರಿ ನಾಯಕನ ಆಳ್ವಿಕೆ ಮುಂದುವರೆದು ಕ್ರಿ.ಶ. ೧೭೭೯ರಲ್ಲಿ ಹೈದರ್‌ಅಲಿ ಆಕ್ರಮಣದಿಂದ ಚಿತ್ರದುರ್ಗ ನಾಯಕರ ಆಡಳಿತ ಪತನಹೊಂದಿತು.[೬] ಈಗಾಗಲೆ ತಿಳಿದಂತೆ ಸ್ವಾತಂತ್ರ ಚಳವಳಿಯ ಹೋರಾಟದಿಂದ ನಮ್ಮ ದೇಶಕ್ಕೆ ಸ್ವಾತಂತ್ರ ಪಡೆದು ಬ್ರಟೀಷರಿಂದ ಮುಕ್ತಿ ಹೊಂದಿ, ಪ್ರಸ್ತುತ ಅವಧಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದಿಂದ ಚಿತ್ರದುರ್ಗ ಜಿಲ್ಲೆ ಬೆಳವಣಿಗೆ ಹೊಂದುತ್ತಿದೆ.

ದೇವಾಲಯ ಮತ್ತು ವಾಸ್ತುಶಿಲ್ಪ :

ಕರ್ನಾಟಕವನ್ನು ಕ್ರಿ.ಶ. ೧೦-೧೨ನೇ ಶತಮಾನದವರೆಗೆ ಆಳಿದ ಕಲ್ಯಾಣ ಚಾಲುಕ್ಯರ ರಾಜವಂಶವು ಕರ್ನಾಟಕದ ಕಲಾಪ್ರಪಂಚಕ್ಕೆ ನೀಡಿದ ಕೊಡುಗೆ ಅತ್ಯಮೂಲ್ಯವಾಗಿದೆ. ಇವರ ಕಾಲದಲ್ಲಿ ಅನೇಕ ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಗಳು ನಿರ್ಮಾಣಗೊಂಡಿವೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ವಾಸ್ತುಶಿಲ್ಪ ಶೈಲಿಗಿಂತ ವಿಭಿನ್ನವಾಗಿದೆ. ವಿಶಾಲವಾದ ದೇವಾಲಯಗಳು ಕರಿಯ ಮೃದುಗಲ್ಲು ಸುಂದರವಾದ ಕುಸುರಿ ಕೆಲಸಕ್ಕೆ ಸೂಕ್ತವಾಗಿರುದನ್ನು ಕಾಣುತ್ತೇವೆ. ವಿಜಯನಗರ ಸಾಮ್ರಾಜ್ಯದಲ್ಲಿಯೂ ಅನೇಕ ದೇವಾಲಯಗಳು ರೂಪಗೊಂಡಿದ್ದು, ಕೆಲವು ದೇವಾಲಯಗಳು ಪ್ರಾಚೀನ ದೇವಾಲಯಗಳ ವಾಸ್ತುವಿನ್ಯಾಸ ಹೊಂದಿವೆ. ದೇವಾಲಯದ ಶಿಖರಗಳು ವಿಜಯನಗರ ಶೈಲಿಯಂತಹ ಮಿಶ್ರಶೈಲಿಯಲ್ಲಿ ರೂಪಗೊಂಡಿವೆ.

---

೫. ಡಾ. ಆರ್. ಗೋಪಾಲ್ (ಸಂ), ಡಾ. ಜ್ಯೋತಿಬಾಯಿ (ಲೇ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೧೬೦, ೧೬೧

೬. ಡಾ. ಆರ್. ಗೋಪಾಲ್ (ಸಂ), ಡಾ. ಬಿ. ರಾಜಶೇಖರಪ್ಪ (ಲೇ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೧೭೧

[illegible]

ವಿಜಯನಗರೋತ್ತರ ಚಿತ್ರದುರ್ಗ ಪಾಳೆಗಾರರ ಆಳ್ವಿಕೆಯಲ್ಲಿ ಕ್ರಿ.ಶ. ೧೪೪೬ರಲ್ಲಿ ಕೆಂಚನಾಯಕನಿಂದ ನಿರ್ಮಾಣಗೊಂಡ ಹಿರಿಯೂರು ತೇರುಮಲ್ಲೇಶ್ವರ ದೇವಾಲಯ ಅದೇ ರೀತಿ ನಿರ್ತಡಿಯ ನರಸಿಂಹಸ್ವಾಮಿ ದೇವಾಲಯ, ಜಿಲ್ಲೆಯ ಮಧ್ಯ ಇರುವ ಉತ್ಸವಾಂಭ ದೇವಾಲಯ, ಚನ್ನಕೇಶ್ವರ ದೇವಾಲಯ, ಏಕನಾಥೇಶ್ವ ದೇವಾಲಯ, ಸಂಪಿಗೆ ಸಿದ್ದೇಶ್ವರ ದೇವಾಲಯ, ಕರಿವರ್ತಿಶ್ವರ ದೇವಾಲಯ, ಉಚ್ಚಂಗೆಮ್ಮನ ದೇವಾಲಯ, ಗೋಪಾಲಸ್ವಾಮಿ ದೇವಾಲಯ, ಕಾಶಿವಿಶ್ವನಾಥ ದೇವಾಲಯ, ಹುಲಿಗೊಂದಿ ಭೈರವೇಶ್ವರ ದೇವಾಲಯ, ಹೊಳಲ್ಕೆರೆ ಬಯಲು ಗಣಪತಿ ದೇವಾಲಯ, ವೀರಭದ್ರೇಶ್ವರ ದೇವಾಲಯ, ನಂತರ ಮೊಳಕಾಲ್ಮೂರು ತಾಲೂಕಿನ ಕಾಲಭೈರವೇಶ್ವರ ದೇವಾಲಯ, ಹಿರಿಯೂರು ತಾಲೂಕು ಅಂಬಲಗೆರೆಯ ಶ್ರೀ ರಂಗನಾಥಸ್ವಾಮಿ ದೇವಾಲಯ ಇಸಾಮುದ್ರದಲ್ಲಿರುವ ಶ್ರೀ ಭೋಗೇಶ್ವರ ದೇವಾಲಯ, ಹುಲ್ಲೂರಿನ ಮಲ್ಲೇಶ್ವರ ದೇವಾಲಯ, ರಾಮದುರ್ಗದ ರಾಮೇಶ್ವರ ದೇವಾಲಯ, ನಾಯಕನಟ್ಟಿ ತಿಪ್ಪೇರುದ್ರಸ್ವಾಮಿ ದೇವಾಲಯ ಹೀಗೆ ಚಿತ್ರದುರ್ಗದ ಜಿಲ್ಲಾದ್ಯಂತ ದೇವಾಲಯಗಳು ಹಾಗೂ ಮೂರ್ತಿ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ.

ಸಾಹಿತ್ಯ :

ಚಿತ್ರದುರ್ಗ ಜಿಲ್ಲೆ ಕೇವಲ ವಾಸ್ತುಶಿಲ್ಪಕಲೆಗೆ ಮಾತ್ರ ಪ್ರಾಮುಖ್ಯತೆ ನೀಡದೆ ಪ್ರಾಚೀನ ಕಾಲದಿಂದಲೂ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದೆ. ಜಿಲ್ಲೆಯ ಚರಿತ್ರೆ ಮತ್ತು ಜಾನಪದ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯಿಂದಲೂ ಅತ್ಯಂತ ಮಹತ್ವ ಹೊಂದಿದ ಜಿಲ್ಲೆಯಾಗಿದೆ. ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕವಾಗಿ ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲೂಕುಗಳಾದ್ಯಂತ ಪ್ರಾಚೀನ ಮತ್ತು ಆಧುನಿಕದ ವರೆಗೆ ಸಾಹಿತ್ಯವನ್ನು ಗಮನಿಸಬಹುದು.[೭] ಸಿರುಮನಾಯಕನ ಕುರಿತಾಗಿ ರಚನೆಯಾದ ಅತ್ಯಂತ ಪ್ರಾಚೀನ ಶಾಸನ ಮೂರು ಚಾರಿತ್ರಿಕ ಕಾವ್ಯಗಳನ್ನೊಳಗೊಂಡಿದೆ. ಕ್ರಿ.ಶ. ೨ನೇಯ ಶತಮಾನದ ಅಶೋಕನ ಮೂರು ಶಿಲಾಶಾಸನಗಳು, ಕ್ರಿ.ಶ. ೪ನೇಯ ಶತಮಾನದ ಪೂರ್ವಾರ್ಧದಲ್ಲಿ ರಚನೆಗೊಂಡ ಚಂದ್ರವಳ್ಳಿ ಶಾಸನ, ಕ್ರಿ.ಶ. ೪೫೦ರಲ್ಲಿ ರಚನೆಯಾದ ಹಲ್ಮಿಡಿ ಶಾಸನ, ಕ್ರಿ.ಶ. ೭ನೆಯ ಶತಮಾನದಲ್ಲಿ ಬಾದಾಮಿ ಶಾಸನ, ಕ್ರಿ.ಶ. ೨ನೇಯ ಶತಮಾನದಿಂದ ೧೮ನೇಯ ಶತಮಾನದ ವರೆಗೆ ಐತಿಹಾಸಿಕ ರಾಜರುಗಳ ಹಿರಿಮೆ ಸಾರುವಂತಹ ಸಾಹಿತಿಗಳನ್ನು ಕಾಣಬಹುದು.[೮]

೭ ಕಾ. ಆಲ್ಬು, ಗೋಪಾಲ್ಪ (ಸಂ), ಸಿ. ಶಿವಲಿಂಗಪ (ಲೇ) ಂಗೂಚುಗ್ಣ ಈಲ್ಯೆಂಯ ಇಫಹಾಸ ಮಗ್ತು ಪುಉಾಗಗೆ, ಪುಐ, ೨೪೬

೮. ಡಾ. ಆರ್. ಗೋಪಾಲ್ (ಸಂ), ಡಾ. ಜ್ಯೋತಿಬಾಯಿ (ಲೇ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೨೪೬, ೨೪೭

ಪ್ರಸ್ತುತ ಅವಧಿಯಲ್ಲಿ ಆಧುನಿಕೋತ್ತರದಲ್ಲಿ ಅನೇಕ ಸಾಹಿತಿಗಳು, ಸಂಶೋಧಕರು ಚಿತ್ರದುರ್ಗ ಜಿಲ್ಲೆಯಲ್ಲಿ ಬೆಳೆದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ಸಂಗೀತ :

ಚಿತ್ರದುರ್ಗ ಜಿಲ್ಲೆಯು ವಾಸ್ತುಶಿಲ್ಪಕಲೆಗೆ ನೀಡಿದ ಮಹತ್ವವನ್ನು ಸಂಗೀತಕ್ಕೂ ನೀಡಿದೆ. ಅರಸು ಮನೆತನದ ಅರಮನೆಯ ಸಂಗೀತ ವಿದ್ವಾಂಸರಾಗಿರುವ ಅನೇಕ ಕಲಾವಿದರನ್ನು ಕಾಣಬಹುದು. ನಾಯಕರ ಆಳ್ವಿಕೆಯಲ್ಲಿ ಉತ್ತಮ ಸಂಗೀತಗಾರನೆಂದು, ವಿದ್ವಾಂಸರೆಂದು ಹೆಸರು ಪಡೆದ ಭೈರವಿ ವೆಂಕಟಸುಬ್ಬಯ್ಯನವರು ಆಸ್ಥಾನದ ಕಲಾವಿದರಾಗಿದ್ದರು. ಇವರ ಬಗ್ಗೆ ತಾ.ರಾ.ಸು. ಅವರು ಸಂಶೋಧನೆಯನ್ನು ನಡೆಸಿ ಅವರ ಜೀವನ ಕಥೆಯ ಚಲನಚಿತ್ರ ರೂಪದಲ್ಲಿ ತಂದಿದ್ದಾರೆ. ನಂತರ ಆಧುನಿಕೋತ್ತರದಲ್ಲಿ ಜಿಲ್ಲೆಯ ಮಹಾನ್ ವಿದ್ವಾಂಸರಾದ ನಾರಾಯಣಪ್ಪ ಎಂಬುವವರು ಕರ್ನಾಟಕದ ಅತ್ಯುನ್ನತ ಸಂಗೀತ ವಿದ್ವಾಂಸರಾಗಿದ್ದರು. ಇವರ ಪ್ರತಿಭೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಜಿಲ್ಲೆಯು ಅನೇಕ ವಿದ್ವಾಂಸರು ವಿದ್ವತ್ ಪರಿಣಿತರಾಗಿ ಜಿಲ್ಲೆಯಾದ್ಯಂತ ಸಂಗೀತ ಶಾಲೆಗಳನ್ನು ತೆರೆದು ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ಹಾಗೆಯೆ ದೂರದರ್ಶನ ಮಾಧ್ಯಮದಲ್ಲಿ ಅನೇಕ ಸಂಗೀತ ಕಲಾವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಮುಂದುವರೆದಿದೆ.

ಚಿತ್ರಕಲೆ :

ಚಿತ್ರದುರ್ಗ ಜಿಲ್ಲೆಯು ಪ್ರಾಗೈತಿಹಾಸಿಕ ಕಾಲದಿಂದಲೂ ಚಿತ್ರಕಲೆಗೆ ಮಹತ್ವವನ್ನು ನೀಡಿದ್ದು, ಭಾಷಾಪೂರ್ವದಲ್ಲಿ ರಚನೆಗೊಂಡ ಆದಿಮಾನವರ ರೇಖಾಚಿತ್ರಗಳು ಜಿಲ್ಲೆಯಾದ್ಯಂತ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಕಂಡುಬರುತ್ತವೆ. ಪ್ರಸ್ತುತ ಆ ಚಿತ್ರಗಳು ಸಂಶೋಧಕರ ಆಕರ ಸಾಮಗ್ರಿಗಳಾಗಿವೆ. ಇತಿಹಾಸ ಪೂರ್ವದಿಂದ ಅರಸರ ಆಡಳಿತದವರೆಗೂ ಚಿತ್ರಕಲೆಯನ್ನು ಲಲಿತಕಲೆಗಳ ಒಂದು ಭಾಗವಾಗಿ ಬೆಳೆದುಬಂದಿದೆ. ಚಿತ್ರದುರ್ಗದ ನಾಯಕರ ಕಾಲಾವಧಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ನಿರ್ಮಿಸಲಾದ ಹಿರಿಯೂರಿನ ಶ್ರೀ ತೇರುಮಲ್ಲೇಶ್ವರ ದೇವಾಲಯದ ಸಭಾಮಂಟಪದ ಮೇಲ್ಛಾವಣಿಯಲ್ಲಿ ಪುರಾಣ ಪ್ರಧಾನ ಹಾಗೂ ಅರಸರ ಕಾಲದ ಭಿತ್ತಿಚಿತ್ರಗಳು ರಚನೆಯಾಗಿವೆ. ಶೈವ ದೇವಾಲಯವಾಗಿದ್ದರಿಂದ ಶಿವಪುರಾಣ, ಗಿರೀಜಾ ಕಲ್ಯಾಣ, ಕೀರಾತಾರ್ಜುನಿಯ ಹಾಗೂ ಭಕ್ತ ಮಾರ್ಕಂಡಯ್ಯನಂತಹ ಅನೇಕ ಶಿವಲಿಲೆಯನ್ನು ಚಿತ್ರಿಸಿದ್ದಾರೆ. ನಾಯಕರ ಆಳ್ವಿಕೆಗೆ ಸಂಬಂಧಿಸಿದಂತೆ ಯುದ್ಧದ ಸನ್ನಿವೇಷಗಳು, ಬೇಟೆಗಾರಿಕೆ, ಅರಣ್ಯ, ಪ್ರಾಣಿಗಳು ಹಾಗೂ ಮೆರವಣಿಗೆ ಉತ್ಸವಗಳಂತಹ ಚಿತ್ರಗಳನ್ನು ಚಿತ್ರಿಸಿದ್ದಾರೆ. ಚಿತ್ರಗಳಿಗೆ ಕೆಂಪುವರ್ಣವನ್ನು ಪ್ರಧಾನವಾಗಿ ಬಳಸಿಕೊಂಡು ಸಾಂಪ್ರದಾಯಿಕವಾಗಿ ಚಿತ್ರಿಗಳನ್ನು ರಚನೆ ಮಾಡಿದ್ದಾರೆ.

[illegible]

ಚಿತ್ರದುರ್ಗದಲ್ಲಿರುವ ಗಂಡುಗಲಿ ಮದಕರಿನಾಯಕ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ೧೭೫೪–೧೭೭೯ರ ಕಾಲಾವಧಿಯ ಚಿತ್ರ ಕಲಾಕೃತಿಗಳಿದ್ದು, ದೇವಾನು ದೇವತೆಯರ ಚಿತ್ರಗಳು ಹಾಗೂ ನಾಯಕರ ಆಳ್ವಿಕೆಯಲ್ಲಿ ಬರೆಸಿಕೊಂಡ ನಾಯಕರ ವಿವಿಧ ತಾಲಿಮುಗಳು, ಸಾಹಸ ದೃಶ್ಯಗಳು, ಅಶ್ವಗಳೊಂದಿಗೆ ಹೋರಾಟ, ಭಾವಚಿತ್ರಗಳು ಇನ್ನೂ ಮುಂತಾದ ಚಿತ್ರಗಳನ್ನು ಇಲ್ಲಿ ಸಂಗ್ರಹಗೊಂಡಿವೆ. ನಂತರ ಚಿತ್ರದುರ್ಗದ ಬೃಹನ್‌ಮಠವಾದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ಹಸ್ತಪ್ರತಿ ಚಿತ್ರಗಳು, ಉದ್ಧರಣಿಪಠ ಚಿತ್ರಗಳು ಶೈವಧರ್ಮ, ವೈಷ್ಣವಧರ್ಮ ಹಾಗೂ ಜೈನಧರ್ಮಕ್ಕೆ ಸಂಬಂಧಿಸಿದ ಹಸ್ತಪ್ರತಿ ಚಿತ್ರಗಳನ್ನು ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ಜಿಲ್ಲೆಯ ಶ್ರೇಷ್ಠ ಕಲಾವಿದರಾದ ಹಾಗೂ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ದಿ. ಪಿ.ಆರ್. ತಿಪ್ಪೇಸ್ವಾಮಿ ಅವರು ಜಲವರ್ಣ ಚಿತ್ರಕಾರರಾಗಿದ್ದರು. ಧರ್ಮಸ್ಥಳ ಮಂಜೂಷ ವಸ್ತುಸಂಗ್ರಹಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಹಾಗೂ ಜಾನಪದ ತಂಡದೊಂದಿಗೆ ವಿದೇಶಕ್ಕೂ ಭೇಟಿ ನೀಡಿದ್ದರು. ಅಕಾಡೆಮಿಯಲ್ಲಿದ್ದಾಗ ಅನೇಕ ಕಲಾಚಟುವಟಿಕೆಗಳಾದ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾ ಶಿಬಿರಗಳನ್ನು, ಪ್ರದರ್ಶನಗಳನ್ನು ಏರ್ಪಡಿಸಿ ಅನೇಕ ಕಲಾವಿದರನ್ನು ಗುರುತಿಸಿ ನಾಡಿಗೆ ಕೊಡುಗೆಯನ್ನಾಗಿ ನೀಡಿದ್ದಾರೆ. ಇವರ ಕಾಲಾವಧಿಯಲ್ಲಿ ಚಿತ್ರಕಲೆಗೆ ಸಂಬಂಧಪಟ್ಟಂತಹ ಅನೇಕ ಗ್ರಂಥಗಳನ್ನು, ಲೇಖನಗಳನ್ನು, ವಿಮರ್ಶೆಗಳನ್ನು ಬರೆದಿದ್ದಾರೆ. ಕರ್ನಾಟಕ ಸರ್ಕಾರ ಇವರ ಪ್ರತಿಭೆಯನ್ನು ಗುರುತಿಸಿ ೧೯೮೧ರಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರಕಲಾ ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದು, ಎಸ್.ಜೆ.ಎಂ. ಚಿತ್ರಕಲಾ ಮಹಾವಿದ್ಯಾಲಯ, ಹೊಸದುರ್ಗದಲ್ಲಿರುವ ಇಳಕಲ್ ವಜ್ರೇಷ್ಟ ಚಿತ್ರಕಲಾ ಮಹಾವಿದ್ಯಾಲಯಗಳಿದ್ದು, ಪ್ರತಿವರ್ಷ ಕಲಾ ಶಿಕ್ಷಣ ಸಂಸ್ಥೆಯಿಂದ ಸುಮಾರು ೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಬೇತಿಯನ್ನು ಪಡೆದು ಕಲಾವಿದರಾಗುತ್ತಿದ್ದಾರೆ. ಒಟ್ಟಾರೆ ಜಿಲ್ಲೆಯು ಲಲಿತಕಲೆಗಳ ಕಣಜವಾಗಿ ವಿವಿಧ ಬಗೆಯ ಕಲಾ ಚಟುವಟಿಕೆಗಳನ್ನು ಹಿಂದಿನಿಂದಲೂ ಬೆಳೆಸಿಕೊಂಡು ಬಂದಿರುವುದಲ್ಲದೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ತನ್ನದೆ ಆದ ಸ್ಥಾನವನ್ನು ಪಡೆದುಕೊಂಡಿದೆ.

ಚಿತ್ರದುರ್ಗ ಭೌಗೋಳಿಕ ಪರಿಸರ :

ದಕ್ಷಿಣ ಭಾರತದ ಒಂದು ಆಯಕಟ್ಟಿನ ಸ್ಥಳದಲ್ಲಿರುವ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯು ಪ್ರಾಕೃತಿಕವಾಗಿ ಸಮೃದ್ಧ ಮತ್ತು ಸಂಪದ್ಭರಿತವಾಗಿದ್ದು, ಭೌಗೋಳಿಕವಾಗಿಯೂ ಹತ್ತು ಹಲವಾರು ವಿಶಿಷ್ಟತೆಗಳನ್ನೊಳಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಈಶಾನ್ಯಕ್ಕೆ ಬಳ್ಳಾರಿ ಜಿಲ್ಲೆ, ಆಗ್ನೇಯಕ್ಕೆ ತುಮಕೂರು ಜಿಲ್ಲೆ, ಪೂರ್ವಕ್ಕೆ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ನೈರುತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆ ಹಾಗೂ ಪಶ್ಚಿಮಕ್ಕೆ ಶಿವಮೊಗ್ಗ ಜಿಲ್ಲೆಯನ್ನೊಳಗೊಂಡು

ಪ್ರಸ್ತುತ ೬ ತಾಲೂಕುಗಳಿಂದ ಕೂಡಿದ್ದು, ಚಿತ್ರದುರ್ಗ, ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ತಾಲೂಕುಗಳನ್ನು ಹೊಂದಿದೆ. ಎಲ್ಲಾ ತಾಲೂಕುಗಳ ಒಟ್ಟು ೨೨ ಹೋಬಳಿಗಳಿದ್ದು, ೮೩.೪೪.೫ ಚ.ಕಿ.ಮಿ. ವಿಸ್ತಾರವಿದ್ದು, ಒಟ್ಟು ೧೦೫೧ ಗ್ರಾಮಗಳನ್ನೊಳಗೊಂಡಿದೆ. ಬಹುತೇಕ ಪಟ್ಟಣ ಪ್ರದೇಶಗಳು ಆಧುನಿಕ ಜೀವನವನ್ನು ತೊಡಗಿಸಿಕೊಂಡಿದ್ದು, ಗ್ರಾಮೀಣ ಪ್ರದೇಶದ ಜನಸಮುದಾಯ ಇನ್ನೂ ಬದಲಾಗಿಲ್ಲ. ಸಾಕಷ್ಟು ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿ ದೊರಕಿಲ್ಲ. ಕೇಂದ್ರ ಸರ್ಕಾರದ ಅಂಕಿ ಸಂಖ್ಯೆಗಳ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ವಿಸ್ತಾರವು ೦೮.೪೪೬ ಮೀ ಕರ್ನಾಟಕದ ಜಿಲ್ಲೆಗಳಲ್ಲಿ ಭೂ ವಿಸ್ತಾರದಲ್ಲಿ ಚಿತ್ರದುರ್ಗ ಪ್ರದೇಶವು ೦೯ನೇ ಸ್ಥಾನವನ್ನು ಹೊಂದಿದೆ.

ಚಿತ್ರದುರ್ಗ ಜಿಲ್ಲೆಯ ಪ್ರಮುಖ ನದಿ ವೇದಾವತಿ. ಈ ನದಿಯು ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ತಾಲೂಕುಗಳಲ್ಲಿ ಹರಿದು ಒಟ್ಟು ೨೦೬ ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಜಿನಗನಹಳ್ಳಿ (ಚಿಕ್ಕಹಗರಿ) ಮತ್ತೊಂದು ನದಿಯಾಗಿ ಚಿತ್ರದುರ್ಗ ತಾಲೂಕಿನಲ್ಲಿ ಹರಿದು ವೇದಾವತಿ ನದಿಯನ್ನು ಸೇರುತ್ತದೆ. ಇದರ ಉದ್ದಳತೆಯು ೧೨೯ ಕಿ.ಮೀ. ಇದ್ದು, ಸ್ವರ್ಣಮುಖಿ ಮತ್ತೊಂದು ನದಿಯಾಗಿದೆ. ಹಿರಿಯೂರು ತಾಲೂಕಿನಲ್ಲಿ ೧೧ ಕಿ.ಮೀ. ಹರಿದು ವೇದಾವತಿಯನ್ನು ಸೇರುತ್ತದೆ. ಸ್ಯಾಗಲಹಳ್ಳಿ ಮತ್ತೊಂದು ನೀರಿನ ಆಸರೆಯಾಗಿದ್ದು, ಹೊಳಲ್ಕೆರೆಯ ಪಶ್ಚಿಮ ಭಾಗದಲ್ಲಿ ಹುಟ್ಟಿ ತುಂಗಭದ್ರಾ ನದಿಯನ್ನು ಸೇರಿಕೊಳ್ಳುತ್ತದೆ. ಅಲ್ಪ ಪ್ರಮಾಣದ ನೀರಿನಾಸರೆಯಾಗಿದ್ದು, ಗರಣಿ ಮತ್ತು ನಾಯಕನ ಹಟ್ಟಿ ತೊರೆಗಳು ಅಲ್ಪ ದೂರ ಕ್ರಮಿಸಿ ನಂತರ ವೇದಾವತಿ ನದಿಯನ್ನು ಸೇರಿಕೊಳ್ಳುತ್ತವೆ. ಅಲ್ಲಲ್ಲಿ ನೀರಿನ ಮಡುವುಗಳನ್ನು (ಚೆಕ್ ಡ್ಯಾಮ್) ಕೆರೆ ಕಟ್ಟೆಗಳು ಇರುವುದು ತಿಳಿದು ಬಂದಿರುತ್ತವೆ.

ಚಿತ್ರದುರ್ಗ ಪ್ರದೇಶದಲ್ಲಿ ಖನಿಜ ನಿಕ್ಷೇಪವಾದ ಕಣಶಿಲೆ ಹೆಚ್ಚಿನ ಮಟ್ಟಿಗೆ ಹರಡಿಕೊಂಡಿದೆ ಶಿಸ್ಟ್, ಶಿಲೆ, ಕ್ವಾರ್ಟ್ಸೆಟ್ ಶಿಲೆ (ಕಾಗ್ಲಮರ್‍ಯೆಟ್) ಸುಣ್ಣಕಲ್ಲು ಮತ್ತು ಅದಿರುಯುಕ್ತ ಶಿಲಾಪದರುಗಳು ಇಲ್ಲಿ ಕಂಡು ಬಂದಿವೆ. ಅಲ್ಲಲ್ಲಿ ಡಾಲರೈಟ್ ಶಿಲೆಗಳು ಇವೆ. ಹೊಸದುರ್ಗ ತಾಲೂಕು ಬೂದಿಹಾಳ್, ಗಂಜಿಗುಂಟೆ, ಹಿರಿಯೂರು ತಾಲೂಕು ಗೋಗುಡ್ಡ ಮೊದಲಾದ ಪ್ರದೇಶಗಳಲ್ಲಿ ಕಲ್ನಾರು ದೊರಕುತ್ತದೆ. ಚಿತ್ರದುರ್ಗದ ಇಂಗಳದಾಳುವಿನಲ್ಲಿ ಉತ್ತಮವಾದ ತಾಮ್ರದ ನಿಕ್ಷೇಪವಿದ್ದು, ಇಂದಿಗೂ ಅದನ್ನು ತೆಗೆಯಲಾಗುತ್ತದೆ. ಅಲ್ಲದೆ ಚಿತ್ರದುರ್ಗದ ಕೋಟೆ ಮರಡಿ ಮತ್ತು ಗೋಣೂರು, ಹೊಸದುರ್ಗ ತಾಲೂಕು ಭೂದಿಮರಡಿ ಹಿರಿಯೂರು ತಾಲೂಕಿನ ಜವಗೊಂಡನಹಳ್ಳಿ ಅಣ್ಣೆನಿದ್ರಿ ಮತ್ತು ದಿಂಡವರ ಚಿನ್ನದ ನಿಕ್ಷೇಪವಿದ್ದು, ಪ್ರಾಚೀನ ಕಾಲದಲ್ಲಿ ಇವುಗಳ ಬಳಕೆಯಾಗುತ್ತಿತ್ತೆಂದು ತಿಳಿದು ಬರುತ್ತದೆ ಪ್ರಸ್ತುತ ಹಿರಿಯೂರು

[illegible]

ತಾಲೂಕಿನಲ್ಲಿ ಕಬ್ಬಿಣ ಅದುರಿನ ಉತ್ತಮ ನಿಕ್ಷೇಪವಿದ್ದು, ಹೊಸದುರ್ಗ ಹೊಳಲ್ಕೆರೆ ಹಾಗೂ ಚಿತ್ರದುರ್ಗ ತಾಲ್ಲೂಕಿನಲ್ಲಿ ಅಲ್ಪ ಪ್ರಮಾಣದಲ್ಲಿ ಕೆಲ ನಿಕ್ಷೇಪಗಳಿರುವುದು ತಿಳಿದು ಬಂದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಖನಿಜ ನಿಕ್ಷೇಪಗಳು ಹೇರಳವಾಗಿಲ್ಲ ಇದರ ಪರಿಣಾಮವಾಗಿ ಕೈಗಾರಿಕೆಗಳು ಕಡಿಮೆಯಾಗಿವೆ. ಇಂಗಳದಾಳ್ ಕಾಪರ್ಪೈನಸ್ (ಕಂಚು) ಭೀಮ ಸಮುದ್ರದಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ.

ಚಿತ್ರದುರ್ಗ ಪ್ರದೇಶ ಸಮುದ್ರ ಪಾತಾಳದಿಂದ ಇದರ ಸಾಮಾನ್ಯವಾದ ಎತ್ತರವು ೨೫೯೩ ಅಡಿ ಭೂನಕ್ಷೆಯಲ್ಲಿ ೭೪.೪೩ ಉತ್ತರ ಅಕ್ಷಾಂಶ ಮತ್ತು ೧೪.೫೦ ಪೂರ್ವ ರೇಖಾಂಶದವರೆಗೆ ವ್ಯಾಪಿಸಿದೆ. ವಿಸ್ತೀರ್ಣದಲ್ಲಿ ಜಿಲ್ಲೆಯ ಬಹುಪಾಲು ೦೪.೪೦ ಬೆಟ್ಟಗಳಿಂದಾವೃತವಾಗಿದ್ದರೂ, ಅಲ್ಲಲ್ಲಿ ಸಮತಟ್ಟಾದ ಭೂಪ್ರದೇಶಗಳನ್ನೊಳಗೊಂಡಿದೆ. ದೊಡ್ಡ ಮತ್ತು ಚಿಕ್ಕದಾದ ಹಲವಾರು ಕಣಿವೆಗಳನ್ನೊಳಗೊಂಡಿದ್ದು, ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಹಬ್ಬಿರುವ ಬೆಟ್ಟಗಳ ಸಾಲು ಅಲ್ಲಲ್ಲಿ ಎತ್ತರದ ಬೆಟ್ಟಗಳಿವೆ. ಪೂರ್ವ ಭಾಗದಲ್ಲಿ ಹಿರಿಯೂರು ಪಶ್ಚಮದಿಂದ ಚಿತ್ರದುರ್ಗ ಪರ್ಯಂತ ಹಬ್ಬಿ ಮುಂದೆ ವಾಯುವ್ಯ ಭಾಗದ ಕಣಕುಪ್ಪ ಬೆಟ್ಟದವರೆಗೆ ಮುಂದುವರಿದಿದೆ.[೯] ಇಲ್ಲಿನ ಪ್ರಮುಖ ಬೆಟ್ಟಗಳೆಂದರೆ ಏಕ್ಕಲದುರ್ಗ. ಎತ್ತರ (೧೦೬೦ಮೀ) ಕಣಕುಪ್ಪ (೮೩೯) ಚಿತ್ರದುರ್ಗ (೯೮೪ ಮೀ) ಜಟಂಗಿ ರಾಮೇಶ್ವರ (೧೦೧೩ಮೀ) ಜೋಗಿ ಮರಡಿ (೧೧೫೯ಮೀ) ನುಂಕೆ ಭೈರವ (೯೨೧ಮೀ) ಬೀರನಕಲ್ಲುದುರ್ಗ (ಶಾಂತಿಗುಡ್ಡ ೭೯೧ಮೀ) ಹಾಲರಾಮೇಶ್ವರಗುಡ್ಡ - ಹಾಗೂ ಹೊಸದುರ್ಗ (೧೧೭೭ಮೀ) ಉಳಿದ ಭೂಭಾಗವು ಭೂಮಟ್ಟವಾಗಿದ್ದು ಯಾವುದೇ ವೈವಿಧ್ಯತೆಯನ್ನು ಹೊಂದಿಲ್ಲ ಸಾಮಾನ್ಯವಾಗಿ ಉತ್ತರ ಮತ್ತು ಈಶಾನ್ಯಕ್ಕೆ ಇಳಿಜಾರಾಗಿರುವುದು ತಿಳಿಯುತ್ತದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಪ್ರದೇಶವು ೧೦ನೆಯ ಶತಮಾನದಲ್ಲಿ ನೋಳು ಬಲಾಡಿ ೩-೨೦೦ದಲ್ಲಿತ್ತು ಮೊಳಕಾಲ್ಮೂರು ೧೧ ನೇಯ ಶತಮಾನದ ಕಲ್ಯಾಣ ಚಾಲುಕ್ಯ ಅರಸ ಅರನೇಯ ವಿಕ್ರಮಾದಿತ್ಯನ ಸಹೋದರ ಜಯಸಿಂಹನ ವಶದಲ್ಲಿತ್ತು. ಇದೇ ಪರಿಸರಕ್ಕೆ ಹೊಂದಿಕೊಂಡಂತೆ ಇರುವ ಸಂತೆಗುಡ್ಡವು ಅನೇಕ ಪ್ರಾಚ್ಯಾವಶೇಷಗಳ ಗಣಿಯಾಗಿದೆ. ಮೊಳಕಾಲ್ಮೂರಿನಿಂದ ಸುಮಾರು ೩೦ ಕೀ.ಮೀ. ದೂರದಲ್ಲಿರುವ ಈ ಗ್ರಾಮಕ್ಕೆ ರಾಂಪುರ ಕೆಳಗಳ ಕಣಿವೆ ಹಾಗೂ ಮರ್ತೆನಹಳ್ಳಿಗಳ ಮೂಲಕ ತಲುಪಬಹುದು. ಈ ಪ್ರದೇಶವು ತುತ್ತತುದಿಯಿಂದ ೨೫೯೩ ಅಡಿ ಎತ್ತರದಲ್ಲಿದೆ. ಬೆಟ್ಟಗುಡ್ಡದಿಂದ ಕೂಡಿರುವ ಈ ಪರಿಸರವು ಪ್ರಾಗೈತಿಹಾಸಿಕ ಮಾನವನ ವಾಸಕ್ಕೆ ಯೋಗ್ಯ ತಾಣವಾಗಿದೆ.

---

೯. ಡಾ. ಆರ್. ಗೋಪಾಲ್ (ಸಂ), ಡಾ. ಕೆ.ಬಿ. ಶಿವತಾರಕ (ಲೇ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೨೧

[illegible]

ಪ್ರಾಗೈತಿಹಾಸಿಕ ಕಾಲದಲ್ಲಿ ಈ ಗ್ರಾಮಕ್ಕೆ ಅಂಟಿಕೊಂಡಂತೆ ಇರುವ ಗುಡ್ಡದ ಪಕ್ಕದಲ್ಲಿ ಸಂತೆ ನಡೆಯುತ್ತಿದ್ದುದ್ದರಿಂದ ಈ ಊರಿಗೆ ಸಂತೆಗುಡ್ಡವೆಂಬ ಹೆಸರು ಬಂದಿದೆ. ಕ್ರಿ.ಶ. ೧೬೬೫ರ ತಾಮ್ರ ಶಾಸನದಲ್ಲಿ ಈ ಊರನ್ನು ಸಂತೇಗೋವಿ ಎಂದು ಕರೆದಿರುವುದು ಮೇಲಿನ ಅಂಶಕ್ಕೆ ಪುಷ್ಟಿ ದೊರೆಯುತ್ತದೆ. ಈ ಭಾಗದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಅನೇಕ ಪ್ರಾಚ್ಯವಶೇಷಗಳು ಪತ್ತೆಯಾದವು ಅವುಗಳಲ್ಲಿ ಗವಿವರ್ಣ ಚಿತ್ರಗಳು ಮುಖ್ಯವಾಗಿ ಹಾಗೆಯೇ ಬಿಡಿಗಲ್ಲುಗಳು ಕಿಟ್ಟದಕಲ್ಲು, ಪುಷ್ಕರಣಿ, ದೇವಾಲಯ ಹಾಗೂ ಕೋಟೆ ಕೊತ್ತಲುಗಳು ಸಹ ಕಂಡುಬಂದಿವೆ.

ಚಿತ್ರದುರ್ಗ ಪರಿಸರದ ಸಂತೆಗುಡ್ಡವು ಹಿಂದೆ ಪಂಚ ಕರಕುಶಲಕರ್ಮಿಗಳ ಕೈಗಾರಿಕಾ ನೆಲೆ ಹಾಗೂ ವಾಣಿಜ್ಯ ಕೇಂದ್ರವಾಗಿತ್ತೆನ್ನಬಹುದು. ಇಲ್ಲಿ ವಿಶ್ವಕರ್ಮರು ಅಥವಾ ಪಾಂಚಾಳರು ನೆಲೆಸಿದ್ದರೆಂಬುದಕ್ಕೆ ಸ್ಥಳೀಯ ತಾಮ್ರ ಶಾಸನವೊಂದು ಮಾಹಿತಿ ನೀಡುತ್ತದೆ. ಮೊಳಕಾಲ್ಮೂರು ಜಟಿಂಗರಾಮೇಶ್ವರ ಪರಿಸರದಲ್ಲಿ ಅಶೋಕನ ಶಾಸನದ ಹತ್ತಿರ ನೂತನ ಶಿಲಾಯುಗ ಹಾಗೂ ಇತರೆ ಸಂಸ್ಕೃತಿಯುಳ್ಳ ನೆಲೆಯನ್ನು ಗುರುತಿಸಲಾಗಿದೆ. ಕಾರಣ ಶಾಸನದ ಬುಡದಲ್ಲಿ ಒಂದು ಪಾದದ್ವಯದ ರೇಖಾಚಿತ್ರವನ್ನು ಹಾಗೂ ಇದರ ಹತ್ತಿರವೇ ಬಯಲು ಬಂಡೆಯ ಮೇಲೆ ಪ್ರಾಣಿಯ ರೇಖಾ ಚಿತ್ರಗಳನ್ನು ಗುರುತಿಸಲಾಗಿದೆ. ಬ್ರಹ್ಮಗಿರಿ ಪ್ರದೇಶದಲ್ಲಿ ಅಶೋಕನ ಶಾಸನ ಮತ್ತು ತ್ರಿಶಂಕೇಶ್ವರ ದೇವಾಲಯ ಕಂಡುಬಂದಿರುವುದು ಗಮನಾರ್ಹವಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಅನೇಕ ವೈಶಿಷ್ಟಗಳನ್ನು ಹೊಂದಿದೆ. ಹಿರಿಯೂರು ಪಟ್ಟಣದ ಹೃದಯ ಭಾಗದಲ್ಲಿ ಶ್ರೀ ತೇರುಮಲ್ಲೇಶ್ವರ ದೇವಾಲಯವಿದೆ. ಸಭಾಮಂಟಪದ ಪ್ರಾಂಗಣದ ಮೇಲ್ಛಾವಣಿಯಲ್ಲಿ ಶೈವ ಪುರಾಣಕ್ಕೆ ಸಂಬಂಧಿಸಿದ ಅನೇಕ ಭಿತ್ತಿ ಚಿತ್ರಗಳಿವೆ. ನಾಯಕರುಗಳ ಆಳ್ವಿಕೆಗೆ ಸಂಬಂಧಿಸಿದ ಚಿತ್ರಗಳು ಭೇಟಿಯ ದೃಶ್ಯ, ಯುದ್ಧದ ದೃಶ್ಯ, ಅರಮನೆಯ ವಿಲಾಸ ಚಿತ್ರಗಳನ್ನು ರಚಿಸಿದ್ದಾರೆ. ತಾಲೂಕಿನ ಭೂ ಸರ್ವೇಕ್ಷಣಾ ಪ್ರಕಾರ ಕೆಂಪು ಮಣ್ಣು ಅಲ್ಲಲ್ಲಿ ಮತ್ತು ಮರಳು ಮಿಶ್ರಿತ ಕೆಂಪು ಕಪ್ಪು ಮಣ್ಣಿನ ಭೂಮಿ ಕೃಷಿಗೆ ಅನುಕೂಲವಾಗಿದೆ. ಜಿಲ್ಲೆಯ ಕೃಷಿಗೆ ಅನುಕೂಲವಾಗಿ ವಿ.ವಿ.ಎಸ್.ಅಣೆಕಟ್ಟನ್ನು ನಿರ್ಮಿಸಲಾಗಿದೆ. ಅದರಿಂದ ಚಿತ್ರದುರ್ಗಕ್ಕೂ ಹಿರಿಯೂರಿಗೂ ಕುಡಿಯುವ ನೀರಿನ ವ್ಯವಸ್ಥೆಯಾಗಿದೆ. ತಾಲೂಕಿನ ಕೆಲವು ಭಾಗ ಜಲಾನಯನ ಪ್ರದೇಶವಾಗಿದೆ. ಹಿರಿಯೂರು ತಾಲೂಕು ಭತ್ತದ ಕಣಜ ಎಂದು ಹೆಸರುಗಳಿಸಿದೆ. ತತ್ಪರಿಣಾಮವಾಗಿ ಇಲ್ಲಿ ರಾಗಿ, ಜೋಳ, ಹತ್ತಿ, ಶೇಂಗಾ, ಮುಸಿಕಿನಜೋಳ, ಸೂರ್ಯಕಾಂತಿ ಹಾಗೂ ಕಡಲೆ ಮೊದಲಾದ ಬೆಳಗಳನ್ನು ಬೆಳಯಲಾಗುತ್ತದೆ.

ತಾಲೂಕಿನ ಉಡವಳ್ಳಿ ಗ್ರಾಮವು ಪ್ರಾಗೈತಿಹಾಸಿಕ ನೆಲೆಗಳನ್ನು ಹೊಂದಿದೆ. ಈ ಪ್ರದೇಶದಲ್ಲಿ ಮುಳ್ಳಯ್ಯನ ಗುಡ್ಡ ಪರಿಸರವಿದೆ. ಈ ಗುಡ್ಡದ ಬುಡದಿಂದ ತುತ್ತ ತುದಿಯವರೆಗೆ

[illegible]

ವಿವಿಧ ಬಗೆಯ ಕುಟ್ಟಿಕೊರೆದ ನೂರಾರು ರೇಖಾಚಿತ್ರಗಳು ಬೆಳಕಿಗೆ ಬಂದಿವೆ. ಈ ಹಿಂದೆ ನವೋದಯ ಶಾಲೆಯ ಪ್ರಾಧ್ಯಾಪಕರಾದ ಮುತ್ತುರಾಜ್ ಎಂಬುವವರು ಈ ಸ್ಥಳದ ವೀಕ್ಷಣೆ ಮಾಡಿ ಅಲ್ಲಿನ ವಸ್ತು ಸ್ಥಿತಿಯನ್ನು ಲೇಖನದ ಮೂಲಕ ಪ್ರಕಟಿಸಿದ್ದಾರೆ. ನಂತರ ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸಹ ಕ್ಷೇತ್ರಕಾರ್ಯ ನಡೆಸಿ ಕೆಲವು ಮಹತ್ವದ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಮುಳ್ಳಪ್ಪನಗುಡ್ಡದ ರೇಖಾಚಿತ್ರಗಳು, ಶಿಲಾ ಗೋರಿಗಳು ಹಾಗೂ ಸಂಪೂರ್ಣ ಬಿದ್ದು ಹೋದ ಶಿಲಾ ಪೊಟರೆಗಳು ಕಂಡು ಬಂದಿವೆ.

ಹೊಸದುರ್ಗ ಪ್ರದೇಶವು ಪ್ರಾಗೈತಿಹಾಸಿಕವಾಗಿ, ಭೌಗೋಳಿಕವಾಗಿ ವಿಶಿಷ್ಟತೆಯನ್ನು ಹೊಂದಿದೆ. ಸಾಲು ಸಾಲಾಗಿ ನಿಂತ ಹೆಬ್ಬಂಡೆಯ ಗುಡ್ಡಗಳು, ಕುರುಚಲ ಗುಡ್ಡಗಳು, ಕೆರೆಕಟ್ಟೆಗಳು, ನೀರಿನ ಮಡುವುಗಳಿಂದ ಕೂಡಿದೆ. ಅಲ್ಲದೆ ಚಿಕ್ಕಮಗಳೂರು ಜಿಲ್ಲೆಯಿಂದ ಹಾದು ಹೊಸದುರ್ಗ ತಾಲೂಕಿನ ಹೃದಯ ಭಾಗದಲ್ಲಿ ಹೇಮಾವತಿ ನದಿಯು ಹರಿದು ವಾಣಿವಿಲಾಸ ಸಾಗರವನ್ನು ಸೇರುತ್ತದೆ. ಪ್ರಾಚೀನ ಕಾಲದಿಂದಲೂ ಈ ನದಿಯು ಆದಿ ಮಾನವರ ನೆಲೆಯಾಗಿದೆ ಎಂದು ತಿಳಿದುಬರುತ್ತದೆ.

ಇತಿಹಾಸಕಾರರ ಪ್ರಕಾರ ಈ ಪ್ರದೇಶದಲ್ಲಿಯೂ ಸಹ ಆದಿಹಳೆಯ ಶಿಲಾಯುಗದಿಂದ ನವಶಿಲಾಯುಗದ ವರೆಗೆ ಆದಿಮಾನವರು ಜೀವಿಸಿದ ಕುರುಹುಗಳನ್ನು ಸಂಶೋಧನೆ ಮತ್ತು ಉತ್ಖನನಗಳಿಂದ ಧೃಡಪಡಿಸಿದ್ದಾರೆ. ಪ್ರಾದೇಶಿಕವಾಗಿ ಕೋಟೆ ಕೊತ್ತಲುಗಳು, ದೇವಾಲಯಗಳು, ಮಠ ಮಂದಿರಗಳು ಇದ್ದು, ಐತಿಹಾಸಿಕವಾಗಿ ಚಿತ್ರದುರ್ಗ ನಾಯಕರ ಆಳ್ವಿಕೆಯಲ್ಲಿತ್ತು ಎಂಬುದನ್ನು ಈ ಕುರುಹುಗಳು ಸ್ಪಷ್ಟಪಡಿಸುತ್ತವೆ.

ಹೊಳಲ್ಕೆರೆ ಪ್ರದೇಶವು ಸಹ ಪ್ರಾಗೈತಿಹಾಸಿಕ ಹಿನ್ನಲೆಯ ಭೌಗೋಳಿಕ ಅಂಶಗಳನ್ನು ಒಳಗೊಂಡಿದೆ. ಇಲ್ಲಿಯೂ ಸಹ ಗುಡ್ಡ ಬೆಟ್ಟಗಳಿಂದ ಕೂಡಿದ್ದು, ಆದಿ ಮಾನವರು ವಾಸಿಸಲು ಯೋಗ್ಯವೆನಿಸುವ ಪರಿಸರವಿತ್ತು, ತಾಲೂಕಿನ ಗಟ್ಟಿಹೊಸಹಳ್ಳಿ ಗ್ರಾಮವು ಪ್ರಾಗೈತಿಹಾಸಿಕ ಹಿನ್ನೆಲೆಯಲ್ಲಿ ಹೆಸರಿನಷ್ಟೆ ವೈಶಿಷ್ಟತೆಯನ್ನು ಮೈಗೂಡಿಸಿಕೊಂಡಿದೆ. ಕ್ರಿ.ಶ. ೧೭೫೦ರ ಸಂದರ್ಭದಲ್ಲಿ ಚಿತ್ರದುರ್ಗದ ನಾಯಕರ ಆಳ್ವಿಕೆಯಲ್ಲಿ ಕಬ್ಬಿಣದ ಗಟ್ಟಿಗಳನ್ನು ತಯಾರಿಸಿಕೊಡುತ್ತಿದ್ದರು. ಇದೇ ಗಟ್ಟಿಯನ್ನು ವಿದೇಶಕ್ಕೂ ಪೂರೈಸಲಾಗುತಿತ್ತು. ಈ ಕಾರಣಕ್ಕೆ ಗಟ್ಟಿಹೊಸಹಳ್ಳಿ ಎಂಬ ಹೆಸರು ಬಂದಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.[೧೦] ಇದೇ ಪ್ರದೇಶದ ಮತ್ತೊಂದು ಪ್ರಾಗೈತಿಹಾಸಿಕ ನೆಲೆಯಂದರೆ ತಾಳ್ಯ. ಈ ಸ್ಥಳದಲ್ಲಿ ಲಂಬಾಣಿ ಜನಾಂಗದವರು ವಾಸವಾಗಿದ್ದು, ಇಲ್ಲಿಯೂ ಆದಿಮಾನವರು ರಚಿಸಿದ ಬಯಲು ಬಂಡೆಯ ರೇಖಾಚಿತ್ರಗಳು ಲಭ್ಯವಾಗಿದೆ.

---

೧೦. ಗ್ರಾಮಸ್ಥರ ಅಭಿಪ್ರಾಯ : ಕಸ್ತೂರಪ್ಪ, ಗಟ್ಟಿಹೊಸಹಳ್ಳಿ, ವಯಸ್ಸು ೭೦

[illegible]

ಗಟ್ಟಿಹೊಸಹಳ್ಳಿ ಗ್ರಾಮಸ್ಥರ ಹೇಳಿಕೆಯ ಪ್ರಕಾರ ಆದಿಮಾನವರ ನಂತರದ ಕಾಲಮಾನದಲ್ಲಿ ಪವಾಡಪುರುಷರೊಬ್ಬರು ಈ ಪ್ರದೇಶದಲ್ಲಿ ನೆಲೆಸಿದ್ದರು. ಈ ಪವಾಡಪುರುಷರು ತಪಸ್ಸುಗೈದ ಗುಹೆ ಅಂದಿನ ಆದಿಮಾನವರ ವಾಸಸ್ಥಳ ಎಂದು ಹೇಳಬಹುದು. ಪ್ರಸ್ತುತ ಗುಹೆಯು ಸಂಪೂರ್ಣವಾಗಿ ಮುಚ್ಚಿಹೋಗಿ, ಒಬ್ಬ ವ್ಯಕ್ತಿ ವಿಶ್ರಮಿಸಬಹುದಾದಷ್ಟು ಸ್ಥಳವಿದೆ. ಈ ಭಾಗದ ಅನೇಕ ಸ್ಥಳಗಳಲ್ಲಿ ಮೃತ್‌ಪಾತ್ರೆಗಳು ದೊರಕಿವೆ.

ಚಳ್ಳಕೆರೆ ಪ್ರದೇಶವು ಭೌಗೋಳಿಕವಾಗಿ ಹಾಗೂ ಪ್ರಾದೇಶಿಕವಾಗಿ ಹಲವು ವಿಶಿಷ್ಟತೆಗಳನ್ನು ಪಡೆದುಕೊಂಡಿದೆ. ಎರೆ ಮಣ್ಣಿನಿಂದ ಕೂಡಿದ್ದು ಬೆರಳಣಿಕೆಯಷ್ಟು ಸಣ್ಣ ಸಣ್ಣ ಗುಡ್ಡಬೆಟ್ಟಗಳಿದ್ದು ಸ್ವಾಭಾವಿಕ ಅಥವಾ ನೈಸರ್ಗಿಕ ಗುಹೆಗಳು ಇಲ್ಲದಿರುವುದು ಸ್ಪಷ್ಟವಾಗಿದೆ. ಬಿಸಿಯಾದ ತಾಪಮಾನದಿಂದ ಕೂಡಿದೆ. ಬಹುಷಃ ಪ್ರಾಚೀನ ಮಾನವರ ಜೀವಿತ ಅವಧಿಯಲ್ಲಿ ಉತ್ತಮವಾದ ನೀರು, ಕೆರೆ, ಕಟ್ಟೆ ಇದ್ದಿರಬಹುದು. ಭಾಗಶಃ ಈ ಪ್ರದೇಶದಲ್ಲಿ ಇರುವ ಗ್ರಾಮಗಳು ಹೆಚ್ಚಾಗಿ ಕೆರೆ, ಕಟ್ಟೆ, ಗುಡ್ಡ ಎಂಬ ಹೆಸರಿನಿಂದಲೆ ಕರೆಸಿಕೊಳ್ಳುತ್ತಿವೆ. ಚಳ್ಳಕೆರೆ ತಾಲೂಕು ಪರಿಸರ ಹಿಂದೊಮ್ಮೆ ಪ್ರಾಗೈತಿಹಾಸಿಕ ನೆಲೆಯಾಗಿದ್ದು, ವಿವಿಧ ಕುರುಹುಗಳನ್ನು ಅವರು ರಚಿಸಿದ ಬಯಲು ಬಂಡೆಯ ಚಿತ್ರಗಳನ್ನು ಕಾಣಬಹುದು. ಪಕ್ಕದ ನಾಯಕನಹಟ್ಟಿ ಗ್ರಾಮದಲ್ಲಿ ತಿಪ್ಪೇರುದ್ರಸ್ವಾಮಿಯೆಂಬ ಪವಾಡಪುರುಷರ ಮಠವಿದ್ದು, ಪ್ರತಿವರ್ಷವೂ ಜಾತ್ರಾ ಮಹೋತ್ಸವ ನಡೆಯುತ್ತದೆ. ಕರ್ನಾಟಕದಾದ್ಯಂತ ಭಕ್ತರು ಈ ಸ್ಥಳಕ್ಕೆ ಭೇಟಿನೀಡುತ್ತಾರೆ. ಇದೇ ಪ್ರದೇಶದ ಸಿದ್ದೇಶ್ವರ ಗುಡ್ಡ, ನನ್ನಿವಾಳ, ನೇರಲುಕುಂಟೆ, ಬೂದಿಗುಡ್ಡ ಹಂಪಯ್ಯನ ಮಾಳಿಗೆ, ಗೊಲ್ಲರಹಟ್ಟಿ ಪರಿಸರದಲ್ಲಿ ಸುಮಾರು ೮–೧೦ ಕಿ.ಮೀ ವ್ಯಾಪ್ತಿಯಲ್ಲಿ ಬಯಲು ಬಂಡೆಯ ಮೇಲೆ ರೇಖಾಚಿತ್ರಗಳಿರುವುದು ಕಂಡುಬಂದಿದೆ.

* * * * *

[illegible]

[illegible]

[illegible]









ಅಧ್ಯಾಯ : ಮೂರು
ಪ್ರಾಗೈತಿಹಾಸಿಕ ಚಿತ್ರಗಳು ಮತ್ತು ವಸ್ತುವಿಷಯ

ಪ್ರಾಗೈತಿಹಾಸಿಕ ಚಿತ್ರಕಲೆಗಳು ಆದಿಮಾನವನ ಕಾಲಘಟ್ಟದಲ್ಲಿ ಕಂಡುಬರುವ ಜೀವನಕ್ರಮಗಳಿಗೆ ಸಂಬಂದಿಸಿದ್ದು, ಅವರ ಒಡನಾಟವು ಪ್ರಾಣಿ, ಪಕ್ಷಿ, ನದಿ, ಸೂರ್ಯ, ಚಂದ್ರ ಇತ್ಯಾದಿಯಾದರೂ ಭಾವನಾತ್ಮಕವಾಗಿ ಅನೇಕ ಜನಸಮೂಹವನ್ನು ಪ್ರಕೃತಿಯ ಹೊಂದಾಣಿಕೆಯೊಂದಿಗೆ ವರ್ಷಗಟ್ಟಲೆ ಕಲಹರಣಮಾಡಿದ್ದಾನೆ. ಒಂದು ರೀತಿಯಲ್ಲಿ ಬಾಹ್ಯ ಮತ್ತು ಆಂತರಿಕ ಸಂವೇಧನೆ ಸಂಬಂಧಗಳನ್ನು ತನ್ನ ಜೀವಿತಾವಧಿಯ ನೆಲೆಗಳಲ್ಲಿ ತನ್ನದೇ ಆದ ಜೀವನ ಶೈಲಿಗಳನ್ನು ಅಳವಡಿಸಿಕೊಂಡು ಬಂದಿದ್ದಾನೆ. ಇಂತ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಚಿತ್ರಕಲೆಯು ತನ್ನ ಜೀವನ ಕ್ರಮವನ್ನು ಕೆಲವು ಬಾರಿ ಬದಲಿಸಿರುವಲ್ಲಿ ಸಹಕರಿಸಿದೆ. ಯಾವ ಅಬಿಪ್ಪಗಳನ್ನು ಇತರರೊಂದಿಗೆ ಹಂಚಿಕೊಳಲು ಸಾಧ್ಯವಾಗಿಲ್ಲವೋ ಅಂತಹ ಸಂವೇಧನೆಗಳನ್ನೆ ಚಿತ್ರಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಆದಿಮಾನವರು ಪ್ರಾರಂಭಿಕ ಹಂತದಲ್ಲಿ ಹಸಿಮಾಂಸವನ್ನು ತಿನ್ನುವಂತ ಅನಾಗರಿಕರಾಗಿದ್ದರು. ಆದ ಕಾರಣ ಅವರು ಯಾವುದೇ ನಾಗರೀಕತೆಯನ್ನು ತಿಳಿಯದ ಪಶುಗಳಂತೆ ಇದ್ದದನ್ನು ನಾವು ತಿಳಿದುಕೊಳ್ಳಲಾಗಿದೆ.

ಕಾಲ ಕಾಲಕ್ಕೆ ಶತಮಾನಗಳು ಕಳೆದಂತೆ ವಿವಿಧ ಹಂತದಲ್ಲಿ ಜೀವನ ಶೈಲಿ ಮಾರ್ಪಾಡಾಗಿರುವುದನ್ನು ಕಾಣುತ್ತೇವೆ. ಅದೇ ರೀತಿ ತನ್ನ ಇತರೆ ಚಟುವಟಿಕೆಗಳಲ್ಲಿಯೂ ಮಹತ್ತರ ಬದಲಾವಣೆಗಳನ್ನು ಹೊಂದಿದ್ದಾನೆ. ಉದಾ: ಕೇವಲ ಸನ್ನೆಗಳಂತ ಚಿತ್ರಗಳು ಕಡ್ಡಿ ಚಿತ್ರರೂಪಕ್ಕೆ, ಕಡ್ಡಿರೂಪದ ಚಿತ್ರದಿಂದ ಪೂರ್ಣ ವಿನ್ಯಾಸದಂತೆ ಮುಂದುವರೆದು ನೈಜ ಚಿತ್ರ ರಚನೆವರೆಗೂ ಪ್ರಯತ್ನಿಸಿದ್ದಾರೆ. ಈ ಒಂದು ಅಂಶವೇ ಬದುಕಿನ ಎಲ್ಲಾ ತಂತ್ರಗಳಿಗೂ

[illegible]

ಅನ್ವಯಿಸುತ್ತದೆ. ಹಸಿಮಾಂಸವನ್ನು ಸುಟ್ಟು ಇಲ್ಲವೆ ಬೆಯಿಸಿದ ಮಾಂಸವನ್ನು ತಿನ್ನವಂತೆ ತಾನು ಬೇಟೆಗೆ ಬಳಸುತ್ತಿದ ಆಯುಧಗಳ ಮಾರ್ಪಾಟು, ಕೃಷಿಕ ಜೀವನ, ಪಶುಸಂಗೋಪನೆ, ಗುಂಪು ಗಂಪಾದ ಜೀವನಕ್ರಮ ಆಹಾರ ಧಾನ್ಯಗಳ ಇಲ್ಲವೆ ಗೆಡ್ಡೆ ಗೆಣಸು, ಮಾಂಸಗಳ ಶೇಖರಣೆ ಇತ್ಯಾದಿ ಅಂಶಗಳ ಬದಲಾಣೆಯನ್ನು ಕಾಣುತ್ತೇವೆ.

ಈ ಎಲ್ಲಾ ಜೀವನ ಜನಾಂಗದೊಂದಿಗೆ ಚಿತ್ರಕಲೆಯನ್ನು ಮೈಗೂಡಿಸಿಕೊಂಡ ಆದಿಮಾನವ ಎರಡು ಪ್ರಕಾರಗಳಲ್ಲಿ ಚಿತ್ರಕಲೆಯನ್ನು ಅನಾವರಣಗೊಳಿಸಿದ್ದಾನೆ. ಚಿತ್ರಗಳ ರಚನೆ ಯಾವ ಉದ್ದೇಶ ಎಂಬುದು ಒಂದು ಪ್ರಕಾರವಾದರೆ, ಸೌಂದರ್ಯ ಪ್ರಕಟಣೆ ಮತ್ತೊಂದು ಭಾಗವಾಗಿ ಪ್ರಚೋದಿಸುತ್ತವೆ.

ಚಿತ್ರಗಳ ಸ್ವರೂಪ :

ಗುಹಾಚಿತ್ರಗಳಲ್ಲಿ ವರ್ಣಚಿತ್ರಗಳು ಮತ್ತು ವರ್ಣರಹಿತ ಬಯಲುಬಂಡೆ ಚಿತ್ರಗಳು ಎಂಬುದಾಗಿ ಎರಡು ರೀತಿಯಲ್ಲಿ ಕಂಡುಬರುತ್ತವೆ. ವರ್ಣರಹಿತ ಚಿತ್ರಗಳನ್ನು ಚೂಪಾದ ಸಾಧನದಿಂದ ಕುಟ್ಟಿ ಕೊರೆದು ರಚಿಸಲಾಗಿದ್ದು, ಗುಹಾವರ್ಣ ಚಿತ್ರಗಳನ್ನು ಸ್ವಾಭಾವಿಕವಾಗಿ ನಿಸರ್ಗದಲ್ಲಿ ದೊರಕುವ ವಿವಿಧ ಬಣ್ಣದ ಕಲ್ಲು ಮಣ್ಣಿನ ಗಟ್ಟಿಗಳು ಮತ್ತು ವನಸ್ಪತಿಗಳು ಮಾತ್ರವಲ್ಲದೇ ಪ್ರಾಣಿಮೂಲಗಳಿಂದಲೂ ಬಣ್ಣಗಳನ್ನು ತಯಾರಿಸಿಕೊಂಡು ಲೇಪನ ಮಾಡುತ್ತಾರೆ. ಕೆಲವು ಚಿತ್ರಗಳು ರೇಖಾ ಪ್ರಧಾನವಾಗಿದ್ದರೆ ಮತ್ತೆ ಕೆಲವು ಚಪ್ಪಟೆಯಾಗಿ ವರ್ಣಲೇಪಿಸಿದ ನೆರಳಿನಂತಹ ಚಿತ್ರಗಳಾಗಿವೆ. ಹೆಚ್ಚಿನ ಚಿತ್ರಗಳು ಸುಲಭವಾಗಿ ಪ್ರವೇಶಿಸಲಾಗದಂತಹ ದುರ್ಗಮವಾದ ಗವಿಗಳಲ್ಲಿ ರಚನೆಯಾಗಿವೆ.

ಗುಹಾವರ್ಣ ಚಿತ್ರಗಳಲ್ಲಿ ಪ್ರಾಣಿ ಚಿತ್ರಗಳು ಗಾತ್ರದಲ್ಲಿ ದೊಡ್ಡದಾಗಿ ಮಾತ್ರವಲ್ಲದೆ ಹೆಚ್ಚು ಸ್ಪಷ್ಟತೆಯಿಂದ ಕೂಡಿದ್ದು, ನೈಜತೆಗೆ ಹತ್ತಿರವಾಗಿವೆ. ಅದರೆ ಮನುಷ್ಯ ಚಿತ್ರಗಳು ಸಾಂಕೇತಿಕವಾಗಿದ್ದು, ಕಡ್ಡಿಚಿತ್ರಗಳ ಮಾದರಿಯಲ್ಲಿವೆ. ಗುಹಾಚಿತ್ರಗಳು ಗುಹೆಗಳ ಒಳಗೋಡೆ ಮತ್ತು ಮೇಲ್ಛಾವಣಿಗಳಲ್ಲಿ ಇರುವುದು ಸಾಮಾನ್ಯವಾದರೂ ಕೆಲವು ಸಲ ಗುಹೆಯ ಬಾಗಿಲಿನ ಸಮೀಪ ಹೊರಭಾಗದಲ್ಲಿಯೂ ರಚನೆಯಾಗಿರುತ್ತವೆ. ಗುಹಾಚಿತ್ರಗಳು ಗುಹೆಗಳ ಸಮತಟ್ಟಾದ ಬಂಡೆಯ ಸಹಜ ಮೇಲ್ಮೈಯಲ್ಲಿ ಸಾಮಾನ್ಯವಾಗಿ ರಚನೆಯಾಗಿದ್ದರೂ, ಕೆಲವು ವೇಳೆ ಬಂಡೆಯ ಅಂಕುಡೊಂಕು ಉಬ್ಬುತಗ್ಗು, ಕುಳಿಗಳನ್ನು ಕೂಡಾ ತಮ್ಮ ಚಿತ್ರಗಳಿಗೆ ಪೂರಕವಾಗಿ ಬಳಸಿಕೊಂಡಿದ್ದಾರೆ. ಬಂಡೆಯ ಮೇಲಿರುವ ಉಬ್ಬುತಗ್ಗುಗಳನ್ನು ದೇಹದ ವಿವಿಧ ಭಾಗಗಳಾದ ಭುಜಗಳು, ನಿತಂಬಗಳು, ಎದೆಯಉಬ್ಬು ಭಾಗಗಳಿಗೆ ಹೊಂದಿಸಿಕೊಂಡಿದ್ದಾರೆ. ಮೊಣಕಾಲು, ಮೊಣಕೈ ಭಾಗಕ್ಕೆ ಕಲ್ಲಿನ ಉಬ್ಬುಗಳು ಸಹಜವಾಗಿ ಬರುವಂತೆ ಸಂಯೋಜಿಸಿ ಚಿತ್ರಿಸಿದ್ದಾರೆ. ಕಲ್ಲಿನ ಮೇಲಿನ ತಗ್ಗುಗಳು ಮತ್ತು ಕುಳಿಗಳನ್ನು ಚಿತ್ರಿತ ಪ್ರಾಣಿಗಳಿಗೆ ದಕ್ಕೆಯಾಗದಂತೆ ಬಳಸಿಕೊಂಡಿದ್ದಾರೆ.[೧]

---

೧ ಪ್ರೊ. ಷೇಕ್ ಅಲಿ, ಕರ್ನಾಟಕ ಚರಿತ್ರೆ ಸಂಪುಟ – ೧, ಪುಟ, ೨೪೬

[illegible]

ಗವಿವರ್ಣ ಚಿತ್ರಗಳು :

ಈ ಚಿತ್ರಗಳು ಸಾಮಾನ್ಯ ಗವಿಯೊಳಗಿನ ಬಂಡೆಗಳ ಮೇಲೆ ರಚನೆಯಾಗಿದ್ದು ಕಂಡುಬರುತ್ತವೆ. ಸಹಜವಾಗಿಯೇ ಇಲ್ಲಿ ಬೆಳಕು ಕಡಿಮೆ. ಅಷ್ಟೇನೂ ಸುಲಭವಾಗಿ ಪ್ರವೇಶಿಸಲಾಗದಂತಹ ತೀರಾ ದುರ್ಗಮವಾದ ಗವಿಗಳಲ್ಲಿ ವರ್ಣಚಿತ್ರಗಳಿರುತ್ತವೆ. ಬಂಡೆಯಲ್ಲಿ ತೆವಳಿಕೊಂಡು ಹಾಗೂ ಕುಳಿತು ಸರಿಯುತ್ತಾ ಸಾಗಬೇಕು. ಸಾಮಾನ್ಯವಾಗಿ ಮನುಷ್ಯರ, ಪ್ರಾಣಿಗಳ ಮತ್ತು ವಿಚಿತ್ರವಾದ ರೇಖಾಚಿತ್ರಗಳು ಇರುತ್ತವೆ. ಜೊತೆಗೆ ಕೆಲವು ಗವಿಗಳಲ್ಲಿ ಸಮೂಹ ನೃತ್ಯ, ಪ್ರಾಣಿಗಳ ಸಾಲುಗಳು, ಮನುಷ್ಯರ ಜೋಡಿಗಳು ಚಿತ್ರಗಳಲ್ಲಿ ರಚಿತವಾಗಿವೆ. ಮನುಷ್ಯರು ನಿಂತ ಭಂಗಿಯಲ್ಲಿರುವುದು ಸರ್ವೆ ಸಾಮಾನ್ಯ.

ಪ್ರಾಣಿಗಳ ಮತ್ತು ಮನುಷ್ಯರ ಚಿತ್ರಗಳನ್ನು ಕೇವಲ ಬಾಹ್ಯ ರೇಖೆಗಳಿಂದ ಮಾತ್ರ ತೋರಿಸಲಾಗಿರುತ್ತದೆ. ಕಣ್ಣು, ಕಿವಿ, ಮೂಗು, ಬಾಯಿ, ಅಪರೂಪವಾಗಿ ಕೈಬೆರಳು, ಹಸ್ತ, ಪಾದಗಳನ್ನು ಸಹ ಸೂಚಿಸಿರುತ್ತದೆ. ಈ ಬಾಹ್ಯ ರೇಖೆಗಳ ಒಳ ಭಾಗವನ್ನು ಹಲವೆಡೆಗಳಲ್ಲಿ ಬಣ್ಣದಿಂದ ತುಂಬಲಾಗಿರುತ್ತದೆ. ಇಂಥ ಚಿತ್ರಗಳಲ್ಲಿ ಪ್ರಾಣಿ, ಮನುಷ್ಯರ ನೆರಳು ಇದ್ದಂತೆ ಇವು ಇರುತ್ತವೆ. ಈ ಆಕೃತಿಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುವುದಿಲ್ಲ. ಕೇವಲ ಒಂದೆರಡು ಅಥವಾ ಕೆಲವು ಚಿತ್ರಗಳು ಇರಬಹುದು, ಅಥವಾ ಹಲವಾರು ಚಿತ್ರಗಳೂ ಇರಬಹುದು ಎಲ್ಲ ಚಿತ್ರಗಳು ಒಂದೇ ಕಾಲದಲ್ಲಿ ರಚನೆಯಾಗಿಲ್ಲ. ಅದ್ದರಿಂದ ವಿವಿಧ ಪ್ರಮಾಣದ ಅಕೃತಿಗಳ ನಿರೂಪಣೆಯಲ್ಲೂ ಸ್ವಲ್ಪ ಭಿನ್ನತೆ ಇರುತ್ತದೆ. ಕ್ರಮವಾಗಿ ಒಂದು ಕಡೆಯಿಂದ ವ್ಯವಸ್ಥಿತವಾಗಿ ಬರೆದು ಸ್ಥಳವನ್ನು ತುಂಬಿಸದೆ, ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಅವರಿಗೆ ಅನುಕೂಲವಾದ ಭಾಗದಲ್ಲಿ ಚಿತ್ರಗಳನ್ನು ಬರೆದಂತೆ ಕಾಣುತ್ತದೆ. ಅದ್ದರಿಂದ ಚಿತ್ರಗಳು ಚೆಲ್ಲಾ ಪಿಲ್ಲಿಯಾಗಿರುವಂತೆ ಕಂಡುಬರುತ್ತದೆ. ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲಿ ರಚನೆಗೊಂಡಿರುವುದು ಕಾಣಬಹುದು. ಬಣ್ಣದ ಛಾಯೆಯು ಕಾಲ ಕಾಲದ ವೈಪರೀತ್ಯದಿಂದ ಹಾಗೂ ಇತರ ಕಾರಣಗಳಿಂದ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆಕಪ್ಪು ಹಾಗೂ ಮಿಶ್ರಹಳದಿ, ಮಸುಕುಬಿಳಿಯ ದ್ವಿವರ್ಣಗಳಲ್ಲೂ ಚಿತ್ರಗಳಿವೆ.[೨]

ಗುಹಾಚಿತ್ರಗಳು :

ಗುಹಾವರ್ಣ ಚಿತ್ರಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳು, ಮನುಷ್ಯರು, ಮತ್ತು ವಿಚಿತ್ರವಾದ ರೇಖಾಕೃತಿಗಳಿರುತ್ತವೆ. ಕೆಲವು ಗವಿಗಳಲ್ಲಿ ಸಮೂಹನೃತ್ಯ, ಜೋಡಿಮನುಷ್ಯರು, ಪ್ರಾಣಿಗಳ ಸಾಲುಗಳು ಇವೆ. ಮನುಷ್ಯರು ನಿಂತಭಂಗಿಯಲ್ಲಿರುವುದೇ ಹೆಚ್ಚು. ಆಕೃತಿಗಳು ನಿರ್ದಿಷ್ಟ ಪ್ರಮಾಣದಲ್ಲಿರುವುದಿಲ್ಲ. ಒಂದು ಸ್ಥಳದಲ್ಲಿ ಒಂದು, ಎರಡು ಕೆಲವು ಗುಹೆಗಳಲ್ಲಿ ಒಂದು ಕಾಲದಲ್ಲಿ ರಚಿತವಾದ ಚಿತ್ರಗಳ ಮೇಲೆಯೇ ಮತ್ತೊಬ್ಬರು ಅವುಗಳನ್ನು ಅಳಿಸದೇ

೨. ಪ್ರೊ. ಷೇಕ್ ಅಲಿ, ಕರ್ನಾಟಕ ಚರಿತ್ರೆ ಸಂಪುಟ – ೧, ಪುಟ, ೨೬೪

[illegible]

ಅದರ ಮೇಲೆಯೇ ಚಿತ್ರಗಳನ್ನು ರಚಿಸಿರುವುದರಿಂದ ಕೆಲವು ಚಿತ್ರಗಳು ಅನೇಕ ಪದರುಗಳನ್ನು ಹೊಂದಿವೆ ಇದರಿಂದ ಚಿತ್ರಗಳನ್ನು ನಿಖರವಾಗಿ ಗುರುತಿಸುವಲ್ಲಿ ಸಂದಿಗ್ಧತೆ ಉಂಟಾಗುತ್ತದೆ.

ಕರ್ನಾಟಕದ ಗುಹಾಚಿತ್ರಗಳಲ್ಲಿನ ಹೆಚ್ಚಿನ ಮನುಷ್ಯ ಚಿತ್ರಗಳು ರೇಖಾ ಪ್ರಧಾನವಾಗಿದ್ದು ಮೈಮೇಲೆ ವಿಚಿತ್ರವಾದ ರೇಖಾಕೃತಿಗಳನ್ನು ಚಿತ್ರಿಸಲಾಗಿದೆ. ಇವು ನಿಂತಭಂಗಿಯಲ್ಲಿದ್ದು, ಕೈಗಳನ್ನು ಮೇಲಕ್ಕೆಂತ್ತಿದಂತೆ ಇಲ್ಲದೆ ಟೊಂಕದ ಮೇಲೆ ಕೈಗಳನ್ನಿಟ್ಟಂತೆ ರಚನೆಯಾಗಿವೆ. ಜಗತ್ತಿನ ತುಂಬಾ ಅಲ್ಲಲ್ಲಿ ಕಂಡುಬಂದ ಇಂತಹ ಗುಹಾಚಿತ್ರಗಳ ರಚನೆಗೆ ಮಾನವನ ಭಾವತೀವ್ರತೆಯ ಅಭಿವ್ಯಕ್ತಿಯೊಂದೇ ಕಾರಣವಾಗಿರಲಾರದು. ಚೆಲುವನ್ನು ಕಾಣುವ ಅದನ್ನು ಹೆಚ್ಚಿಸುವ ದಿಸೆಯಲ್ಲಿ ಕಲಾ ಚಟುವಟಿಕೆಗಳು ಹುಟ್ಟಿಕೊಂಡರೂ ನಂತರದಲ್ಲಿ ಅವು ಬೇರೆ ಬೇರೆ ಉದ್ದೇಶಗಳಿಗಾಗಿಯೂ ಬಳಕೆಯಾಗತೊಡಗಿದವು.

ಮಾಂತ್ರಿಕ ಕಟ್ಟಳೆಗಳು :

ಪ್ರಾಗೈತಿಹಾಸಿಕ ಜನರ ಜೀವನದ ಪ್ರಧಾನ ಅಂಶವೆಂದರೆ ತಮ್ಮ ಜೀವನ ನಿರ್ವಹಣೆಗೆ ಅಹಾರ ಸಂಪಾದನೆ ಮಾಡುವುದು ಮತ್ತು ಅಹಾರವಾಗುವ ಪ್ರಾಣಿ ಪಕ್ಷಿಗಳ ಗಿಡಮರಗಳ ಸಮೃದ್ಧ ಬೆಳವಣಿಗೆ ಮತ್ತು ಅವುಗಳನ್ನು ದೊರಕಿಸುವ ಕುರಿತು ಚಿಂತಿಸುವುದಾಗಿತ್ತು. ಈ ಆಶೋತ್ತರಗಳಿಗೆ ಮತ್ತು ತಮ್ಮ ವಂಶಾಭಿವೃದ್ದಿಗಾಗಿ ಕೆಲವು ನಂಬಿಕೆಗಳು, ತತ್ಸಂಬಂಧ ಕಟ್ಟುಕಟ್ಟಳೆಗಳು ಬೆಳೆದು ಬಂದರಬೇಕು. ಇವುಗಳನ್ನು ಪೂರೈಸುವ ಪ್ರಕ್ರಿಯೆಯ ಭಾಗವಾಗಿಯೂ ಗುಹಾ ಚಿತ್ರಗಳು ರಚನೆಯಾಗಿರಬೇಕು ಗರ್ಭಧರಿಸಿದ ಪ್ರಾಣಿ, ಗರ್ಭಿಣಿಸ್ತ್ರೀ, ಬಾಣ, ಈಟಿಯಿಂದ ಚುಚ್ಚಲ್ಪಟ್ಟ ಪ್ರಾಣಿ, ಪ್ರಾಣಿಗಳ ಬೇಟೆಗೆ ಹೋಗುವ ಮುಂಚೆ ಯಶಸ್ಸನ್ನು ಬೇಡುವ ಸಮೂಹ ನೃತ್ಯ, ಮುಖವಾಡ ಧರಿಸಿದ ವ್ಯಕ್ತಿಗಳು, ಮೈಮೇಲೆ ಚಿತ್ರಬರೆದುಕೊಂಡಿರುವ ನಗ್ನ ವ್ಯಕ್ತಿಗಳು, ಸ್ತ್ರೀಯರ ನಗ್ನ ಗುಪ್ತಕುಣಿತಗಳು, ಮಿಥುನಕ್ರಿಯೆಯ ಸಂಕೀರ್ಣ, ಚಿತ್ರಗಳು ಕೆಲವು ಸಾಂಕೇತಿಕ ಮಂಡಲ ಚಿತ್ರಗಳು, ಇಂತಹ ಕೆಲವು ಲಕ್ಷಣಗಳನ್ನು ಗಮನಿಸಿ ವಿದ್ವಾಂಸರು ತಾಂತ್ರಿಕ ಕಟ್ಟಳೆಯ ವಿಧಾನದ ಚಿತ್ರಗಳೂ ಇರಬಹುದೆಂದು ತರ್ಕಿಸಿದ್ದಾರೆ.

ಈ ಗುಹಾಚಿತ್ರಗಳಲ್ಲಿ ಕೆಲವು ಸುಲಭವಾಗಿ ಹೋಗಿನೋಡಲು ಸಾದ್ಯವಾಗದ ಸ್ಥಳದಲ್ಲಿವೆಯಲ್ಲದೇ ಉದ್ದೇಶ ಪೂರ್ವಕವಾಗಿ ಅತಿರೇಕಿಸಿ ಚಿತ್ರಿಸಲಾಗಿದೆ. ಪ್ರಾಯಶಃ ಇಂತಹ ಬಹಳಷ್ಟು ಚಿತ್ರಗಳನ್ನು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಪ್ರಾಗೈತಿಹಾಸಿಕ ಮಾನವರು ತಮ್ಮ ತಮ್ಮ ಸಮಾಜದ ನಂಬಿಕೆಗಳಂತೆ ಮಾಂತ್ರಿಕ ಕಟ್ಟಳೆಗಳನ್ನು ನಡೆಸುವ ಕಾಲದಲ್ಲಿ ಅವುಗಳನ್ನು ಒಂದು ಅಂಗವಾಗಿ ರೂಪಸಿದ ಚಿತ್ರಗಳೆಂದು ಅಭಿಪ್ರಾಯಪಡಲಾಗಿದೆ.[೩]

---

೩. ಪ್ರೊ. ಷೇಕ್ ಅಲಿ, ಕರ್ನಾಟಕ ಚರಿತ್ರೆ ಸಂಪುಟ – ೧, ಪುಟ, ೨೬೬

ಚಿತ್ರದುರ್ಗದ ಪ್ರಾಗೈತಿಹಾಸಿಕ ನೆಲೆಗಳು :

ಚಿತ್ರದುರ್ಗ ಪ್ರದೇಶದಲ್ಲಿ ಬಯಲು ಬಂಡೆಯ ಕುಟ್ಟಿ ಕೊರೆದ ರೇಖಾಚಿತ್ರಗಳ ಮತ್ತು ಗವಿವರ್ಣ ರೇಖಾಚಿತ್ರಗಳ ನೆಲೆಗಳನ್ನು ಕೆಳಗಿನಂತೆ ಹೆಸರಿಸಬಹುದಾಗಿದೆ.

೧. ಚಂದ್ರವಳ್ಳಿ ಪರಿಸರ
೨. ಬೂದರದಿಬ್ಬ ಮತ್ತು ಕೋಟೆ ಪರಿಸರ
೩. ತಮಟೆಗಲ್ಲು ಪರಿಸರ
೪. ಚೋರಗುಡ್ಡ – ಕವಾಡಿಗರಹಟ್ಟಿ – ಸೊಲ್ಲಾಪುರ ಪರಿಸರ
೫. ಗಂಜಿಗುಂಟೆ – ಪಂಢರಹಳ್ಳಿ ಪರಿಸರ
೬. ಕುಂಚಿಗನಹಾಳು – ದೊಡ್ಡಸಿದ್ಧವನಹಳ್ಳಿ ಗುಡ್ಡ ಪರಿಸರ
೭. ಸಂಗೇನಹಳ್ಳಿ ಪರಿಸರ
೮. ಬೆಳಗಟ್ಟ ಪರಿಸರ

೧. ಚಂದ್ರವಳ್ಳಿ ಪರಿಸರ :

ಚಂದ್ರವಳ್ಳಿ ಪರಿಸರ ಚಿತ್ರದುರ್ಗ ಜಿಲ್ಲೆಯ ವಾಯುವ್ಯ ಭಾಗದಲ್ಲಿ ಚಿತ್ರದುರ್ಗದಿಂದ ಸುಮಾರು ೩ ಕಿ.ಮೀ. ಅಂತರದಲ್ಲಿ ಕಿರುಬನಕಲ್ಲು ಮತ್ತು ಚೋಳರಗುಡ್ಡ ಸೇರಿ ಅರ್ಧ ಚಂದ್ರಾಕೃತಿಯ ಕಣಿವೆಯಂತಿದೆ. ಈ ಪ್ರದೇಶದಲ್ಲಿ ಉಂಟಾಗಿದೆ. ಸುಮಾರು ೭೩೦, ಚ.ಕೀ. ವಿಸ್ತಾರದಲ್ಲಿರುವ ಈ ಚಾರಿತ್ರಿಕ ಸ್ಥಳವನ್ನು ೧೯೦೯, ೧೯೨೨, ೧೯೨೮ ಮತ್ತು ೧೯೭೭ರಲ್ಲಿ ಪರಿಶೋಧಿಸಲಾಗಿದೆ. ಇಲ್ಲಿಯೂ ಮೂರು ಸಂಸ್ಕೃತಿಯ ಜನವಸತಿಯ ಇತಿಹಾಸ ಪೂರ್ವಜರು ವಾಸವಾಗಿದ್ದು ಕಂಡುಬರುತ್ತದೆ. ಶಾತವಾಹನ ಮತ್ತು ಕದಂಬರ ಕಾಲದ ಚಾರಿತ್ರಿಕ ಅವಶೇಷಗಳು ದೊರಕಿವೆ. ನೂತನ ಶಿಲಾಯುಗದ ಕಾಲದಲ್ಲಿ ಚಕ್ರಗಳು, ಗೋಲಾಕಾರದ ಮಣಿಗಳು ಕಪ್ಪು, ಕೆಂಪು ಬಣ್ಣದ ವಸ್ತುಗಳು ದೊರಕಿವೆ. ನೂತನ ಶಿಲಾಯುಗದ ಕಾಲದ ಟೆರ್ರಾಕೋಟಾ ವಸ್ತುಗಳು ದೊರಕಿವೆ. ಬಣ್ಣ ಬಣ್ಣದ ಕಲಾತ್ಮಕ ವಸ್ತುಗಳು, ಪಾತ್ರೆಗಳು ದೊರಕಿವೆ.

ಪುರಾತನ ಶಿಲಾಯುಗದಲ್ಲಿ ಚಂದ್ರವಳ್ಳಿ ಪ್ರದೇಶವು ಬೃಹದಾಕಾರದ ಕಲ್ಲುಬಂಡೆಗಳಿಂದ ನಿರ್ಮಿತವಾಗಿದ್ದು, ಇಲ್ಲಿ ನೈಸರ್ಗಿಕವಾದ ಅನೇಕ ಗುಹೆಗಳಿವೆ. ಪ್ರಸ್ತುತ ನೆಲಮಾಳಿಗೆಯ ಹಿಂಬದಿಯಲ್ಲಿ ಕಲ್ಲಿನ ಪೊಟರೆಗಳಲ್ಲಿ ನುಸುಳಿ ಬಲ್ಲಕ್ಕೆ ತಿರುಗಿದರೆ ಕಲ್ಲಸರೆಗಳ ಗುಹೆಗಳಿವೆ. ಅದೇ ಭಾಗದಲ್ಲಿ ಚಾಚುಬಂಡೆ ಇದ್ದು, ಅದರ ಮೇಲ್ಭಾಗದಲ್ಲಿ ಸುಂದರವಾದ ಅರ್ಧಚಂದ್ರಾಕೃತಿಯ ಮೇಲ್ಛಾವಣಿ ಇದೆ. ಆ ಸ್ಥಳವು ಭೂಮಿಯಿಂದ ಸುಮಾರು ೧೦ ಅಡಿ ಎತ್ತರವಾಗಿದೆ. ಯಾವುದೇ ಪ್ರಾಣಿಗಳಿಂದ ಮತ್ತು ಪ್ರಕೃತಿಯ ಬಿಸಿಲು ಮಳೆಯಿಂದ ಸುರಕ್ಷಿತವಾಗಿದೆ. ಆ ಸ್ಥಳದ ಮೇಲ್ಛಾವಣಿಯಲ್ಲಿ ಅನೇಕ ಬಿಳಿ ವರ್ಣಚಿತ್ರಗಳನ್ನು ರಚನೆ

[illegible]

ಮಾಡಿದ್ದಾರೆ. ಇಲ್ಲಿನ ರೇಖಾಚಿತ್ರಗಳಿಗೆ ಬಿಳಿ ಮತ್ತು ಕೆಂಪು ವರ್ಣಗಳನ್ನು ಚಿತ್ರಕ್ಕೆ ಬಳಸಿದ್ದಾರೆ.

ಚಂದ್ರವಳ್ಳಿ ಪರಿಸರದ ಚಿತ್ರಗಳ ವಿವರಣೆ :

ಚಂದ್ರವಳ್ಳಿ ಕೆರೆಯ ವಿಹಂಗಮ ನೋಟ : ಚಿತ್ರದುರ್ಗದ ವಾಯುವ್ಯ ಭಾಗದಲ್ಲಿ ಇರುವ ಈ ಸ್ಥಳ ಕಿರುಬನಕಲ್ಲು ಮತ್ತು ಚೋಳಗುಡ್ಡ ಸೇರಿ ಉಂಟಾಗಿರುವ ಅರ್ಧ ಚಂದ್ರಾಕೃತಿಯ ಕಣಿವೆಯಂತಿದೆ. ಈ ಪರಿಸರದಲ್ಲಿ ಸುಮಾರು ೭೩೦x೭೩೦ ಚದುರ ಮಿಟರ್ ವಿಸ್ತಾರದಲ್ಲಿರುವ ಈ ಚಾರಿತ್ರಿಕ ಸ್ಥಳವನ್ನು ೧೯೦೯ ರಿಂದ ೧೯೭೭ ರವರೆಗೆ ಸಂಶೋಧನೆ ಮತ್ತು ಉತ್ಖನನ ಮಾಡಿ ಈ ಪ್ರದೇಶದಲ್ಲಿ ಮೂರು ಸಂಸ್ಕೃತಿಗಳು ಜೀವಿಸಿರುವ ಕುರುಹುಗಳು ಬೆಳಕೆಗೆ ಬಂದಿವೆ. ಈ ಪ್ರದೇಶವು ಆದಿಹಳೆಯ ಶಿಲಾಯುಗದಿಂದಲೂ ಆದಿಮಾನವರು ವಾಸಿಸಲು ಯೋಗ್ಯವಾದ ಗುಹೆಗಳು, ನೀರಿನ ಹೊಂಡ, ಆಹಾರಕ್ಕಾಗಿ ಗೆಡ್ಡೆ ಗೆನಸು ಹಾಗಾಗಿ ಮನುಷ್ಯರು ಮತ್ತು ಪ್ರಾಣಿಗಳು ಸಂತೃಪ್ತಿಯಾಗಿ ಜೀವಿಸಿದ್ದರು ಎನ್ನಬಹುದು.

ಜೋಡಿ ನೃತ್ಯ : ಪರಸ್ಪರ ಮಾನವರಿಬ್ಬರು ಕೈಕೈ ಹಿಡಿದು ನೃತ್ಯ ನಿರತರಾಗಿದ್ದಾರೆ. ಅದೇ ಪ್ರಕಾರ ಮತ್ತೊಂದು ಜೋಡಿಯನ್ನು ಚಿತ್ರಿಸಿದ್ದು, ಅದು ಅಸ್ಪಷ್ಟವಾಗಿದೆ. ಬಿಳಿವರ್ಣಗಳಿಂದ ಚಿತ್ರಿಸಲಾದ ಚಿತ್ರವು ರೇಖಾಪ್ರಧಾನವಾಗಿದೆ. ಶಿಲಾ ಸಂಸ್ಕೃತಿಯ ಕಾಲಮಾನಕ್ಕೆ ಸೇರಿರಬಹುದೆಂಬ ಅಭಿಪ್ರಾವಿದೆ. ಪ್ರಸ್ತುತ ಪ್ರಸ್ತುತವಾಗಿ ಮಾನವನ ಕೈಚಳಕದಿಂದ ಈ ಚಿತ್ರಕ್ಕೆ ದಕ್ಕೆ ತಂದು ನಶಿಸಿಹೋಗಿವೆ.

ಕಲ್ಲಾಸರೆಯ ಗುಹೆಗಳು : ಚಂದ್ರವಳ್ಳಿಯ ಪರಿಸರದಲ್ಲಿ ಬೃಹತ್ ಕಲ್ಲುಬಂಡೆಗಳಿಂದ ನಿರ್ಮಾಣವಾದ ನೈಸರ್ಗಿಕ ಗುಹೆ ಭೂಮಟ್ಟದಿಂದ ಸುಮಾರು ೧೦ ಅಡಿ ಎತ್ತರದಲ್ಲಿದೆ ಅರ್ಧ ಚಂದ್ರಾಕಾರದಲ್ಲಿ ಈ ಗುಹೆಯಿದೆ. ಇದು ಆದಿಮಾನವರಿಗೆ ಪ್ರಾಕೃತಿಕವಾಗಿ, ಕೃತಕವಾಗಿಯು ಸುರಕ್ಷಿತ ತಾಣವಾಗಿದೆ. ಈ ಸ್ಥಳದಲ್ಲಿ ಹಾಸುಬಂಡೆಯ ಮೇಲೆ ಆದಿಮಾನವರು ಕುಟ್ಟಿದ ಕುಳಿಗಳಂತಹ ಗುಂಡಿಗಳಿವೆ, ಇವು ಅವರ ಆಹಾರ ತಯಾರಿಕೆಗೋ ಅಥವಾ ಇನ್ನಾವುದೋ ಅವಶ್ಯಕತೆಗೆ ಬಳಕೆಯಾಗಿರಬಹುದು.

ಬೃಹತ್ ಕಲ್ಲು ಬಂಡೆಗಳು : ದೊಡ್ಡ ದೊಡ್ಡ ಕಲ್ಲುಗಳನ್ನು ರಾಶಿ ಹಾಕಿದಂತೆ ಇವೆ. ಈ ಪ್ರದೇಶದಲ್ಲಿ ಇಂತಹ ಹಲವಾರು ನೈಸರ್ಗಿಕ ಗವಿ ಪೊಟರೆಗಳಿವೆ. ಅವುಗಳು ಆದಿಮಾನವರ ವಾಸಕ್ಕೆ ಯೋಗ್ಯವಾದ ನೆಲೆಗಳಾಗಿವೆ.

ಹುಲಿಯ ಗೀರು ಚಿತ್ರ : ಚಂದ್ರವಳ್ಳಿ ಪರಿಸರವನ್ನು ಪ್ರವೇಶಿಸುವ ಮೊದಲೆ ಕಾಣಸಿಗುವಂತಹ ಬೃಹದಾಕಾರದ ಕಲ್ಲುಬಂಡೆಯ ಮೇಲೆ ಕುಟ್ಟಿ ಕೊರೆದ ವಿಶಿಷ್ಟ ತಳಿಯ ಹುಲಿಯ ಚಿತ್ರವಾಗಿದೆ. ಕಾಲುಗಳನ್ನು ಮುಂಚಾಚಿದ ದೇಹದ ಮೇಲೆ ಬಿಡಿಯಾದ ಪಟ್ಟೆಗಳನ್ನು ಎಕ್ಸ್ ಆಕಾರದಲ್ಲಿ ರಚಿಸಿದ್ದು, ಅಂದಿನ ಸಮಯದಲ್ಲಿ ಆದಿಮಾನವ ನೆಲೆಗಳನ್ನು ಪ್ರತ್ಯೇಕಿಸಲು

ಚಿತ್ರದುರ್ಗ :



೧. ಚಂದ್ರವಳ್ಳಿ

೨. ಭೂದರದಿಬ್ಬ

೩. ನಗರದ

೪. ಚೋರಗುಡ್ಡ

೫. ಗಂಜಿಗಟ್ಟೆ

೬. ಕುಂಚಿಗನಹಾಳು

೭. ಸಂಗೇನಹಳ್ಳಿ


೮. ಬೆಳಗಟ್ಟ



ಚಿತ್ರದುರ್ಗದ ಚಂದ್ರವಳ್ಳಿ ಪರಿಸರ



ಚಂದ್ರವಳ್ಳಿ ಕೆರೆ ವಿಹಂಗಮ ನೋಟ





ಜೋಡಿ ನೃತ್ಯ ಬಿಳಿವರ್ಣ ಚಿತ್ರ





ಅಸ್ಪಷ್ಟ ಬಿಳಿವರ್ಣ ಚಿತ್ರಗಳು

ಚಂದ್ರವಳ್ಳಿ ಪರಿಸರ



ಹುಲಿಯ ಗೀರು ಚಿತ್ರ





ಮಂಡಲ, ಮನುಷ್ಯರ ಗೀರು ಚಿತ್ರ





ಹೊಯ್ಸಳರ ಕಾಲದ ಶಾಸನ

ಮಾಡಿದ ಒಂದು ಬಗೆಯ ಲಾಂಛನವಿರಬಹುದು. ಎಂದು ಅಭಿಪ್ರಾಯಪಡಬಹುದು.

ಮಂಡಲ ಚಿತ್ರ : ಈ ಚಿತ್ರವು ಸಹ ಹಾಸುಕಲ್ಲಿನಲ್ಲಿ ರಚಿಸಲಾಗಿದೆ. ಚೌಕಕಾರದ ದ್ವಾರಗಳಿದ್ದು, ಯಾವುದೋ ಒಂದು ನಿಗೂಢ ಮಾರ್ಗಸೂಚಿಯಂತಿದೆ. ಇದರ ಎದುರುಗಡೆ ಇರುವ ಬಂಡೆಯ ಮೇಲೆ ಮಾನವನ ಮುಂಡವನ್ನು ಹೊರತು ಪಡಿಸಿ ಕೇವಲ ಎರಡು ಕಾಲುಗಳನ್ನು ಮಾತ್ರ ಚಿತ್ರಿಸಲಾಗಿದೆ, ಪಕ್ಕದಲ್ಲಿ ಚಿಕ್ಕ ಮಾನವನ ರೇಖಾಚಿತ್ರವಿರುವುದನ್ನು ಕಾಣಬಹುದು.

ಹೊಯ್ಸಳ ಕಾಲದ ಲಿಪಿಗಳು : ಚಂದ್ರವಳ್ಳಿ ಪರಿಸರವು ಅಂದಿನ ಕಾಲದಲ್ಲಿ ಮೌರ್ಯ ಶಾತವಾಹನರು ನೊಳಂಬ ಅಳ್ವಿಕೆ ನೆಡೆಸಿರುವ ಮತ್ತು ಶಾಸನವು ಇದೆ. ಹೊಯ್ಸಳರ ಕಾಲದಲ್ಲಿ ಕೆತ್ತಲಾದ ಕೆಲವು ಲೀಪಿಗಳಿವೆ ಈ ಲಿಪಿಗಳ ಆದಿಮಾನವ ರೇಖಾ ಚಿತ್ರಗಳಂತೆ ಕಾಣುತ್ತೇವೆ.

೨. ಬೂದರದಿಬ್ಬ ಮತ್ತು ಕೋಟೆ ಪರಿಸರ :

ಡಾ. ಅ. ಸುಂದರ ಅವರು ನಿರ್ಣಯಿಸಿರುವಂತೆ ಹಾಗೂ ಪ್ರೊ. ಲಕ್ಷ್ಮಣ್ ತೆಲಗಾವಿ ಅಭಿಪ್ರಾಯದಂತೆ, ಚಿತ್ರದುರ್ಗ ಕೋಟೆಯ ಆಗ್ನೇಯ ದಿಕ್ಕಿಗಿರುವ ಬೂದರದಿಬ್ಬ ಪ್ರಾಚೀನ ನಿವೇಶದಲ್ಲಿ ನೂತನ ಶಿಲಾಯುಗ, ಕಬ್ಬಿಣಯುಗದ ಶಿಲಾಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಈ ಪರಿಸರದಲ್ಲಿ ನೆಲಸಿದ್ದ ಸಂಸ್ಕೃತಿಯ ಕಾಲಮಾನ ಕ್ರಿ.ಪೂ. ೬೦೦ ರಿಂದ ೭೦೦ರ ಆರಂಭದಲ್ಲಿ ಗಮನಿಸಿದ ಬಿಳಿ ಮತ್ತು ಕೆಂಪು ರೇಖಾಚಿತ್ರ ಹಾಗೂ ಬಯಲು ಬಂಡೆಯ ರೇಖಾಕೃತಿಗಳು ಬೆರಳೆಣಿಕೆಯಷ್ಟೇ ಕಂಡು ಬಂದಿದ್ದವೆಂದು ತಿಳಿದಿದ್ದು ಇತ್ತೀಚಿನ ನಿರಂತರ ಸಂಶೋಧನೆಯಿಂದ ಗೂಳಿ, ಗೂಳಿಸಾಲು, ಮನುಷ್ಯ, ಪಾದಗಳು, ಜ್ಯಾಮಿತಿ ವಿನ್ಯಾಸ ಇತ್ಯಾದಿ ಅನೇಕ ಸಂಖ್ಯೆಯಲ್ಲಿ ಕೊರೆದ (ಎನ್‌ಗ್ರೇವ್ಡ್) ಮತ್ತು ಉಜ್ಜಿ (ಬ್ರೂಯಿಸಿಂಗ್ಸ್) ಮೂಡಿಸಿದ ಮಂತ್ರ ಮಂಡಲಗಳಂತಹ ಆಕೃತಿಗಳು ಈ ಪರಿಸರದ ಬೃಹತ್ ಬಂಡೆಗಳ ಮೇಲ್ಭಾಗದ ಕಂಡುಬಂದಿವೆ.[೪]

ಈ ಪ್ರದೇಶದಲ್ಲಿ ಬಟ್ಟಲಾಕಾರದ ಕುಳಿಗಳ, ಕಂಠಿಯನ್ನು ಹೋಲುವ ಅಳವಾದ ಕೊರೆದ ಚಿತ್ರಗಳು ಹಲವಾರು ಕಂಡುಬರುತ್ತವೆ. ತಿಮ್ಮಣ್ಣನಾಯಕನಕೆರೆ, ಧವಳಪ್ಪನಗುಡ್ಡ ಹಾಗೂ ಚಂದ್ರವಳ್ಳಿ ಪರಿಸರಗಳಲ್ಲಿ ಕೇವಲ ಇತಿಹಾಸ ಪೂರ್ವಕಾಲದವೇ ಅಲ್ಲದೆ ಚಾರಿತ್ರಿಕ (ಐತಿಹಾಸಿಕ) ಕಾಲದ ರೇಖಾಚಿತ್ರಗಳು ಅಪಾರ ಸಂಕಗಳಲ್ಲಿವೆ ಗೂಳಿ, ಅಶ್ವ, ಗಜ, ಒಂಟೆ, ವೀರ ಪುರುಷ ಮತ್ತು ಸ್ತ್ರೀಯರು, ಪೂರ್ಣ ಪ್ರಮಾಣದ ಮನುಷ್ಯ, ಸೊಂಟದ ಕೆಳಭಾಗವನ್ನು ಮಾತ್ರ ರಚಿಸುದು ದೊಡ್ಡ ಮನುಷ್ಯಾಕೃತಿ ಮತ್ತು ಬಲ ಬದಿಯಲ್ಲಿ ನಾಯಿಯನ್ನು ಹೋಲುವ

---

೪. ಡಾ. ಆರ್. ಗೋಪಾಲ್ (ಸಂ), ಪ್ರೊ ಲಕ್ಷ್ಮಣ್ ತೆಲಗಾವಿ (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೩೯

ಪ್ರಾಣಿ, ಬಾಣಹೊಡಿದ ಬಿಲ್ಲು ಸಹಿತವಿರುವ ಮನುಷ್ಯ ಚಿತ್ರ ಕೋಟೆಯ ನಕ್ಷೆ ಯುದ್ಧ ಚಿತ್ರಣ, ಲೈಂಗಿಕ ದೃಶ್ಯಾವಳಿ ಮೊದಲಾದವನ್ನು ರಚಿಸಲಾಗಿದೆ ಈ ಎಲ್ಲಾ ಚಿತ್ರಗಳು ಸಾಮಾನ್ಯವಾಗಿ ಅಂದಿನ ಜನರ ಅಭಿರುಚಿ, ಸಾಮಾಜಿಕ ಸ್ಥಾನಮಾನ ಇತ್ಯಾದಿಗಳ ಪ್ರತೀಕವಾಗಿವೆ.

೩. ತಮಟೆಗಲ್ಲು ಪರಿಸರ :

ಚಿತ್ರದುರ್ಗದಿಂದ ಹೊಳಲ್ಕರೆ ರಸ್ತೆಯಲ್ಲಿಸಿಗುವ ಮದ್ದೇನಹಳ್ಳಿ ರಸ್ತೆಯ ಎಡಬದಿ ಸುಮಾರು ೬ ಕಿ.ಮೀ. ದೂರದಲ್ಲಿರುವ ತಮಟಗಲ್ಲಿನತ್ತ ಸಾಗುವ ಹಸಿರು ಶಿಲಾಶ್ರೇಣಿ (ಗ್ರೀನ್ ಸ್ಟೋನ್ ವೆಲ್ಟ್) ಯಲ್ಲಿ ರೇಖಾಕೃತಿ ಸಮೂಹ ಸಂಶೋಧನೆಗೊಂಡಿವೆ ಕೊರೆದ, ಕುಟ್ಟಿದ ಉಜ್ಜಿದ ಈ ಮೂರು ಬಗೆಯಲ್ಲೂ ರಚಿಸಲಾದ ರೇಖಾಚಿತ್ರಗಳಿವೆ ಇತಿಹಾಸ ಪೂರ್ವದಿಂದ ಆದಿಚಾರಿತ್ರಿಕ ಕಾಲದ ಪ್ರಸಿದ್ಧ ನಿವೇಶನಗಳಿರುವ ಈ ತಮಟಗಲ್ಲು ಗುಡ್ಡದ ತುದಿಯಲ್ಲಿ ಹಾವಿನಹೆಡೆಯಾಕಾರದ ಬಂಡೆಯ ಒಳಪಾರ್ಶ್ವದಲ್ಲಿ ಬಿಳಿ ಮತ್ತು ಕೆಂಪುವರ್ಣಗಳಲ್ಲಿ ಗೂಳಿಗಳ ಮತ್ತು ಮನುಷ್ಯರ ರೇಖಾಚಿತ್ರಗಳಿವೆ.

೪. ಚೋಳಗುಡ್ಡ – ಕವಾಡಿಗರಹಟ್ಟಿ – ಸೊಲ್ಲಾಪುರ ಪರಿಸರ :

ಚಿತ್ರದುರ್ಗದಿಂದ ಪಶ್ಚಿಮದಿಕ್ಕಿನಲ್ಲಿರುವ ಚೋಳಗುಡ್ಡ ಜಾಲಿಕಟ್ಟೆ – ಕವಾಡಿಗರಹಟ್ಟಿ – ಸೊಲ್ಲಾಪುರ ಪರಿಸರದಲ್ಲಿ ವಿಫುಲವಾಗಿ ಬಯಲುಬಂಡೆ ರೇಖಾಕೃತಿಗಳನ್ನೂ ಒಳಗೊಂಡಿವೆ. ಮಂಡಲಾಕೃತಿ, ಜಾಮಿತಿಯಾಕೃತಿ, ಕುಳಿಗಳೂ, ಹಾಗೂ ಸೊಲ್ಲಾಪುರ – ಟಗರಿನಹಟ್ಟಿಗಳ ನಡುವೆ ಬಂಡೆಗಳ ಮೇಲೆ ಉಜ್ಜಿ ಮಾಡಿಸಿದ ಮತ್ತು ವಿಶಿಷ್ಟ ಕೊರೆಚಿತ್ರಗಳು ಕಾಣಬಹುದು. ಸಿದ್ದಾಪುರದ ಬಳಿ ಭೀಮಸಮುದ್ರದ ಮಾರ್ಗದಲ್ಲಿ ಕಪ್ ಮಾರ್ಕ್‌ಗಳಿಂದ ತುಂಬಿದ ಬೃಹತ್ ಬಂಡೆ ಇದೆ. ಇಲ್ಲಿ ಮಂಡಲಾಕೃತಿಯ ಕೊರೆದ ಚಿತ್ರಗಳು ಕಂಡು ಬಂದಿವೆ.

೫. ಗಂಜಿಗುಂಟೆ – ಪಂಢರಹಳ್ಳಿ ಪರಿಸರ :

ಚಿತ್ರದುರ್ಗ ಪಶ್ಚಿಮಕ್ಕೆ ೧೦ ಕಿ. ಮೀ ದೂರದಲ್ಲಿರುವ ಗಂಜಿಗುಂಟೆ, ಪಂಢರಹಳ್ಳಿ ಪರಿಸರ ಇತಿಹಾಸ ಪೂರ್ವಜರ ನೆಲೆಯಾಗಿದ್ದು, ಇಲ್ಲಿ ಮೂರು ಸಂಸ್ಕೃತಿಗಳು ಜೀವಿಸಿದ ಕುರುಹುಗಳನ್ನು ಗುರುತಿಸಬಹುದು. ಕೆಂಪು, ಬಿಳಿವರ್ಣ ರೇಖಾಚಿತ್ರದ ಜೊತೆ ಕುಟ್ಟಿದ ಹಾಗೂ ಊರಿದ ಪ್ರಾಣಿ ಸಮೂಹ ರೇಖಾಕೃತಿಗಳೂ ದೊರೆತಿವೆ.[೫] ವಿಶಿಷ್ಟವೆಂದರೆ ಮುಂಚಾಚಿದ ಕೊಂಬುಗಳು, ಗೂಳಿಯಾಕೃತಿಗಳನ್ನು ರಚಿಸಿದ್ದಾರೆ. ಚಿತ್ರದುರ್ಗದಿಂದ ಪೂರ್ವಕ್ಕೆ ಬೆಂಗಳೂರು ರಸ್ತೆಯಲ್ಲಿ ೪ ಕಿ.ಮೀ. ಅಂತರದಲ್ಲಿ ಕುಂಚಿಗನಾಳು ಗ್ರಾಮವಿದೆ. ಇದಕ್ಕೆ ಹೊಂದಿಕೊಂಡು ಸಣ್ಣಮರಡಿ (ಚೆನ್ನಮರಡಿ) ಯಲ್ಲಿ ಗೂಳಿ, ಸ್ತ್ರೀ, ಪುರುಷರು, [೫].

೫. ಡಾ. ಆರ್. ಗೋಪಾಲ್ (ಸಂ), ಪ್ರೊ. ಲಕ್ಷ್ಮಣ್ ತೆಲಗಾವಿ (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ೪೦

ಜ್ಯಾಮಿತಿಯಾಕೃತಿ, ಕುಳಿಯಾಕೃತಿಗಳು ಸಿಕ್ಕಿವೆ. ಇಲ್ಲಿಂದ ನೈರುತ್ಯಕ್ಕೆ ಕುರುಬರ ಮರಡಿಕೆರೆಯಿಂದ ಇಂಗಳದಾಳು ಕುಂಚಿಗನಹಾಳು ವರೆಗಿನ ಗುಡ್ಡಗಳ ಪರಿಸರದಲ್ಲಿ ಬೃಹತ್‌ಶಿಲಾಯುಗದ ಕಲ್ಲುಗೋರಿಗಳು ಪ್ರಮುಖವಾಗಿ ಕಂಡುಬಂದಿವೆ.

ಕ್ರಿಪೂ. ೩–೪ನೇ ಶತಮಾನದಿಂದಲೇ ಜನವಸತಿ ಇತ್ತೆಂದು ತಿಳಿದುಬಂದಿದೆ. ಕಾರಣ ಇಲ್ಲಿ ಚಿಕ್ಕ ಮತ್ತು ತಾಮ್ರದ ಗಣಿಗಾರಿಕೆ ಕ್ರಿ ಪೂ. ೨೩೦ ರಿಂದ ಕ್ರಿ ಶ. ೨೨೦ರ ಕಾಲಾವಧಿಯಲ್ಲಿ ಶಾತವಾಹನರ ಕಾಲದಲ್ಲಿ ಗಣಿಯಲ್ಲಿ ದೊರೆತ ಕೆಲವು ಪ್ರಾಚೀನ ಅವಶೇಷಗಳ ಪೈಕಿ ಆಯ್ದ ಒಂದು ಮರದ ತುಂಡನ್ನು ಪರೀಕ್ಷೆಗೆ ಒಳಪಡಿಸಿದಾಗ ಖಚಿತವಾಗಿದೆ. (ಆರ್ ಶಂಕರ್ ದಿ ಜರ್ನಲ್ ಆಫ್ ದಿ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ! ೩೩–೧, ೧೬೮೯) ಇಲ್ಲಿ ಕಂಡುಬಂದ ಬಾಗಿದ ಉದ್ದ ಕೋಡಿನ ಗೂಳಿಗಳ ಕೊರೆದ ಚಿತ್ರಗಳಿವೆ.[೬]

೬. ಕುಂಚಿಗನಹಾಳು – ದೊಡ್ಡಸಿದ್ಧವನಹಳ್ಳಿ ಗುಡ್ಡ ಪರಿಸರ :

ಕುಂಚಿಗನ ಹಾಳುವಿನ ಪೂರ್ವಕ್ಕಿರುವ ದೊಡ್ಡಸಿದ್ದವನಹಳ್ಳಿ ಗುಡ್ಡದಲ್ಲಿ ತೀರ ಎತ್ತರದ ಪ್ರದೇಶದ ಬಂಡೆಯ ಮೇಲೆ ಕುಟ್ಟಿ ಮೂಡಿಸಿದ ಪ್ರಾಣಿ, ಮನುಷ್ಯ ಹಾಗೂ ವಿಶಿಷ್ಟ ಬಗೆಯ ಚಿತ್ರಗಳು ನೆಲಸಮತಟ್ಟಿನ ವಿಶಾಲ ಬಂಡೆಯ ಮೇಲೆ ಕುಳಿಗಳನ್ನು ಮತ್ತು ರೇಖಾಕೃತಿಗಳನ್ನು ಕಾಣಬಹುದು.

೭. ಸಂಗೇನಹಳ್ಳಿ ಪರಿಸರ :

ಚಿತ್ರದುರ್ಗದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿ ಸಂಗೇನಹಳ್ಳಿ ಪರಿಸರವಿದೆ. ಇಲ್ಲಿಯ ಮಹತ್ವದ ಶೋಧನಾ ಕಾರ್ಯ ನೆಡೆದಿದ್ದು, ಇಲ್ಲಿನ ಬಂಡೆಗಲ್ಲಿನ ಮೇಲೆ ಕುಟ್ಟಿ, ಕೊರೆದ ಮೂಡಿಸಿದ ಪ್ರಾಣಿ, ಮನುಷ್ಯ, ಜಾಮಿತಿಯ ವಿನ್ಯಾಸದ ಚಿತ್ರಗಳು ಕಂಡುಬಂದಿವೆ. ಪ್ರಮುಖ ಅಂಗವೆಂದರೆ ಆದಿಚಾರಿತ್ರಿಕ ಸಂಸ್ಕೃತಿಯ ಕುರುಹುಗಳು ಈ ಪರಿಸರದಲ್ಲಿ ಕಂಡುಬಂದಿವೆ.

೮. ಬೆಳಗಟ್ಟ ಪರಿಸರ :

ಚಿತ್ರದುರ್ಗ ತಾಲೂಕು ಬೆಳಗಟ್ಟ ಗ್ರಾಮ ಪರಿಸರದ ಬಯಲುಬಂಡೆ ರೇಖಾಚಿತ್ರಗಳು ಇತಿಹಾಸಪೂರ್ವ ಕಲೆಯ ದೃಷ್ಟಿಯಿಂದ ಪ್ರಮುಖವಾಗಿದೆ. ಚಿತ್ರದುರ್ಗ – ತುರುವನೂರು ಮಾರ್ಗದ ಸುಮಾರು ೧೧ ಕಿ.ಮೀ. ದೂರದ ಈಶ್ಯಾನಕ್ಕೆ ಎದ್ದುಲು ಬಂಡೆಗುಡ್ಡವು ಸುಮಾರು ೧೦೦ ಎಕರೆ ವಿಸ್ತೀರ್ಣವುಳ್ಳದು. ಇಲ್ಲಿನ ಕಲಾ ಸಂಪತ್ತು ವಿಸ್ಮಯವನ್ನುಂಟುಮಾಡಿದೆ. ತೆಲುಗಿನ ಈ ಅರ್ಥಕ್ಕೆ ಎತ್ತುಗಳ ಬಂಡೆ ಎಂದರ್ಥ. ಪ್ರಾಣಿವರ್ಗದ ರೇಖಾಕೃತಿಗಳು ಅನೇಕವಾಗಿರುವುದರಿಂದ ಈ ಹೆಸರು ಬಂದಿದೆ. ಈ ಪರಿಸರದಲ್ಲಿ ಪತ್ತೆಯಾದ

೬ ಡಾ. ಆರ್. ಗೋಪಾಲ್ (ಸಂ), ಪ್ರೊ, ಲಕ್ಷ್ಮಣ್ ತೆಲಗಾವಿ (ಲೇ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ, ४೦

[illegible]

[illegible]

[illegible]

[illegible]

ರೇಖಾಕೃತಿಗಳನ್ನು ವಿವಿಧ ಕಾಲಮಾನದ ವಿವಿಧ ಪ್ರಾಣಿ ವರ್ಗ, ಮನುಷ್ಯಾಕೃತಿಗಳು, ಖಡ್ಗಗಳನ್ನು ಹಿಡಿದಿರುವ ಕುದುರೆ ಸವಾರರು ಮಾನವನ ಪಾದಗಳು ಜಾಮೀತಿಯಾಕೃತಿ, ಕುಳಿಗಳು ಇತ್ಯಾದಿ ಆಕೃತಿಗಳ ವಿನ್ಯಾಸ ಶೈಲಿ, ಉದ್ದೇಶ, ಸ್ಥಳದ ಆಯ್ಕೆ ಇತ್ಯಾದಿಗಳನ್ನು ಗಮನಿಸಿದರೆ ಇತಿಹಾಸ ಆರಂಭಕಾಲ, ಪಾಳೆಗಾರರ ಕಾಲ ಮತ್ತು ಆಧುನಿಕ ಕಾಲದವೆಂದು ಸ್ಥೂಲವಾಗಿ ಮೂರು ಹಂತಗಳಾಗಿ ವಿಭಾಗಿಸಬಹುದಾಗಿದೆ. ಚಿತ್ರಗಳ ಸ್ಪಷ್ಟ ಮಾಹಿತಿಯೆಂದರೆ ಈ ಪರಿಸರದಲ್ಲಿ ಕೃಷಿ, ಪಶುಪಾಲನೆ, ಬೇಟೆ ಮತ್ತು ಹೋರಾಟ ಹಾಗೂ ಕಲೆಯಲ್ಲಿನ ಆಸಕ್ತಿಯನ್ನು ಸಮರ್ಥಿಸಬಹುದು. ನಿರ್ಧಿಷ್ಟ ಜನಾಂಗವನ್ನು ಅನುಸರಿಸಿದ ಈ ರೇಖಾ ಚಿತ್ರಗಳು ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಕಟ್ಟಿಕೊಡುತ್ತವೆ.

ಚಿತ್ರದುರ್ಗ ಕೋಟೆ ಪರಿಸರದ ಬಯಲು ಬಂಡೆ ಚಿತ್ರಗಳು:

ಕೋಟೆಯೊಳಗಿನ ಮಠ : ಕೋಟೆಯೊಳಗೆ ನಿರ್ಮಿಸಲಾದ ಶ್ರೀ ಮುರುಘರಾಜೇಂದ್ರ ಮಠ ಇದೆ. ಆದರೆ ಈ ಮಠವು ಪಾಳೆಗಾರರ ಪತನಾನಂತರ ಈ ಮಠದ ಧರ್ಮಕಾರ್ಯಗಳು ಸ್ಥಗಿತಗೊಂಡಿವೆ.

ಜಿಂಕೆಯ ಕೊರೆದ ಚಿತ್ರ : ಚಿತ್ರದುರ್ಗದ ಕೋಟೆಯ ಒಳಭಾಗದ ಆರನೇ ಕೋಟೆಯ ಅಂಚಿನಲ್ಲಿ ಹಾಸು ಬಂಡೆಯೊಂದರಲ್ಲಿ ಜಿಂಕೆಯಂತಹ ಗೂಳಿಯ ಕೊರೆದ ಚಿತ್ರವಿದೆ. ಈ ಚಿತ್ರವು ಸುಮಾರ ೫ ಅಡಿಯ ಉದ್ದವಾಗಿದೆ. ಸಪೂರಾದ ದೇಹ, ನೀಳವಾದ ಕೊಡುಗಳುಳ್ಳ ದಪ್ಪನೆ ರೇಖೆಯನ್ನು ಪುನಾರವರ್ತನೆಯಿಂದ ಆಳವಾದ ತಗ್ಗು ರೇಖೆಯಿಂದ ಮೂಡಿಸಿದ್ದಾರೆ. ಒಟ್ಟಾರೆ ಆಕೃತಿಯು ಸುಂದರವಾದ ರೇಖಾ ವಿನ್ಯಾಸವನ್ನು ಹೊಂದಿದೆ.

ಆಟದ ಚಿತ್ರಗಳು : ಚಿತ್ರದುರ್ಗದ ಕೋಟೆಯ ಒಳಭಾಗದಲ್ಲಿ ಶ್ರೀ ಏಕನಾಥೇಶ್ವರಿ ದೇವಾಲಯವಿದೆ. ಅದರ ಎಡಬದಿಯ ಬಂಡೆಯ ಮೇಲೆ ವಿವಿಧ ಬಗೆಯ ಆಟದ ಚಿತ್ರಗಳನ್ನು ರಚಿಸಿದ್ದಾರೆ. ಪ್ರಸ್ತುತ ಚೌಕಾಬಾರ ಎಂದು ಕರೆಯುವ ಆಟದ ರೇಖಾವಿನ್ಯಾಸದಂತೆ ವಿಶೇಷವಾಗಿ ಕೊರೆದಿದ್ದಾರೆ. ಚೌಕದ ಒಳಭಾಗದಲ್ಲಿ ಚೌಕದಂತೆ ಮೂರು ಹಂತದ ಚೌಕಗಳಿದ್ದು, ಪ್ರತಿ ಚೌಕದ ನಾಲ್ಕು ದಿಕ್ಕಿನಿಂದ ಒಳ ಚೌಕಕ್ಕೆ ಬಂದನದ ರೇಖೆಗಳು ಕೊರೆದಿದ್ದಾರೆ. ಇಂಥಹದೇ ಆಟವೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.


ಇದರ ಪಕ್ಕದಲ್ಲಿ ಮತ್ತೊಂದು ಆಟದ ಚಿತ್ರವಿದೆ. ಇದೊಂದು ರೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಗೂಳಿಮಣಿ ಆಟದ ರೀತಿಯಲ್ಲಿ ರಚಿಸಿದ್ದಾರೆ. ಲಂಬ ರೇಖೆಯನ್ನು ಹೋಲುವಂತ (L) ನೆಲದಿಂದ ಸಮಾನವಾಗಿ ಗುಳಿಗಳನ್ನು ಒಂದರ ಪಕ್ಕದಲ್ಲೊಂದರಂತೆ ತೊಡಿ ಲಂಬವಾಗಿಯೂ ಗುಳಿಗಳನ್ನು ತೋಡಿದ್ದಾರೆ. ಮಧ್ಯಭಾಗದಲ್ಲಿ ಮೂರು ನಾಲ್ಕು ಗುಳಿಗಳನ್ನು ಕೆತ್ತಿದ್ದು, ಪಕ್ಕದಲ್ಲಿ ದೊಡ್ಡ ದೊಡ್ಡ ಗುಳಿಗಳನ್ನು ತೋಡಿರುವುದನ್ನು ಕಾಣಬಹುದು. ಬಹುಶಃ ಚಿತ್ರಗಳ ಮಾದರಿಯ ಮಣಿಗಳನ್ನು ಶೇಖರಿಸಿರಬಹುದೆಂದು

[illegible]

ಚಿತ್ರದುರ್ಗ ಪರಿಸರ



ಕೋಟೆಯೊಳಗಿನ ಮಠ



ಆರನೇ ಕೋಟೆಯಲ್ಲಿರುವ ಜಿಂಕೆ ಚಿತ್ರ




ಕುಟ್ಟಿ ಕೊರೆದ ಆಟದ ಚಿತ್ರ

ಚಿತ್ರದುರ್ಗ ಕೋಟೆ ಪರಿಸರ




ಕೋಟೆಯೊಳಗಿನ ಹವಾ ಮಹಲು






ಬಯಲು ಬಂಡೆಯ ಕೊರೆ ಚಿತ್ರಗಳು



ಕಾಡು ಕೋಣದ ಕೊರೆ ಚಿತ್ರ

ಚಿತ್ರದುರ್ಗ ಪರಿಸರ


ಸೊಕ್ಕಿದ ಗೂಳಿ


ಪಾದದ ಗೀರು ಚಿತ್ರ


ಪಾದದ ಗೀರು ಚಿತ್ರ


ಪರಸ್ಪರ ಗೂಳಿಗಳು


ಬಟ್ಟಲಾಕಾರದ ಕುಳಿಗಳು

ಚಿತ್ರದುರ್ಗ ಪರಿಸರ


ಕಾಡುಕೋಣದ ಚಿತ್ರ


ಗೂಳಿಗಳ ಸಾಲು


ಗೂಳಿಗಳು


ವಿಶಿಷ್ಟ ಗೂಳಿ


ಗೂಳಿಗಳ ಸಾಲುಗಳು


ವಿಶಿಷ್ಟ ಗೂಳಿಗಳು

ಹೇಳಬಹುದಾಗಿದೆ. ಇತಿಹಾಸ ಪೂರ್ವಜರು ಬಿಡುವಿನ ಸಮಯವನ್ನು ಆಟಗಳಲ್ಲಿ ಕಳೆಯುತ್ತಿದ್ದರೆಂದು ಈ ಮೂಲಕ ತಿಳಿಯಬಹುದು.

ಹವಾ ಮಹಲ್ : ಕೋಟೆಯೊಳಗಿನ ಸುಂದರ ತೂಗು ಕಂಬದ ಮುಂದೆ ನಿರ್ಮಿಸಲಾದ ಮಂಟಪ ಇದರಲ್ಲಿ ತಂಪಾದ ಹವಾ ಬರತ್ತಿದ್ದ ಕಾರಣ ವಿಶ್ರಾಂತಿ ತಾಣವಾಗಿದೆ. ಆದ ಕಾರಣ ಇದಕ್ಕೆ ಹವಾಮಹಲ್ ಎಂದು ಹೇಳಲಾಗಿದೆ.

ಬಯಲು ಬಂಡೆಯ ಚಿತ್ರಗಳು : ಲಿಪಿ ರೂಪದಲ್ಲಿ ರಚಿಸಲಾಗಿದೆ. ಸ್ಪಷ್ಟವಾಗಿ ನಿಖರವಾಗಿ ಹೇಳಲು ಸಾದ್ಯವಾಗಿಲ್ಲ. ಪಕ್ಕದಲ್ಲಿರುವ ಚಿತ್ರ ವಿಶಿಷ್ಟ ಬಗೆಯ ಆಯುಧದ ರೇಖಾಚಿತ್ರವೆಂದು ಪರಿಗಣಿಸಬಹುದು.

ಕಾಡುಕೋಣದ ಚಿತ್ರ : ಚನ್ನಕ್ಕಿ ಹೊಂಡದ ಬಳಿಯಿರುವ ಕಾಡು ಕೋಣದ ಚಿತ್ರವಿದೆ. ಈ ಚಿತ್ರವು ದಷ್ಟ ಪುಷ್ಟವಾಗಿ ಸಂಪಾಗಿ ಬೆಳೆದಂತ ಕೋಣವಾಗಿದೆ. ಈ ಮಾದರಿಯ ಮತ್ತೊಂದು ರೇಖಾಚಿತ್ರ ತಿಮ್ಮಣ್ಣನಾಯಕನ ಕೆರೆಯ ಬಳಿಯಿದೆ. ಈ ಚಿತ್ರವು ಮೇಲಿನ ಚಿತ್ರಕ್ಕಿಂತ ಪ್ರಾಚೀನವಾಗಿದೆ ಎಂದು ಹೇಳಬಹುದು.

ಮೊಳಕಾಲ್ಮೂರು ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳು :

೧. ಬ್ರಹ್ಮಗಿರಿ ಪರಿಸರ : ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ ಪರಿಸರವು ರಾಮಪುರದಿಂದ ಸುಮಾರು ೧೧ ಕಿ.ಮೀ. ದೂರದಲ್ಲಿದೆ. ಜಿಲ್ಲೆಯ ಪ್ರಸಿದ್ಧ ಇತಿಹಾಸ ಪೂರ್ವಕಾಲದ ನೆಲೆಯಾಗಿದ್ದು, ಇದರೊಡನೆ ಸಿದ್ದಾಪುರ, ಜಟಂಗಿರಾಮೇಶ್ವರ ನೆಲೆಗಳು ಸೇರಿಕೊಂಡೆವೆ. ಪ್ರೋ. ಎಚ್.ಶ್ರೀಶೈಲ ಆರಾಧ್ಯ ಅವರ ಸಂಶೊಧನ ತಂಡ ಈ ಪ್ರದೇಶದಲ್ಲಿ ವ್ಯಾಪಕ ಶೋಧನಾಕಾರ್ಯ ನೆಡೆಸಿದ ಪ್ರತಿಫಲವಾಗಿ ಗವಿವರ್ಣ ರೇಖಾಚಿತ್ರಗಳಲ್ಲದೆ, ನಿಗೂಢವಾದ ನೈಸರ್ಗಿಕ ಕಲ್ಲು ಗವಿಗಳನ್ನು ಶೋಧಿಸಿದ್ದಾರೆ. ಇತಿಹಾಸ ಪೂರ್ವಜರ ವಾಸ್ತವ್ಯಕ್ಕೆ ಯೋಗ್ಯವಾದ ಸ್ಥಳವಾಗಿದೆ. ಬಯಲು ಬಂಡೆಯ ರೇಖಾಚಿತ್ರಗಳು, ಮಾನವನ ಪಾದಕೃತಿಗಳು, ನಿಲುವುಗಲ್ಲುಗಳು ಮತ್ತು ಹಾಸುಬಂಡೆಗಳ ಮೇಲೆ ಕುಳಿಗಳ ಚಿತ್ರಗಳನ್ನು ಕಾಣಬಹುದು.

ಬ್ರಹ್ಮಗಿರಿಯಲ್ಲಿ ಇತ್ತೀಚಿಗೆ ಸಂಶೊಧನೆ ನಡೆಸಿದಾಗ ಆದಿಮಾನವರ ಜನವಸತಿ ಕುರುಹುಗಳು ದೊರೆತ ಮೇಲೆ ಅನೇಕ ರೀತಿಯ ಉತ್ಖನನಗಳಾಗಿವೆ. ಬೆಟ್ಟದ ಎಡಭಾಗದ ತಳದ ಅನತಿಕಾಲದಲ್ಲಿ ಜನವಾಸಿಸಿದ್ದ ಪರಿಸರವಿದ್ದು, ಸಂಶೊಧನೆಯ ನಂತರ ಇಲ್ಲಿ ಮೂರು ಸಂಸ್ಕೃತಿಗಳು ಜೀವಿಸಿರುವ ಕುರುಹುಗಳು ದೊರಕಿವೆ. ನಿಯೋಲಿಥಿಕ್ ಅವಧಿಯ ಪಾಲಿಶ್ ಮಾಡಿರುವ ಚಿಕ್ಕ ಕಂಚಿನ ಸಾಮಾನುಗಳು, ಪಾತ್ರೆಗಳು, ಕಬ್ಬಿಣದ ಸಾಮಗ್ರಿಗಳು ಹಾಗೂ ಮೂರನೆಯ ಸಂಸ್ಕೃತಿಯ ಅವಧಿಯ ಮಣ್ಣಿನ ಪಾತ್ರೆಗಳು, ಬಳೆಗಳು, ಶಂಖ, ಚಿನ್ನದ ಎಳೆಗಳು, ಬಿಳಿ ಬಣ್ಣ ಲೇಪಿಸಿದ ವಸ್ತುಗಳು ದೊರಕಿವೆ. ಈ ಪ್ರದೇಶದಲ್ಲಿ ದೊರಕಿದ

[illegible]

[illegible]

[illegible]

[illegible]

ಸಾಮಾಗ್ರಿಗಳ ಪರೀಶಿಲನೆಯಿಂದ ಇವು ಶಾತವಾಹನರ ಕಾಲಕ್ಕೆ ಸೇರಿದೆ ಎಂದು ಪರಿಗಣಿಸಲಾಗಿದೆ.

ಬ್ರಹ್ಮಗಿರಿ ಬೆಟ್ಟದ ಮೇಲೆ ಶ್ರೀ ಸಿದ್ದೇಶ್ವರ ಸ್ವಾಮಿ ಮಠವಿದ್ದು ಇದು ೧೦-೧೧ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಮೊಟ್ಟಮೊದಲು ಸಿದ್ದೇಶ್ವರಸ್ವಾಮಿಗಳು ನೆಲೆನಿಂತ ಈ ಪ್ರದೇಶ ಅನಿವಾರ್ಯ ಕಾರಣದಿಂದ ಸುಮಾರು ೧೫೦ ವರ್ಷಗಳ ಕಾಲ ನಿರ್ಜನ ಪ್ರದೇಶವಾಗಿದ್ದು, ೭೦ ವರ್ಷಗಳ ನಂತರ ಶ್ರೀ ಚನ್ನವೀರಸ್ವಾಮಿಗಳು ಪ್ರಸ್ತುತ ಜೀರ್ಣೋದ್ಧಾರ ಕೈಗೊಂಡಿದ್ದಾರೆ. ಭಕ್ತಾದಿಗಳು ಧನ ಧಾನ್ಯಗಳ ಸಹಾಯ ಹಸ್ತ ನೀಡುತ್ತಿದ್ದಾರೆ. ಪ್ರತಿನಿತ್ಯ ದಾಸೋಹ ಪದ್ಧತಿ ಇಂದಿಗೂ ನಡೆಯುತ್ತಿದೆ. ಮಠದ ಎಡಭಾಗಕ್ಕೆ ಕಲ್ಲುಬಂಡೆಗಳನ್ನು ಒಂದೆಡೆ ರಾಶಿಹಾಕಿದಂತೆ ನಿಸರ್ಗನಿರ್ಮಿತ ಗುಹೆಗಳು, ಕಲ್ಲಾಸರೆಗಳು ಇದ್ದು ಸೂಕ್ಷ್ಮ ಮತ್ತು ಕಡಿದಾದ ಭಾಗದಲ್ಲಿ ಸುಂದರವಾದ ಗುಹೆಯೊಂದರ ತಳಭಾಗದಲ್ಲಿ ಪನ್ನೀರ ದೋಣಿ ಇದೆ. ಇಂದಿಗೂ ಈ ನೀರಿನಲ್ಲಿ ಆಯುರ್ವೇದದ ಔಷಧಿಯ ಗುಣವಿದೆ ಎಂದು ಮಠದ ಅರ್ಚಕರ ಹೇಳಿಕೆಯಾಗಿದೆ.

ಗುಹೆಯ ಮೇಲ್ಭಾಗದಲ್ಲಿ ಕಪ್ಪು ಬಿಳಿ ವರ್ಣದ ಚಿತ್ರಗಳಿವೆ. ಅದೇ ಗುಹೆಯ ಹೊರಭಾಗದಲ್ಲಿ ಎಡಕ್ಕೆ ಮೇಲೆತ್ತರದ ಕಲ್ಲಿನಲ್ಲಿಯೂ ಬಿಳಿ ವರ್ಣದ ಚಿತ್ರ ರಚನೆಯಾಗಿವೆ. ಜಟಿಲವಾದ ಈ ಬ್ರಹ್ಮಗಿರಿಯ ಬೆಟ್ಟವನ್ನು ಹತ್ತುವ ಮೊದಲು ದೊಡ್ಡದಾದ ಕಲ್ಲುಬಂಡೆ ಇದೆ. ಅದರಲ್ಲಿ ಆನೆಯ ಕೊರೆದ ರೇಖಾಚಿತ್ರವಿದ್ದು, ಇದು ನೂತನ ಶಿಲಾಯುದ ಆರಂಭಕಾಲಕ್ಕೆ ಸೇರಿದೆ ಎಂದು ಹೇಳಲಾಗಿದೆ. ದೇಹ ವಿನ್ಯಾಸ, ಕಣ್ಣು, ಕಿವಿಗಳನ್ನು ನೈಜವಾಗಿ ರಚಿಸಿದ್ದಾರೆ.

ಬ್ರಹ್ಮಗಿರಿ ಪರಿಸರದ ವರ್ಣಚಿತ್ರಗಳ ವಿವರಣೆ :

ಬ್ರಹ್ಮಗಿರಿಬೆಟ್ಟ : ಬ್ರಹ್ಮಗಿರಿಬೆಟ್ಟದ ಕೆಳಭಾಗದಲ್ಲಿ ಚಾಲುಕ್ಯರ ಕಾಲದ ತ್ರಿಶಂಖೇಶ್ವರ ದೇವಾಲಯವಿದ್ದು, ಅಲ್ಲಿ ಅಶೋಕನ ಶಾಸನವಿದೆ. ಪಕ್ಕದ ಕಲ್ಲುಬಂಡೆಯ ಮೇಲೆ ಆನೆಯ ರೇಖಾಚಿತ್ರ ಕಾಣಬಹುದು. ಅಲ್ಲದೆ ಬೆಟ್ಟದ ತುದಿಯಲ್ಲಿ ಕಲ್ಲುಗಳಿಂದ ನಿರ್ಮಾಣವಾದ ಅನೇಕ ಗುಹೆಗಳಿವೆ ಅವುಗಳ ಒಳ ಛಾವಣಿಯ ಮೇಲೆ ವಿವಿಧ ಬಗೆಯ ಪ್ರಾಣಿ ಮನುಷ್ಯಕೃತಿ ಬಿಳಿವರ್ಣ ಚಿತ್ರಗಳು ರಚನೆಯಾಗಿವೆ. ಹಾಗೂ ಕುಟ್ಟಿಕೊರೆದ ಮಾನವನ ಪಾದಾಕೃತಿಗಳು ಕಂಡುಬಂದಿವೆ.

ಪ್ರಾಣಿ, ಪಕ್ಷಿಗಳ ಚಿತ್ರ : ಬಿಳಿವರ್ಣದಿಂದ ರಚಿಸಲಾದ ವಿವಿಧ ಬಗೆಯ ಪ್ರಾಣಿ ಪಕ್ಷಿಗಳನ್ನು ಕಾಣಬಹುದು. ಅಲ್ಲದೆ ಮಾನವನ ನಿತ್ಯ ಕಸುಬುಗಳಾದ ಬೇಟೆಗಾರಿಕೆ, ತಂತ್ರಗಾರಿಕೆ ಇತ್ಯಾದಿ ಚಿತ್ರಗಳನ್ನು ಕಾಣಬಹುದು.

ಬೇಟೆಯ ಸಿದ್ಧತೆ : ವಿವಿಧ ಆಯುಧಗಳೊಂದಿಗೆ ಬೇಟೆಗೆ ಸಿದ್ಧತೆ ನೆಡೆಸಿರುವುದು ಯಾವ ದಿಕ್ಕಿಗೆ ಹೊರಡುವ ಸೂಚನೆಗೆ ಬಾಣದ ಚಿಹ್ನೆಯನ್ನು ತೋರಿಸಲಾಗಿದೆ. ಕೆಂಪು

ಮತ್ತು ಬಿಳಿವರ್ಣಗಳಿಂದ ಚಿತ್ರಿಸಲಾಗಿದೆ. ಇವು ಅತ್ಯಂತ ಪ್ರಾಚೀನ ಚಿತ್ರಗಳಾಗಿರುವುದರಿಂದ ಚಿತ್ರಗಳಲ್ಲಿ ಸ್ಪಷ್ಟತೆ ಇರುವುದಿಲ್ಲ. ಕೇವಲ ಸಾಂಕೇತಿಕವಾಗಿ ವಿಷಯಗಳನ್ನು ವ್ಯಕ್ತಪಡಿಸಿ ಚಿತ್ರಿಸಿದ್ದಾರೆ.

ಉಡಗಳಂತಹ ವಿವಿಧ ಹಲ್ಲಿಗಳು : ಬಿಳಿವರ್ಣದಿಂದ ರಚಿಸಲಾದ ಈ ಚಿತ್ರದಲ್ಲಿ ವಿಶಿಷ್ಟ ಸರಿಸೃಪಗಳ ಜಾತಿಗೆ ಸೇರಿದ ಉಡಗಳೆಂದು ಭಾಸವಾಗುತ್ತದೆ. ಅಲ್ಲದೆ ಆ ಪ್ರದೇಶದಲ್ಲಿ ಈ ಬಗೆಯ ಪ್ರಾಣಿಗಳು ಹೆಚ್ಚಾಗಿದ್ದಿದ್ದು ತಿಳಿದುಬರುತ್ತದೆ. ಸಾಮಾನ್ಯವಾಗಿ ಬೆಟ್ಟಗುಡ್ಡಗಳಿರುವ ಪ್ರದೇಶಗಳಲ್ಲಿ ಈ ಮಾದರಿಯ ಪ್ರಾಣಿಗಳು ಕಂಡುಬರುವುದು ಸಾಮಾನ್ಯ ಸಂಗತಿಯಾಗಿದೆ.

ಆನೆಯ ವರ್ಣಚಿತ್ರ : ವಿಶೇಷವಾಗಿ ಕಪ್ಪು ಬಣ್ಣದಿಂದ ಚಿತ್ರಿತವಾಗಿದ್ದು, ದಪ್ಪನೆಯ ಪಟ್ಟಿಗಳಂತೆ ರೇಖೆಗಳನ್ನು ಎಳೆದಿದ್ದು, ಬಹುಶಃ ಆನೆಯ ಪ್ರಭಲತೆಯನ್ನು ನಿರೂಪಿಸಿರುವ ನಿಟ್ಟಲ್ಲಿ ಚಿತ್ರಸಿದ್ದಾರೆ. ಆ ಪ್ರದೇಶದಲ್ಲಿ ಆನೆಗಳೆ ಹೆಚ್ಚಾಗಿ ಇದ್ದವು, ಎಂದು ತಿಳಿಯಬಹುದು.

ಬೇಟೆಯ ಸಿದ್ಧತೆ : ಕೆಂಪು ಮತ್ತು ಬಿಳಿ ವರ್ಣದಲ್ಲಿ ವರ್ಣದಲ್ಲಿ ರಚಿಸಿದ ಚಿತ್ರವಿದ್ದು, ಬೇಟೆಗಾಗಿ ಸಕಲ ಸಿದ್ಧತೆ ನಡೆಸಿ ತಾನು ಬೇಟೆಗೆ ಸಾಗುವ ದಿಕ್ಕನ್ನು ಸೂಚಿಸುವ ನಿಟ್ಟಿನಲ್ಲಿ ಈ ಚಿತ್ರ ರಚಿಸಿದ್ದಾರೆ. ಬಹುಶಃ ಶಿಲಾ ಸಂಸ್ಕೃತಿ ಸೇರಿದಂತೆ ಕಾಣುವ ಈ ಚಿತ್ರದಲ್ಲಿ ಅಂಗಶಾಸ್ತ್ರಕ್ಕೆ ಮಾನ್ಯತೆ ನೀಡಿಲ್ಲ. ಕೇವಲ ರೇಖೆಗಳಿಂದ ಚಿತ್ರ ರಚಿಸಿದ್ದು ಕಾಣಬಹುದು.

ಸವಾರನೊಂದಿಗೆ ಕಾಳಗ : ಕುದುರೆಯ ಮೇಲೆ ಕುಳಿತಿರುವ ಸವರನೊಂದಿಗೆ ಮಾನವನೊಬ್ಬ ಈಟಿ ಹಿಡಿದು ಕಾಳಗ ನಡೆಸುತ್ತಿದ್ದಾನೆ. ಈ ಚಿತ್ರವು ಬಿಳಿ ವರ್ಣದಿಂದ ರಚಿಸಲಾಗಿದ್ದು, ಇದು ನೋಡಲು ತುಂಬಾ ಮನಮೋಹಕವಾಗಿದೆ.

ಪ್ರಾಣಿಗಳ ರೇಖಾಚಿತ್ರ (ನುಂಕಮಲೆ) : ಈ ಚಿತ್ರದ ಮೇಲ್ಭಾಗದಲ್ಲಿ ಆಡು (ಮೇಕೆ) ಎಂದೆ ಪರಿಗಣಿಸಬಹುದಾದ ಪ್ರಾಣಿಯ ಚಿತ್ರವಿದ್ದು, ಕೆಳಭಾಗದಲ್ಲಿ ಉಡಗಳಂತ ಸರಿಸೃಪ ಪ್ರಾಣಿಗಳ ಚಿತ್ರ ರಚಿಸಿದ್ದಾರೆ. ಬಿಳಿವರ್ಣಗಳಿಂದ ರೇಖಾಪ್ರಧಾನವಗಿ ಚಿತ್ರಸಿರುವುದನ್ನು ಕಾಣಬಹುದು.

ಸಮೂಹ ನೃತ್ಯ : ಅಸ್ಪಷ್ಟ ರೀತಿಯಲ್ಲಿ ಕಾಣುವ ಬಿಳಿವರ್ಣ ಚಿತ್ರಗಳು ಸಮತಟ್ಟಾದ ಜಾಗವಿಲ್ಲದರಿಂದ ಚಿತ್ರಕ್ಕೆ ಸೌಂದರ್ಯ ಪರಿಕಲ್ಪನೆ ಕಡಿಮೆಯಾಗಿದೆ. ವಿವಿದ ಬಗೆಯ ಉಡುಗೆಗಳನ್ನು ತೊಟ್ಟು ಮಾನವರು ಯಾವುದೋ ಸಂದೇಶದಿಂದ ಹರ್ಷಗೊಂಡು ನರ್ತಿಸುವಂತೆ ಚಿತ್ರಿಸಿದ್ದಾರೆ. ಒಟ್ಟಾರೆ ಈ ಕಲಾಕೃತಿಯು ನೋಡುಗರ ಗಮನವನ್ನು ಸೆಳೆಯುತ್ತದೆ.

ಬ್ರಹ್ಮಗಿರಿ ಬಯಲುಬಂಡೆಯ ಚಿತ್ರಗಳ ವಿವರಣೆ :


ಆನೆಯ ಗೀರುಚಿತ್ರ : ಬ್ರಹ್ಮಗಿರಿಯ ಬೆಟ್ಟಕ್ಕೆ ಪ್ರವೇಶಿಸುವ ಮೊದಲು ಬೆಟ್ಟದ ತಳಭಾಗದಲ್ಲಿ ಕಾಣಸಿಗುವ ಸುಮಾರು ೧೨x೧೫ ಅಳತೆಯ ಹೆಬ್ಬಂಡೆ ಇದೆ. ಇದರ ಮೇಲೆ ಆನೆಯ

ಮೊಳಕಾಲ್ಮೂರು





ಬ್ರಹ್ಮಗಿರಿಯ ಪರಿಸರ



ಬ್ರಹ್ಮಗಿರಿ ಬೆಟ್ಟ



ನಿಸರ್ಗ ಗುಹೆಯೊಳಗಿನ ಬಿಳಿವರ್ಣ ಚಿತ್ರಗಳು





ಬ್ರಹ್ಮಗಿರಿ ಪರಿಸರ



ಬೇಟೆಗೆ ಸಿದ್ಧತೆ ಚಿತ್ರ





ವಿವಿಧ ಬಗೆಯ ವರ್ಣ ಚಿತ್ರ



ವಿಷೇಶ ಆನೆಯ ಕಪ್ಪುವರ್ಣ ಚಿತ್ರ

ಬ್ರಹ್ಮಗಿರಿ ಪರಿಸರ



ಬ್ರಹ್ಮಗಿರಿಯ ಬೆಟ್ಟದ ನೀರಿನ ಹೊಂಡ





ವಿವಿಧ ಪ್ರಾಣಿಗಳ ವರ್ಣ ಚಿತ್ರ



ಅರ್ಚಕರೊಂದಿಗೆ ಸಂದರ್ಶನ

ಗೀರು ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರವು ಮುಖ್ಯವಾಗಿ ಬೆನ್ನಿನ ಬಾಹು ಮತ್ತು ಕುಂಭ ಸ್ಥಲವನ್ನು ನೋಡಿದರೆ ಹರಪ್ಪ ನಾಗರೀಕತೆಯ ಮುದ್ರಿಕೆಯನ್ನು ಹೋಲುತ್ತದೆ. ಹಾಗೂ ಹೈದರಾಬಾದಿನ ಶಿಲಾ ತಾಮ್ರಯುಗದ ಕಂಚಿನ ಮುದ್ರಿಕೆಗೂ ಹೋಲುತ್ತದೆ.

ಶ್ರೀಸಿದ್ದೇಶ್ವರ ಸ್ವಾಮಿಮಠ : ಬೆಟ್ಟದ ಮೇಲ್ಭಾಗದಲ್ಲಿ ಶ್ರೀಸಿದ್ಧೇಶ್ವರ ಸ್ವಾಮಿಯವರು ನೆಲೆಸಿದ್ದು, ೧೦-೧೧ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಪ್ರಸ್ತುತ ಅವಧಿಯಲ್ಲಿ ಚನ್ನವೀರಸ್ವಾಮಿಗಳು ಜೀರ್ಣೋದ್ಧಾರ ಕೈಗೊಂಡಿದ್ದಾರೆ. ಪ್ರತಿ ಹುಣ್ಣಿಮೆ, ಅಮವಾಸೆ ದಿನಗಳಲ್ಲಿ ಭಕ್ತಾಧಿಗಳು ಈ ಸ್ಥಳದಲ್ಲಿ ರಾತ್ರಿ ತಂಗುತ್ತಾರೆ. ಹಾಗೂ ಈ ಮಠದಲ್ಲಿ ಪ್ರತಿ ನಿತ್ಯ ದಾಸೋಹ ಪದ್ಧತಿಯಿದೆ.

ಪನ್ನೀರ ದೊಣೆ : ಮಠದ ಬಲಭಾಗದ ಕಲ್ಲುಗುಹೆಯ ಒಳಭಾಗದಲ್ಲಿ ನೀರಿನ ಶೇಖರಣೆ ಮಡುವು ಇದೆ. ಈ ಸ್ಥಳ ಆದಿಮಾನವರ ವಾಸಸ್ಥಳವಾಗಿದ್ದು, ಪ್ರಸ್ತುತ ಇಲ್ಲಿರುವ ನೀರಿನಲ್ಲಿ ಆಯುರ್ವೇಧದ ಶಕ್ತಿ ಪಡೆದುಕೊಂಡಿದೆ ಎಂಬುದು ಸ್ಥಳಿಯ ಅಭಿಪ್ರಾಯವಾಗಿದೆ.

ಬ್ರಹ್ಮಗಿರಿಯ ಬೆಟ್ಟದ ಗಿರಿಶೃಂಗ : ಬೆಟ್ಟದ ತುತ್ತ ತುದಿಯಲ್ಲಿ ಶಿವಲಿಂಗದ ಹಲವಾರು ಸಣ್ಣ ಸಣ್ಣ ದೇವಾಲಯಗಳನ್ನು ಕಾಣಬಹುದು. ವಿಶಾಲವಾದ ಈ ಪ್ರದೇಶ ಸಾಧು ಸಂತರಿಗೆ ತಪೋವನವಾಗಿದೆ.

ನೀರಿನ ಹೊಂಡ : ಮಠದ ಎಡಭಾಗದಲ್ಲಿ ಇತ್ತೀಚಿನ ಅವಧಿಯಲ್ಲಿ ನೀರಿನ ಹೊಂಡವನ್ನು ನಿರ್ಮಿಸಲಾಗಿದೆ. ದೇವಾಲಯದ ಕೆಲಸಕ್ಕಾಗಿ ಈ ಸ್ಥಳದಲ್ಲಿ ಹಲವು ಬಾರಿ ಕಲ್ಲನ್ನು ತೆಗೆದಿದ್ದು, ಪ್ರಸ್ತುತ ಈ ಸ್ಥಳ ನೀರಿನ ಶೇಖರಣೆಯ ಹೊಂಡವಾಗಿದೆ.

೨. ಜಟಂಗರಾಮೇಶ್ವರ ಪರಿಸರ : ಈ ಸ್ಥಳವು ರಾಮಾಪುರದಿಂದ ೫ ಕಿ.ಮೀ. ದೂರದಲ್ಲಿದೆ. ಈ ಪ್ರದೇಶದಲ್ಲಿ ೨ ಗುಹೆಗಳಿವೆ. ಅದರಲ್ಲಿ ಒಂದನೇ ಗುಹೆ ಸೀತಾ ದೋಣಿಯ ನೈರುತ್ಯಕ್ಕೆ ಕುಮಾರರಾಮನ ಗರಡಿ ಮನೆಯಂತಿದ್ದು, ಅದು ಒಂದು ಕುಟುಂಬವು ವಾಸಿಸಬಹುದಷ್ಟು ವಿಶಾಲವಾಗಿದೆ. ಇದು ಸ್ವಾಭಾವಿಕ ಗುಹೆಯಾದ ಇದು ರಕ್ಷಣಾ ದೃಷ್ಟಿಯಿಂದ ಕಟ್ಟಲಾದ ಕೋಟೆಗೋಡೆಗೆ ಕಾವಲು ಬುರುಜೂ ಆಗಿದೆ. ಈ ಗುಹೆಯ ಒಳಭಾಗದಲ್ಲಿ ಮೇಲ್ಭಾವಣಿಯು ಗುಮ್ಮಟಾಕಾರವಾಗಿದ್ದು, ನಿಸರ್ಗ ಕಲ್ಲಾಸರೆಯ ಒಳಮೈಮೇಲೆ ಸುಮಾರು ೫೦ಕ್ಕೂ ಹೆಚ್ಚು ಬಿಳಿ ವರ್ಣದ ಚಿತ್ರಗಳಿವೆ. ಗುಹೆಯ ಸುಮಾರು ೩೦ ಅಡಿ ವ್ಯಾಸ ಹೊಂದಿದ್ದು, ಇದರಲ್ಲಿ ೫೦ಕ್ಕೂ ಹೆಚ್ಚು ಮಾನವನ ನಿತ್ಯ ಬದುಕಿನ ವಿಶಿಷ್ಟ ಚಿತ್ರಗಳಾಗಿವೆ. ಬೇಟೆ ದೃಶ್ಯ, ಯುದ್ಧ, ಮಾನವನಾಕೃತಿಯ ಕಡ್ಡಿ ಚಿತ್ರ, ಗಂಡು ಹೆಣ್ಣಿನ ಮಿಲನ, ಹೂಗಳು, ಪ್ರಾಣಿಪಕ್ಷಿಗಳು ಇತ್ಯಾದಿ ಚಿತ್ರಗಳು ಅಸ್ಪಷ್ಟ ರೀತಿಯಲ್ಲಿವೆ.

ಎರಡನೆಯ ಗುಹೆಯು ದೊಡ್ಡ ಜಟಂಗಬೆಟ್ಟದ ಮೇಲಿರುವ ಕಾಶಿಪುರಾದೀಶ್ವರ ದೇಗುಲಕ್ಕೆ ಹೊಂದಿಕೊಂಡಂತಿರುವ ಬೃಹತ್ ಬಂಡೆಗಲ್ಲಿನ ಕೆಳಭಾಗದಲ್ಲಿ ಗುಹೆಯೊಂದನ್ನು

ಮೊಳಕಾಲ್ಮುರು ಜಟಂಗಿರಾಮೇಶ್ವರ ಪರಿಸರ


ಜಟಂಗಿರಾಮೇಶ್ವರ ಬೆಟ್ಟ.


ಕಾಶಿ ಪುರಾದೀಶ್ವರ ದೇವಾಲಯ.


ಶಾಸನ


ಹೂವಿನ ಬಿಳಿ ವರ್ಣ ಚಿತ್ರ

ಜಟಂಗಿ ರಾಮೇಶ್ವರ ಪರಿಸರ



ನೈಸರ್ಗಿಕ ಕಲ್ಲಾಸೆರೆಯ ಗುಹೆ.



ನೀರಿನ ಮಡ್ಡು.



ಬಿಳಿವರ್ಣ ಚಿತ್ರ ಪ್ರೇಮದ ಸಂಕೇತ.



ಗತಕಾಲದ ವೀರಗಲ್ಲು.

ಕಾಣಬಹುದು. ಇದು ಸಹ ಪ್ರಾಚೀನ ಮಾನವರ ವಾಸಸ್ಥಳವಾಗಿದೆ ಎನ್ನಲಾಗಿದೆ. ಈ ಬಂಡೆಗಲ್ಲಿನ ಮೇಲೆ ಬಿಳಿವರ್ಣದ ಚಿತ್ರಗಳಿವೆ. ಗುಹೆಯಲ್ಲಿರುವ ಬಿಳಿವರ್ಣದ ಚಿತ್ರಕಲೆ ಹಾಗೂ ಮಡಿಕೆಯ ಅವಶೇಷಗಳು ಪ್ರಾಚೀನ ಮಾನವ ಅದರಲ್ಲೂ ನವಶಿಲಾಯುಗದಿಂದ ಜಟಿಂಗರಾಮೇಶ್ವರ ಬೆಟ್ಟದ ಪರಿಸರವು ವಸತಿ ತಾಣವಾಗಿತ್ತು ಎಂಬುದನ್ನು ಸ್ಪಷ್ಟಗೊಳಿಸುತ್ತದೆ.

ಜಟಿಂಗರಾಮೇಶ್ವರ ಬೆಟ್ಟದಲ್ಲಿರುವ ಚಿತ್ರಗಳ ವಿವರಣೆ :

ಜಟಿಂಗರಾಮೇಶ್ವರ ಬೆಟ್ಟದ ದೃಶ್ಯ : ಬೆಟ್ಟದ ತುದಿಯಲ್ಲಿ ಕಾಣುವ ಜಟಂಗಿರಾಮೇಶ್ವರ ಬೆಟ್ಟವು ಐತಿಹಾಸಿಕ ಪುರಾಣಗಳ ಮಹತ್ವ ಪಡೆದಿದೆ. ಹಾಗೂ ಪ್ರಾಗೈತಿಹಾಸಿಕ ನೆಲೆಗಳನ್ನು ಹೊಂದಿದೆ.

ಕಾಶಿ ಪುರಾದೀಶ್ವರ ದೇವಾಲಯ : ಬೆಟ್ಟದ ಮೇಲ್ಭಾಗದಲ್ಲಿ ಕಾಶಿ ಪುರಾದೀಶ್ವರ ದೇವಾಲಯವಿದೆ, ಪ್ರಸ್ತುತ ಈ ಸ್ಥಳದಲ್ಲಿ ಪ್ರತಿ ಸೋಮವಾರ ಪೂಜಾ ವಿಧಿವಿದಾನಗಳು ನೆಡೆಯುತ್ತಿರುತ್ತವೆ. ಹಾಗೂ ಕಲ್ಯಾಣ ಮುಹೋತ್ಸವಗಳು ನಡೆಯುತ್ತವೆ. ಪ್ರಸ್ತುತ ಈ ಸ್ಥಳವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ.

ಶಾಸನ : ದೇವಾಲಯದ ಹಿಂಭಾಗದ ಕಲ್ಲುಬಂಡೆಯ ಮೇಲೆ ಅಶೋಕನ ಶಾಸನವನ್ನು ಕೇತ್ತಲಾಗಿದೆ. ಈ ಪ್ರದೇಶವು ಮೌರ್ಯರ ಆಳ್ವಿಕೆಯಲ್ಲಿತೆಂದು ಹೇಳಲಾಗುತ್ತದೆ.

ಕಲ್ಲಾಸರೆಯ ಗುಹೆ : ಆದಿಮಾನವರು ವಾಸಿಸಲು ಯೋಗ್ಯವಾದ ೧೦-೧೫ ಅಡಿ ಉದ್ದಗಲಗವಾದ ಈ ಕಲ್ಲಾಸರೆಯು ಯಾವುದೇ ಪ್ರಾಕೃತಿಕ ಆಪತ್ತಿನಿಂದ ರಕ್ಷಣೆ ನೀಡಿದೆ. ಇದರ ಹಾಸು ಬಂಡೆಯ ಮೇಲೆ ರೇಖಾ ಚಿತ್ರಗಳನ್ನು ರಚಿಸಿದ್ದು, ಆ ಜಾಗದಲ್ಲಿ ಉರುವನ್ನು ಬಳಸಿ ಅಡುಗೆಮಾಡುವುದರಿಂದ ಈ ಸ್ಥಳವು ಹೊಗೆ ತುಂಬಿ ಕಪ್ಪಾಗಿದೆ. ಪ್ರಸ್ತುತ ಆ ಜಾಗದಲ್ಲಿ ಚಿತ್ರಗಳು ನಶಿಸಿಹೋಗಿವೆ.

ನೀರಿನ ಹೊಂಡ : ಜಟಿಂಗರಮೇಶ್ವರ ಬೆಟ್ಟದ ಆವರಣದಲ್ಲಿ ಮೂರು ನೀರಿನ ಹೊಂಡಗಳಿವೆ. ಈ ಹೊಂಡಗಳು ಯಾವ ಕಾಲಕ್ಕೂ ಬತ್ತದೆ ಇರುವಂತಹ ಇವುಗಳು ಆದಿಮಾನವರಿಗೆ ಜೀವ ಸೆಲೆಯಾಗಿ ಕಾದಿದೆ ಎಂದರೆ ತಪ್ಪಾಗಲಾರದು.

ಪ್ರೇಮಿಗಳ ಸಂದಿಸುವಿಕೆ : ಪ್ರೇಮಿಗಳಿಬ್ಬರು ಪರಸ್ಪರ ಜನನಾಂಗಗಳಿಂದ ಸಂದಿಸಿದ್ದು, ತಮ್ಮ ಪ್ರೇಮದ ಬಯಕೆಯ ನೀಗಿಸುವ ಪ್ರತಿಕವಾಗಿ ಈ ಚಿತ್ರವನ್ನು ರಚಿಸಿದ್ದಾರೆ. ಪ್ರೇಮ ಸಂಕೇತವಾಗಿ ಮೇಲ್ಭಾಗದಲ್ಲಿ ಒಂದು ಬಗೆಯ ಹೂವಿನ ಚಿತ್ರ ರಚಿಸಿದ್ದು, ಈ ಚಿತ್ರವು ಬಿಳಿವರ್ಣದಿಂದ ಸಂಯೋಜಿಸಲಾಗಿದೆ.

ವೀರಗಲ್ಲು : ವೀರಗಲ್ಲುಗಳ ನಿರ್ಮಾಣ ವಿವಿಧ ಕಾರಣಕ್ಕಾಗಿ ಎನ್ನುತ್ತಾರೆ. ಇಲ್ಲಿನ ವೀರಗಲ್ಲು ಮಹಿಳೆಯರ ಅಕ್ರಮಣಕ್ಕಾಗಿ ಯುದ್ಧ ನೆಡೆಸುವ ಹಿನ್ನೆಲೆಯಲ್ಲಿ ರೂಪಗೊಂಡಂತೆ ಕಾಣುತ್ತದೆ.

೩. ಸಂತೆಗುಡ್ಡ ಪರಿಸರ :

ಸಂತೆಗುಡ್ಡ ಪರಿಸರವು ಮೊಳಕಾಲ್ಮೂರು ತಾಲೂಕಿನ ವಾಯುವ್ಯ ಭಾಗಕ್ಕೆ ಸುಮಾರು ೩೦ ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಉತ್ತರಕ್ಕೆ ಗುಡ್ಡವಿದೆ. ಬೃಹದಾಕಾರದ ಬಂಡೆಗಳಿಂದ ನಿರ್ಮಿತವಾದ ಎರಡು ಗುಹೆಗಳಿವೆ. ಮದಗವಿ ಗುಡ್ಡದ ಪೂರ್ವಭಾಗದಲ್ಲಿದೆ. ಮ್ಯಾದರಪಡೆ ಗುಡ್ಡದ ಪಶ್ಚಿಮ ಭಾಗದ ಜೇನುಗುಂದಿ ಪ್ರದೇಶದಲ್ಲಿದೆ. ಈ ಎರಡು ಗವಿಗಳು ಇತಿಹಾಸ ಪೂರ್ವ ಮಾನವರ ವಾಸಸ್ಥಾನಕ್ಕೆ ಯೋಗ್ಯ ತಾಣಗಳಾಗಿದ್ದವು. ಮ್ಯಾದರ ಪಡೆ ಗುಹೆಯ ಉತ್ತರ ದಕ್ಷಿಣವಾಗಿ ೩೦ಮೀ. ಉದ್ದ ಪೂರ್ವ ಪಶ್ಚಿಮವಾಗಿ ೧೨ಮೀ. ಅಗಲ ಹಾಗೂ ೧ ರಿಂರ ೪ಮೀ. ಎತ್ತರವಿರುವ ಈ ಸ್ಥಳದಲ್ಲಿ ಏಕಕಾಲದಲ್ಲಿ ೧೦೦ ಜನ ವಿಶ್ರಮಿಸಬಹುದಾದ ಬೃಹತ್ ಗುಹೆಯಾಗಿದೆ. ಈ ಸ್ಥಳದಲ್ಲಿ ಇತಿಹಾಸ ಪುರ್ವದಿಂದ ಇತಿಹಾಸ ಆರಂಭದ ಕಾಲದವರೆಗೆ ಗುರುತಿಸಬಹುದಾದ ನೂರಾರು ವರ್ಣ ಚಿತ್ರಗಳಿವೆ. ಕೆಮ್ಮಣ್ಣಿನ (ಕಂದುಗೆಂಪು) ವರ್ಣ ಹಾಗೂ ಬಿಳಿ ಬಣ್ಣಗಳಿಂದ ಕೂಡಿದ ಚಿತ್ರಗಳಾಗಿವೆ.

ಚಿತ್ರದುರ್ಗ ಪ್ರದೇಶದಲ್ಲೆ ಬಹುಸಂಖ್ಯಾ ವರ್ಣಚಿತ್ರ ಹಾಗೂ ವಿವಿಧ ಬಗೆಯ ಸಮೂಹ ಚಿತ್ರಗಳು ಇವೆ. ಇತಿಹಾಸ ಪೂರ್ವಜರ ನಿತ್ಯ ಬದುಕಿನ ಪ್ರತಿಬಿಂಬವಾಗಿ ಬೇಟೆ ದೃಶ್ಯ, ಯುದ್ಧದಲ್ಲಿ ತೊಡಗಿದ ಯೋಧರು, ಒಂಟೆ, ಆನೆ ಸವಾರರು, ಪ್ರಾಣಿ, ಪಕ್ಷಿ ಮನುಷ್ಯಾಕೃತಿ, ಮಡಲ ಚಿತ್ರಗಳು ೪ ಸೆಂ.ಮೀ. ನಿಂದ ೫೫ ಸೆಂ.ಮೀ. ವರೆಗೂ ದೊಡ್ಡದಾಗಿ ಚಿತ್ರಿಸಿದ್ದಾರೆ. ಪರಿಪಕ್ವ ರೇಖೆಯ ಚಲನಾಶೀಲ ಕೃತಿಗಳು ನೇರ ಸಂಯೋಜನೆಯಿಂದ ಚಿತ್ರಿತವಾಗಿವೆ. ಪ್ರಜ್ಞಾವಂತ ಅಭಿವ್ಯಕ್ತಿ ಈ ಚಿತ್ರಗಳಲ್ಲಿದೆ.

ಸಂತೆಗುಡ್ಡ ಪರಿಸರದ ಚಿತ್ರಗಳ ವಿವರಣೆ :

ಶಿಥಿಲಗೊಂಡ ದೇವಾಲಯ : ಮೊಣಕಾಲ್ಮೂರು ತಾಲೂಕು ಸಂತೆಗುಡ್ಡ ಪರಿಸರದಲ್ಲಿ ಕ್ರಿಶ ೧೧ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಅರಸರ ಆರನೆಯ ವಿಕ್ರಮಾದಿತ್ಯನ ಸಹೋದರ ಜಯಸಿಂಹನ ವಶದಲ್ಲಿತ್ತು ಎಂಬ ಹೇಳಿಕೆ ಇದೆ. ಅಂದಿನ ಸಂದರ್ಭದಲ್ಲಿ ನಿರ್ಮಿಸಲಾದ ದೇವಾಲಯ ಪ್ರಸ್ತುತ ಶಿಥಿಲಗೊಂಡು ಹಾಳಾಗಿದೆ. ಇದು ಸಂತೇಗುಡ್ಡದ ಕೆಳಭಾಗದಲ್ಲಿದೆ.

ಕಲ್ಲಾಸರೆಯ ವರ್ಣಚಿತ್ರ ವಿಕ್ಷಣೆ : ಬೃಹದಾಕಾರದ ಬಂಡೆಗಲ್ಲಿನಲ್ಲಿ ನಿರ್ಮಿತವಾದ ನೈಸಗಿಕ ಕಲ್ಲಾಸರೆಯು ಸುಮಾರು ದಕ್ಷಿಣ ಪೂರ್ವವಾಗಿ ೩೦-೪೦ ಅಡಿ ಅಗಲ ಹಾಗೂ ೧೦ ಅಡಿ ಎತ್ತರದ ಈ ಸ್ಥಳದಲ್ಲಿ ಇತಿಹಾಸ ಪೂರ್ವದಿಂದ ಇತಿಹಾಸ ಆರಂಭದವರೆಗೂ ರಚಿತವಾದ ನೂರಾರು ವರ್ಣಚಿತ್ರಗಳಿವೆ. ಬಿಳಿ ಮತ್ತು ಕೆಂಪು, ವರ್ಣಗಳಿಂದ ಹೆಚ್ಚು ಕೃತಿಗಳು ರಚನೆಗೊಂಡಿವೆ. ಇಲ್ಲಿ ಕಂಡುಬರುವ ಚಿತ್ರಗಳು ವಿವಿಧ ಬಗೆಯ ಸಮೂಹ ಚಿತ್ರಗಳು, ನಿತ್ಯಬದುಕಿನ ಚಿತ್ರಗಳು, ಬೇಟೆದೃಶ್ಯ ಯುದ್ಧದ ದೃಶ್ಯ ಆನೆ, ಕುದುರೆ, ಒಂಟೆಸವಾರರು,

ಪ್ರಾಣಿ ಪಕ್ಷಿಗಳು, ದೇವಾಲಯ, ರಥ ಚಿತ್ರಗಳು, ಮೂಢ ನಂಬಿಕೆಯ ಮಂಡಲ ಚಿತ್ರಗಳನ್ನು ರಚಿಸಿದ್ದಾರೆ. ೪ ಸೆ.ಮೀ. ನಿಂದ ೩೫ ಸೆ.ಮೀ. ಅಳತೆಗೂ ಮೀರಿದ ಚಿತ್ರಗಳು ಕಂಡುಬಂದಿವೆ. ಚಲನಶೀಲ ಪರಿಪಕ್ವ ರೇಖೆಗಳಿಂದ ನೇರವಾಗಿ ಸಂಯೋಜಿಸಿ ರಚಿಸಿದ್ದಾರೆ.

ಮಾಂತ್ರಿಕ ಕಟ್ಟಳೆಗಳ ಮಂಡಲ ಚಿತ್ರಗಳು : ದಿಗ್ಬಂಧನ ರೀತಿಯಲ್ಲಿರುವ ಕೆಂಪುವರ್ಣ ರೇಖಾಚಿತ್ರವಾಗಿದ್ದು, ಸುರುಳಿ ಸುರುಳಿಯಾಗಿ ಸುತ್ತಿ ಒಂದೆಡೆ ಬಂದಿಸಿದಂತೆ ಭಾಸವಾಗುತ್ತದೆ. ಇಲ್ಲಿನ ಚಿತ್ರಗಳು ಮಾನವನನ್ನು ಬಲಿ ಕೊಡುವಂತೆ ಗೋಚರಿಸುವ ಹಾಗೆ ಚಿತ್ರಿಸಲಾಗಿದೆ. ಈ ಬಗೆಯ ಚಿತ್ರಗಳು ಹಲವು ಶಕ್ತಿಗಳ ವಶಿಕರಣಕ್ಕಾಗಿ ಮಾಟ, ಮಂತ್ರದ ಹಿನ್ನೆಲೆಯಲ್ಲಿ ರಚಿಸಿರಬಹುದು ಎಂದು ಹೇಳಲಾಗಿದೆ.

ಹೆಣ್ಣು ದೇವತೆಯ ಚಿತ್ರ : ಬಿಳಿ ವರ್ಣದಿಂದ ರಚಿಸಲಾದ ಈ ಚಿತ್ರವು ಮೆಸಪಟೋಮಿಯಾ ನಾಗರೀಕತೆಯ ಮುದ್ರೆಯಂತೆ ಕಂಡುಬರುತ್ತದೆ. ಜೋಡು ರೇಖೆಯಲ್ಲಿ ಎರೆಡು ಅಸ್ತ್ರಗಳನ್ನು ಮೇಲೆತ್ತಿ ವಿಚಿತ್ರ ಆಯುಧ ಹಿಡಿದಿರುವಂತೆ ಚಿತ್ರಿಸಿದ್ದಾರೆ. ತಲೆಯ ಅಕ್ಕಪಕ್ಕ ಪಕ್ಷಿ ಮಾದರಿಯ ಚಿತ್ರಗಳಿದ್ದು, ಒಟ್ಟಾರೆ ಬಲಿಗಾಗಿ ಕಾದು ಕುಳಿತ ಹೆಣ್ಣು ದೇವತೆಯಂತೆ ಕಾಣುತ್ತದೆ.

ಆದಿಮಾನವರ ಬಂಧನ ಚಿತ್ರ : ಈ ಚಿತ್ರವು ಬಿಳಿವರ್ಣದಿಂದ ರಚಿಸಲಾಗಿದೆ. ಚಿತ್ರದಲ್ಲಿ ಒಬ್ಬ ವ್ಯಕ್ತಿಯು ಇಬ್ಬರನ್ನು ಒಂದೇ ಕೋಣೆಯಲ್ಲಿ ಬಂಧಿಸಿದಂತೆ ಕಾಣುತ್ತದೆ. ಬಹುಶಃ ತನ್ನ ನಿತ್ಯಕರ್ಮದಲ್ಲಿ ತನ್ನ ಪರಿವಾರಕ್ಕೆ ರಕ್ಷಣೆ ನೀಡಿರಬಹುದು. ಆದಿಮಾನವ ಬೇಟೆಗೆ ಹೊರಡುವ ಮೊದಲು ಕುಟುಂಬದವರಿಗೆ ಆಜ್ಞಾಪಿಸಿರುವಂತೆ ಚಿತ್ರಿಸಲಾಗಿದೆ.

ಮಂಡಲ ಚಿತ್ರ : ಬಿಳಿವರ್ಣದಿಂದ ರಚಿಸಲಾಗಿದೆ. ಸೂರ್ಯಚಂದ್ರರ ಹೋಲಿಕೆಯಲ್ಲಿ ಚಿನ್ಹೆಗಳಿವೆ. ಅದರ ಕೆಳಭಾಗದಲ್ಲಿ ವಿವಿಧ ಗಾತ್ರದ ಮಾನವರು ನೃತ್ಯ ಮಾಡುತ್ತಿರುವಂತೆ ಚಿತ್ರಿಸಿದ್ದಾರೆ. ಈ ಚಿತ್ರಗಳು ಪ್ರಾರಂಭಿಕ ಹಂತದಲ್ಲಿ ಚಿತ್ರಿಸಿರುವುದರಿಂದ ವಸ್ತುನಿಷ್ಠತೆ ಕಾಣುವುದಿಲ್ಲ. ಮತ್ತೊಂದು ಚಿತ್ರದಲ್ಲಿ ಎರಡು ಚಚೌಕಗಳ ಚಿತ್ರವಿದ್ದು, ಅವುಗಳ ಕೆಳಗೆ ಸಮಾನಾಂತರವಾಗಿ ಸಸ್ಯ ಮಾದರಿಯ ವೃತ್ತ ರಚಿಸಿದ್ದು, ಸಸ್ಯದ ಎರಡು ಎಲೆಗಳು ಮೇಲಿನ ಮಂಡಲ ಚೌಕಗಳಿಗೆ ಸೂಚನೆ ನೀಡುವಂತೆ ಚಿತ್ರಿಸಿದ್ದು, ಪ್ರತಿ ಚೌಕದಲ್ಲಿಯೂ ಒಳ ಚೌಕಗಳನ್ನು ರಚಿಸಿದ್ದಾರೆ ಪ್ರಸ್ತುತ ಔಷಧಿ ಅಂಗಡಿಗಳಿಗೆ ನೀಡಿರುವ ಪ್ಲಸ್ (+) ಚಿಹ್ನೆಯಂತೆ ರಚಿಸಲಾಗಿದೆ. ಚಿತ್ರದ ಬಾಹ್ಯಾ ರೇಖೆಯ ಎಂಟು ದಿಕ್ಕಿಗೆ ಸೂರ್ಯ, ಚಂದ್ರ, ಮತ್ತು ಬಾಣದ ತುದಿಗಳನ್ನು ರಚಿಸಿದ್ದಾರೆ.

ಒಟ್ಟಾರೆ ಈ ಚಿತ್ರವು ನೋಡುಗರಿಗೆ ಮಕ್ಕಳಿಗೆ ದೇವಿ ಹಾಕಿಸುವಂತೆ ಬಾಸವಾಗುವ ಯಂತ್ರ ಮಂತ್ರಗಳ ಮಂಡಲಗಳ ಚಿತ್ರವಾಗಿದೆ. ರೋಗ ರುಜಿನಗಳನ್ನು ನಿಯಂತ್ರಿಸುವ ನಿಟ್ಟನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರಕ್ಕೆ ಬಿಳಿ ಬಣ್ಣಗಳನ್ನು ಬಳಸಿ ಸುಂದರವಾಗಿ ರಚಿಸಿದ್ದಾರೆ.

ವಿವಿಧ ಬಗೆಯ ಚಿಹ್ನೆಗಳು : ಪ್ರಾಗೈತಿಹಾಸಿಕ ಮಾನವರು ಪ್ರಥಮದಲ್ಲಿ ರಚಿಸಿದ ಎಲ್ಲಾ ಚಿತ್ರಗಳು ಕೇವಲ ಚಿನ್ಹೆಗಳಂತಿವೆ. ಭಾಷೆ ತಿಳಿಯದ ಆ ಸಂದರ್ಭದಲ್ಲಿ ಈ ಚಿತ್ರಗಳು ಪ್ರಮುಖ ಸಹಕಾರಿಯಾಗಿರಬಹುದು. ಅಲ್ಲದೇ ಅಂದಿನ ಕಾಲದ ವಿನಿಮಯ ಸಂಕೇತಗಳ ಹಾಗೆ ಕಾಣುವಂತೆ ಚಿತ್ರಿಸಲಾಗಿದೆ.

ರಾತ್ರಿ ಬೇಟೆ : ಬಿಳಿವರ್ಣದಿಂದ ರಚಿಸಿದ್ದು, ಈ ಚಿತ್ರದಲ್ಲಿ ರಾತ್ರಿಯ ಸಂಕೇತವಾಗಿ ಚಂದ್ರ, ಬೆಳಗಿನಜಾವದ ಸಂಕೇತವಾಗಿ ಕೋಳಿಯನ್ನು ಚಿತ್ರಿಸಿದ್ದು, ನಸುಕಿನಲ್ಲಿ ಬೇಟೆಗೆ ಹೊರಡುವಂತೆ ಕಂಡುಬರುತ್ತದೆ.

ಬೃಹತ್ ಕಲ್ಲಾಸರೆಯ ಚಿತ್ರಗಳು : ಕೆಂಪು ಮತ್ತು ಬಿಳಿವರ್ಣದಲ್ಲಿ ರಚಿಸಲಾದ ವಿವಿಧ ಬಗೆಯ ಪ್ರಾಣಿ, ಪಕ್ಷಿ, ಮಾನವಕೃತಿ, ಯುದ್ದ, ಸಾಹಸಗಳು, ಬೇಟೆ, ಇತ್ಯಾದಿ ಚಿತ್ರಗಳನ್ನು ಚಿತ್ರಿಸಿದ್ದಾರೆ ಈ ಎಲ್ಲಾ ಚಿತ್ರಗಳು ಬೇರೆ ಬೇರೆ ಕಾಲಮಾನದಲ್ಲಿ ರಚಿಸಲಾಗಿದೆ. ಚಿತ್ರಗಳಲ್ಲಿಯೂ ವಿಭಿನ್ನವಾದ ರಚನಾ ತಂತ್ರಗಾರಿಕೆಯನ್ನು ಕಾಣಬಹುದು.

ಹೋರಾಟ ಮತ್ತು ಗೋಳಿ ಕಾಳಗ : ವಿವಿಧ ಬಗೆಯ ಆಯುಧಗಳನ್ನು ಹಿಡಿದು ಯುದ್ಧ ನಿರತರಾಗಿದ್ದಾರೆ. ಮಾನವರ ಎರಡುಗುಂಪುಗಳು ಪರಸ್ಪರ ಕುದುರೆ ಸವಾರರೊಂದಿಗೆ ಕಾಳಗ ನೆಡಿಸುತ್ತಿರುವುದು ಕಂಡುಬರುತ್ತದೆ. ಪ್ರತಿಜೋಡಿ ಕಾಳಗವನ್ನು ಪರಸ್ಪರಾಭಿಮುಖವಾಗಿ ಚಿತ್ರಿಸಿದ್ದಾರೆ. ಚಿತ್ರದ ಮೇಲ್ಭಾಗದಲ್ಲಿ ನಾಯಕನೊಬ್ಬ ಕುದುರೆಯ ಮೇಲೆ ಕುಳಿತು ಆಜ್ಞಾಪಿಸುವಂತೆ ಚಿತ್ರಿಸಿದ್ದಾರೆ. ಚಿತ್ರಕ್ಕೆ ಕೆಂಪುವರ್ಣವನ್ನು ಬಳಸಿ ಸುಂದರವಾಗಿ ಮೂಡಿಬಂದಿದೆ.

ಆನೆ, ಕುದುರೆಗಳೊಂದಿಗೆ ಕಾಳಗ : ಗಜಕಾಳಗದಂತಿರುವ ಕೆಂಪುವರ್ಣದ ಚಿತ್ರಗಳು ಪುರಾಣ ಕಥೆಗಳನ್ನು ಆಧರಿಸಿದಂತಿದೆ. ಬಹುಶಃ ಈ ಚಿತ್ರ ರಣರಂಗದಲ್ಲಿ ಯುದ್ಧ ವಿವಿಧ ದಳಗಳಿಂದ ಕೂಡಿದ್ದು, ಇತಿಹಾಸ ಪ್ರಾರಂಭ ಯುಗದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ.

ನಾಗಾರಾಧನೆ : ಈ ಚಿತ್ರದಲ್ಲಿ ವಿಶೇಷವಾಗಿ ರಥಗೋಪುರದ ಚಿತ್ರವಿದ್ದು, ಪ್ರಸ್ತುತ ರಥಗಳ ಅಲಂಕಾರಕ್ಕೆ ಬಟ್ಟೆ ಬಾವುಟಗಳನ್ನು ಬಳಸಿದಂತೆ ಚಿತ್ರದಲ್ಲಿ ರಚನೆ ಮಾಡಿದ್ದಾರೆ. ಪ್ರತಿ ಹುಣ್ಣುಮೆಯಲ್ಲಿ ದೈವಿಕ ಮನೋಭಾವನೆಯ ರಂಗೋಲೆಗಳಿಂದ ಶೃಂಗರಿಸಿದ ರೇಖಾ ವಿನ್ಯಾಸಗಳು ಮೇಲ್ಭಾಗದಲ್ಲಿ ನಾಗರ ಹಾವೊಂದು ಹೆಡೆ ಬಿಚ್ಚಿ ಜನರನ್ನು ನೋಡುವಂತೆ ಚಿತ್ರಿಸಿದ್ದಾರೆ. ಒಟ್ಟಾರೆ ನಾಗಾರಾಧನೆಯ ಉತ್ಸವದಂತೆ ಕಾಣುತ್ತದೆ ಚಿತ್ರಕ್ಕೆ ಕೆಂಪು ವರ್ಣ ಬಳಸಿದ್ದಾರೆ.

ದೇವರ ದರ್ಶನ ಚಿತ್ರ : ಈ ಚಿತ್ರವು ಇತಿಹಾಸ ಆರಂಭದ ಅಂಚಿನಲ್ಲಿ ರಚಿತಗೊಂಡಂತೆ ಕಾಣುತ್ತದೆ. ಕಾರಣ ಚಿತ್ರದಲ್ಲಿ ದೇವಾಲಯದ ಗೋಪುರ ವಿನ್ಯಾಸವಿದ್ದು, ಪಕ್ಕದಲ್ಲಿ ದೇವಾಲಯದೊಳಗಿನ ದೇವರನ್ನು ಪ್ರತಿನಿಧಿಸಲು ಆಂಜನೇಯನಂತೆ ಗೋಚರಿಸುವ ಚಿತ್ರ ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ನಾಯಕನೊಬ್ಬ ಕುದುರೆ ಮೇಲೆ ವಿಶೇಷ ದರ್ಶನ ಪಡೆಯಲು

[illegible]

ಮೊಳಕಾಲ್ಮೂರು ಸಂತೆಗುಡ್ಡ ಪರಿಸರ



ಶಿಥಿಲಗೊಂಡ ದೇವಾಲಯ.



ಕಲ್ಲಾಸರೆಯ ವರ್ಣಚಿತ್ರಗಳು



ಮಾಂತ್ರಿಕ ಕಟಳೆಗಳ ವರ್ಣ ಚಿತ್ರ

ಮೊಳಕಾಲ್ಮೂರು ಸಂತೆಗುಡ್ಡ ಪರಿಸರ



ಬೃಹತ್ ಕಲ್ಲಾಸೆರೆಯ ವರ್ಣ ಚಿತ್ರಗಳು





ಹೋರಾಟ ಮತ್ತು ಗೂಳಿ ಕಾಳಗ



ಆನೆ ಕುದುರೆಗಳೊಂದಿಗೆ ಕಾಳಗ

ಮೊಳಕಾಲ್ಮೂರು ಸಂತೆಗುಡ್ಡ ಪರಿಸರ


ದೇವತೆ ಬಿಳಿವರ್ಣ ಚಿತ್ರ


ಬಂದನದ ಬಿಳಿವರ್ಣ ಚಿತ್ರ



ಮಂಡಲಗಳ ಬಿಳಿವರ್ಣ ಚಿತ್ರ


ವಿವಿಧ ಬಗೆಯ ಚಿಹ್ನೆಗಳ ಚಿತ್ರ


ರಾತ್ರಿಯ ಬೇಟೆ ಚಿತ್ರ

ಆಗಮಿಸುತ್ತಿರುವ, ಇವನ ಹಿಂದೆ ಒಬ್ಬ ಸೇವಕನ ಚಿತ್ರ ರಚಿಸಿದ್ದಾರೆ. ದೇವಾಲಯದ ಗೋಪುರ ಮೇಲ್ಭಾಗದಲ್ಲಿ ನವಿಲಿನ ಚಿತ್ರ ರಚಿಸಿದ್ದಾರೆ, ದೇವಾಲಯದ ಒಳ ಕೋಣೆಗಳು ಗರ್ಭಗುಡಿಗಳನ್ನು ಮನೆಮನೆಯಾಗಿ ಪ್ರತ್ಯೇಕವಾಗಿ ರಚಿಸಿದ್ದಾರೆ. ಚಿತ್ರಕ್ಕೆ ಬಿಳಿ ಮತ್ತು ಕೆಂಪು ವರ್ಣಗಳನ್ನು ಬಳಸಿ ನೈಜವಾಗಿ ರಚಿಸಿದ್ದಾರೆ.

ಪ್ರಾಣಿಗಳ ಸಮೂಹ ವರ್ಣಚಿತ್ರ : ಬಿಳಿ ಮತ್ತು ಕೆಂಪುವರ್ಣಗಳಿಂದ ಚಿತ್ರಿತವಾದ ಈ ಚಿತ್ರಗಳಲ್ಲಿ ಮಂಗ, ಜಿಂಕೆ, ಗೂಳಿ ಹಾಗೂ ಅಸ್ಪಷ್ಟವಾಗಿ ಕಾಣುವ ಕೆಂಪು ವರ್ಣದ ಚಿತ್ರಗಳು ಇವೆ. ಒಟ್ಟಾರೆ ಪ್ರಾಣಿಗಳ ಸಮೂಹವೆಂದು ಊಹಿಸಬಹುದಾಗಿದೆ.

ಹಿರಿಯೂರು ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳು :

ಹಿರಿಯೂರಿನಿಂದ ಹುಳಿಯಾರು ಮಾರ್ಗದಲ್ಲಿ ಸುಮಾರು ೭ ಕಿ.ಮೀ. ದೂರದಲ್ಲಿ ಉಡುವಳ್ಳಿ ಗ್ರಾಮವಿದ್ದು, ನವೋದಯ ವಸತಿಶಾಲೆಯಿದೆ. ಇದರ ಮುಂಭಾಗದಲ್ಲಿರುವ ಗುಡ್ಡವೇ ಮುಳ್ಳಪ್ಪನ ಗುಡ್ಡ. ಹಿರಿಯೂರು ತಾಲೂಕಿನ ಉಡುವಳ್ಳಿ, ಮುಳ್ಳಪ್ಪನಗುಡ್ಡ ಹಾಗೂ ಸೊಂಡೆಕೆರೆ ಪ್ರದೇಶಗಳು ಇತಿಹಾಸ ಪೂರ್ವಕಾಲದ ನೆಲೆಯೆಂಬುದನ್ನು ಇಲ್ಲಿರುವ ಶಿಲಾವೃತ್ತಗಳು ಸಮರ್ಥಿಸುತ್ತವೆ. ಬಯಲುಬಂಡೆಯ ಸಂಸ್ಕೃತಿ ಅಥವಾ ಗ್ರಾಮಜೀವನ ಅಳವಡಿಸಿಕೊಂಡ ಕೃಷಿಕ ವರ್ಗದವರ ಕಲಾಭಿರುಚಿ ವ್ಯಕ್ತವಾಗಿದೆ. ಈ ಪ್ರದೇಶದಲ್ಲಿ ಬಯಲು ಬಂಡೆಯ ನೂರಾರು ಕೊರೆದ ರೇಖಾಚಿತ್ರಗಳು ಕಂಡುಬಂದಿದ್ದು, ಗೂಳಿಗಳು, ಮನುಷ್ಯಕೃತಿ ಕುಟ್ಟಿ, ಕೊರೆದ, ಆಳವಾಗಿ ಉಜ್ಜಿ ಮೂಡಿಸಿದ ತಂತ್ರಗಾರಿಕೆ ಮತ್ತು ಶೈಲಿಯ ಜ್ಯಾಮಿತಿಯಾಕಾರದ ಕೃತಿಗಳು ಇವೆ. ಮಂಡಲವನ್ನು ಹೋಲುವಂತಹ ವಿಶಿಷ್ಟ ರೇಖಾಕೃತಿಗಳು ಮತ್ತು ಕುಳಿಗಳ ಆಕೃತಿಗಳು ಅಪಾರ ಸಂಖ್ಯೆಗಳಲ್ಲಿವೆ. ಉಡುವಳ್ಳಿಯಲ್ಲಿಯು ವಿವಿಧ ಬಗೆಯ ಬಯಲುಬಂಡೆ ರೇಖಾಕೃತಿಗಳಿಂದ ಗಮನಸೆಳೆದಿದೆ ಜಾಮಿತಿ ಆಕೃತಿಗಳು ಪ್ರಾಣಿಗಳು, ಕತ್ತಿಗುರಾಣಿ ಹಿಡಿದು ಹೋರಾಟ ನೆಡೆಸುತ್ತಿರುವ ಮನುಷ್ಯರ ಚಿತ್ರಗಳು ಅನೇಕವಾಗಿವೆ.

ಹಿರಿಯೂರು ಬಯಲುಬಂಡೆ ಚಿತ್ರಗಳ ವಿವರಣೆ :

ಉಡುವಳ್ಳಿಯ ಬೆಟ್ಟ : ಮುಳ್ಳಪ್ಪನ ದೇವಾಲಯವಿರುವ ಈ ಗುಡ್ಡವನ್ನು ಮುಳ್ಳಪ್ಪನ ಗುಡ್ಡವೆಂದು ಕರೆಯುತ್ತಾರೆ. ಈ ಸ್ಥಳ ಆದಿಮಾನವರ ವಾಸಸ್ಥಳವಾಗಿದ್ದು, ಇಲ್ಲಿ ಕಂಡುಬಂದ ಪ್ರಾಗೈತಿಹಾಸಿಕ ಕುರುಹುಗಳಿಂದ ತಿಳಿಯಬಹುದಾಗಿದೆ.

ಹಾಸು ಬಂಡೆಯ ರೇಖಾಚಿತ್ರಗಳು : ವಿವಿಧ ಬಗೆಯ ಕುಟ್ಟಿ ಕೊರೆದ ರೇಖಾಚಿತ್ರಗಳು, ಆಯುಧಗಳನ್ನು ಹಿಡಿದ ಯುದ್ಧ ನೀರತರಾದ ಮಾನವರು ಪರಸ್ಪರ ಹೋರಾಡುತ್ತಿದ್ದಾರೆ. ವಿಶಿಷ್ಟವಾದ ಕತ್ತಿ, ಗುರಾಣಿ ಹಿಡಿದಂತೆ ಕೆತ್ತಿದ್ದು, ಕೆಳಭಾಗದಲ್ಲಿ ಗೋಳಿಗಳನ್ನು ಕಾಣಬಹುದಾಗಿದೆ.

ನಕ್ಷತ್ರ ಮತ್ತು ಗೂಳಿ : ಪ್ರಾಗೈತಿಹಾಸಿಕ ಕಾಲದ ಮಾನವರಲ್ಲಿ ಮೂಢನಂಬಿಕೆಯು ಅತಿಯಾದ ಕಾರಣ ಅವರು ರಚಿಸಿದ ಚಿತ್ರಗಳಲ್ಲಿ ದೈವಿಕವಾಗಿ ಸೂರ್ಯ, ಚಂದ್ರ, ನಕ್ಷತ್ರ

ಹಿರಿಯೂರು



೧ ಉಡುವಳ್ಳಿ,

೨ ಸೊಂಡೆಕೆರೆ,




ಹಿರಿಯೂರಿನ ಉಡುವಳಿ ಪರಿಸರ



ಉಡುವಳಿಯ ಮುಳ್ಳಪನ ಗುಡ್ಡ



ಹಾಸು ಬಂಡೆಯಲ್ಲಿರುವ ರೇಖಾ ಗೀರು ಚಿತ್ರಗಳು





ಪರಸ್ಪರ ಆಯುಧವಿಡಿದು ಕಾಳಗ

ಹಿರಿಯೂರಿನ ಉಡುವನ ಪರಿಸರ



ನಕ್ಷತ್ರ ಮತ್ತು ಗೂಳಿ ಚಿತ್ರ



ಹಸು ಬಂಡೆಯ ರೇಖಾ ಚಿತ್ರ




ಸೂರ್ಯ ಮಾದರಿಯ ರೇಖಾ ಚಿತ್ರ



ಗೂಳಿಗಳ ಪರಸ್ಪರ ಕಾದಾಟ





ಮಂಡಲಗಳ ವಿಶೇಷ ಚಿತ್ರ

ಇತ್ಯಾದಿಗಳನ್ನು ಅವರ ಚಿತ್ರಗಳಲ್ಲಿ ಕಾಣಬಹುದು.

ಗೂಳಿಗಳ ಪರಸ್ಪರ ಕಾಳಗ : ಮದ ತುಂಬಿದ ಜೋಡಿ ಗೂಳಿಗಳು ಪರಸ್ಪರ ಕಾದಾಡುತ್ತಿದ್ದು, ಆದಿಮಾವರ ಕಲಾವಿದರ ಕಣ್ಣಿಗೆ ಕೋಡುಗಳು ಪ್ರಿಯವಾಗಿದ್ದ ಕಾರಣ ದೇಹಕ್ಕಿಂತ ಕೋಡುಗಳನ್ನೆ ಸಪೂರವಾಗಿ ತೋರಿಸಲಾಗಿದೆ. ಹಾಗೂ ಚಪ್ಪಟೆಯ ದೇಹವಿನ್ಯಾಸ ಗೂಳಿಯ ಭುಜವನ್ನು ಸುಂದರವಾಗಿ ಚಿತ್ರಿಸಿದ್ದಾರೆ.

ಮಂಡಲಗಳ ಚಿತ್ರ : ಉಡುವಳ್ಳಿ ಪರಿಸರದಲ್ಲಿ ಸಿಕ್ಕ ವಿಶಿಷ್ಟ ರೀತಿಯ ಮಂಡಲಗಳ ರೇಖಾಚಿತ್ರಗಳು ಇವೆ. ಇತರೆ ಯಾವ ನೆಲೆಯಲ್ಲಿಯೂ ಇಂತಹ ಚಿತ್ರಗಳು ಕಂಡುಬಂದಿಲ್ಲ. ಯಾವ ಕಾರಣಕ್ಕಾಗಿ ಚಿತ್ರಿಸಿದ್ದಾರೆ ಎಂಬುದರ ಸ್ಪಷ್ಟ ಮಾಹಿತಿಯೂ ಸಿಗುವುದಿಲ್ಲ. ಆದರೆ ಪ್ರಕೃತಿಯನ್ನು ಪೂಜಿಸುವಲ್ಲಿ ಅಪಾರವಾದ ನಂಬಿಕೆ ಇತ್ತು ಎಂಬುದನ್ನು ಇಲ್ಲಿ ಕಾಣುವ ಸೂರ್ಯನಂತಹ ಮಂಡಲ ಚಿತ್ರದಲ್ಲಿ ಕಾಣಬಹುದು.

ಹೊಸದುರ್ಗ ಪರಿಸರ :

ಹೊಸದುರ್ಗ ತಾಲೂಕಿನಲ್ಲಿ ಬಯಲುಬಂಡೆ ರೇಖಾಕೃತಿಗಳ ಸಂಶೊಧನೆ ನೆಡೆದಿಲ್ಲವಾದರೂ ತಣಿಗೆಕಲ್ಲಿನ ಈ ಪರಿಸರವನ್ನು ಡಾ. ಎಚ್.ಶ್ರೀಶೈಲ ಆರಾಧ್ಯರು ಇಲ್ಲಿಯ ಕೆಲವು ರೇಖಾಕೆತ್ತನೆ. ಹಾಗೂ ವರ್ಣಚಿತ್ರಗಳನ್ನು ಶೋಧಿಸಿ ವರದಿ ಮಾಡಿದ್ದಾರೆ. ಆದರೆ ಈ ನಿವೇಶನವನ್ನು ಪ್ರತ್ಯೇಕವಾಗಿಯೇ ಅಧ್ಯಯನ ನೆಡೆಸುವ ಅಗತ್ಯವಿದ್ದು, ಜಾನಕಲ್ಲು ಪರಿಸರದಲ್ಲಿ ರಚಿತವಾದ ಕುಳಿಗಳು, ಕುಳಿಗಳ ವಿನ್ಯಾಸಗಳು ಸಾಕಷ್ಟು ಕಂಡುಬರುತ್ತವೆ. ವ್ಯಾಪಕ ಕ್ಷೇತ್ರಕಾರ್ಯದಿಂದ ಈ ಪ್ರದೇಶವನ್ನು ಶೋಧಿಸಲಾಗಿದೆ.

ಗವಿಸಿದ್ದೇಶ್ವರ ಬೆಟ್ಟದ ಈ ಸ್ಥಳದಲ್ಲಿ ಆದಿಮಾನವರ ಜೀವ ಸಂರಕ್ಷಣೆಗೆ, ವಾಸ್ತವ್ಯಕ್ಕೆ ಹಾಗೂ ಉತ್ತಮ ಆಹಾರ ವ್ಯವಸ್ಥೆ (ಗೆಡ್ಡೆ, ಗೆಣಸು, ಕಾಡುಪ್ರಾಣಿಗಳು) ಇದ್ದುದರ ಫಲವಾಗಿ ಅನೇಕ ತಲೆಮಾರಿನ ಆದಿಮಾನವರು ನೆಲಸಿದ್ದರೆಂಬುದು ತಿಳಿದುಬರುತ್ತದೆ. ಇಲ್ಲಿ ದೊರೆತ ಮಣ್ಣಿನ ಮಡಕೆಗಳು, (ವಿವಿಧ ಗಾತ್ರ ಮತ್ತು ವಿವಿಧ ವಿನ್ಯಾಸ) ಆಯುಧಗಳು, (ಪ್ರಸ್ತುತ ಸ್ಥಳೀಯ ಗ್ರಾಮಸ್ಥರಲ್ಲಿವೆ) ಅವರ ವಾಸದ ನೆಲೆಯ ಕಲ್ಲಾಸರೆಯ ಬಂಡೆಗಳ ಮೇಲೆ ಅನೇಕ ಬಿಳಿವರ್ಣದ ಚಿತ್ರಗಳು ಹಾಗೂ ಬಯಲುಬಂಡೆಯ ಚಿತ್ರಗಳು ಕಂಡುಬರುತ್ತವೆ.

ಬಿಳಿವರ್ಣ ಚಿತ್ರ : ಗವಿಸಿದ್ದೇಶ್ವರ ಬೆಟ್ಟದ ಗುಹೆಯೊಂದರಲ್ಲಿ ಮಾನವರ ಜೀವನ ಪದ್ಧತಿಯ ಕೆಲವು ದೃಶ್ಯಗಳನ್ನು ಹಾಗೂ ವಿವಿಧ ಪ್ರಾಣಿಗಳ ಚಿತ್ರಗಳನ್ನು ಬಿಳಿವರ್ಣದಿಂದ ಚಿತ್ರಿಸಿದ್ದಾರೆ. ಕೆಲವು ಚಿತ್ರಗಳು ಬೂದಿ ಮಸಕುಗಳಿಂದ ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಮಂಗಗಳ ಚಿತ್ರಗಳನ್ನು ಮಾನವಾಕೃತಿಯ ರೀತಿಯಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರವು ಆದಿಹಳೆಯ ಶಿಲಾಯುಗದ ಕಾಲಕ್ಕೆ ಸೇರಿದೆ ಎಂದು ಹೇಳಬಹುದು.

ಬೆಟ್ಟದ ದೃಶ್ಯ : ತಣಿಗೆಕಲ್ಲು ಪ್ರದೇಶದಲ್ಲಿರುವ ಬೆಟ್ಟದ ದೃಶ್ಯವಾಗಿದ್ದು, ಪ್ರಸ್ತುತ

ಹೊಸದುರ್ಗ



೧. ತಣಿಗೆಕಲ್ಲು

೨. ಜಾನಕಲ್ಲು



ಹೊಸದುರ್ಗದ ತಣಿಗೆಕಲ್ಲು ಪರಿಸರ



ಗವಿಸಿದ್ದೇಶ್ವರ ಬೆಟ್ಟ ದೃಶ್ಯ









ವಿವಿದ ಬಗೆಯ ಬಿಳಿವರ್ಣ ಚಿತ್ರಗಳು

ಹೊಸದುರ್ಗದ ತಣಿಗೆಕಲ್ಲು ಪರಿಸರ



ತಣಿಗೆಕಲ್ಲು ಬೆಟ್ಟದ ದೃಶ್ಯ



ಸ್ಥಳೀಯರೊಂದಿಗೆ




ಮಣ್ಣಿನ ಪಾತ್ರೆಗಳ ಅವಶೇಷ



ಬಯಲು ಬಂಡೆಯ ಕೊರೆದ ಬಾರ್ಯದ ರೇಖಾ ಚಿತ್ರ


ಹೊಳಲಕೆರೆ |



೧. ಘಟ್ಟಿ ಹೊಸಹಳ್ಳಿ

೨. ತಾಳ್ಯ

ಚಳ್ಳಕೆರೆ



೧. ನನ್ನಿವಾಳ-
೨. ನೇರಲಕುಂಟೆ



ಗವಿಸಿದ್ದೇಶ್ವರ ಎಂದೆ ಕರೆಸಿಕೊಳ್ಳುವ ಈ ಸ್ಥಳದಲ್ಲಿ ವಿಚಿತ್ರ ಮೈವಳಿಕೆಗಳಿಂದ ಕೂಡಿದ ಕಲ್ಲು ಬಂಡೆಗಳಿವೆ ಹಾಗೂ ನಿಸರ್ಗ ನಿರ್ಮಿತ ಕಲ್ಲಸಾರೆಯ ಗುಹೆಗಳಿವೆ. ಈ ಪ್ರದೇಶದಲ್ಲಿ ಆದಿಮಾನವರ ವಾಸದ ನೆಲೆಗಳನ್ನು ಕಾಣಬಹುದು.

ವಾಸ್ತು ನೆಲೆಯಲ್ಲಿ ಸಿಕ್ಕ ಮಣ್ಣಿನ ಕುಡಿಕೆಗಳ ಅವಶೇಷಗಳು : ಈ ಸ್ಥಳದಲ್ಲಿ ವಿವಿಧ ತಲೆಮಾರಿನಿಂದ ಜನವಸತಿ ನೆಲೆಸಿದ್ದು ಕಾಲಮಾನಕ್ಕೆ ಅನುಸಾರವಾಗಿ ವಿವಿಧ ಬಗೆಯ ವಿವಿಧ ಗಾತ್ರದ ಮಣ್ಣಿನ ಅವಶೇಷಗಳು ಕಂಡುಬಂದವು. ಈ ಸ್ಥಳದಲ್ಲಿ ಆದಿಮಾನವರ ಬೇಟೆಯ ಕಲ್ಲು ಮತ್ತು ಕಬ್ಬಿಣದ ಆಯುಧಗಳು ದೊರಕಿವೆ.

ಬಾಣದ ಕೊರೆದ ಚಿತ್ರ : ತಣಿಗೆಗಲ್ಲು ಪರಿಸರದಲ್ಲಿ ಹಾಸುಬಂಡೆಯ ಮೇಲೆ ಬಾಣದ ಗೀರುಚಿತ್ರ ರಚನೆಯಾಗಿದೆ. ಈ ಚಿತ್ರವು ಪುರಾಣ ಕಥಾ ಭಾಗವನ್ನು ತಿಳಿಸುವಂತಿದೆ ಮತ್ತು ಮಾರ್ಗಸೂಚಿಯಾಗಿದೆ. ನೈಜವಾಗಿ ಕಿರುಬೆರಳಿನ ಗಾತ್ರದಲ್ಲಿ ಮೇಲಿಂದ ಮೇಲೆ ಚೂಪಾದ ಸಾಧನವನ್ನು ಬಳಸಿ ಕೊರೆದಿರುವುದರಿಂದ ಆಳವಾದ ತಗ್ಗು ಮೂಡಿದೆ. ಈ ಚಿತ್ರವು ಸುಮಾರು ೪ ಅಡಿ ಸುತ್ತಳತೆಯಲ್ಲಿ ರಚಿಸಲಾಗಿದೆ.

ಹೊಳಲ್ಕೆರೆ ತಾಲೂಕು ಪ್ರಾಗೈತಿಹಾಸಿಕ ನೆಲೆಗಳು :

ಹೊಳಲಕೆರೆ ತಾಲೂಕಿನ ಘಟ್ಟಿ ಹೊಸಹಳ್ಳಿ ಮತ್ತು ತಾಳ್ಯ ಮತ್ತಿತರ ಕಡೆಗಳಲ್ಲಿ ಇತಿಹಾಸ ಪೂರ್ವಕಾಲದ ನೆಲೆಗಳಿರುವುದು ಶೋಧವಾಗಿದೆ. ಆದರೆ ಇಲ್ಲಿ ವಿರಳ ರೇಖಾಕೃತಿಗಳು ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇತಿಹಾಸ ಪೂರ್ವಕಾಲದಿಂದ ಮತ್ತು ಇತಿಹಾಸ ಆರಂಭದ ವರೆಗೆ ಚಿತ್ರಕಲೆ ಕುರಿತು ಸ್ಥೂಲವಿವರಣೆ ಇದ್ದರೂ ರೇಖಾಚಿತ್ರ, ವರ್ಣಚಿತ್ರ, ಬಯಲು ಬಂಡೆಚಿತ್ರಗಳು ಅಂದಿನ ಸಂಸ್ಕೃತಿಯ ಕೃಷಿಕ ಸಮಾಜದ ಸಾಮಾನ್ಯ ವರ್ಗದ ವೃತ್ತಿಗಳನ್ನು ಪರಿಚಯಿಸುತ್ತವೆ. ಇದೇ ಪರಿಸರದ ತಾಳ್ಯ ಗ್ರಾಮವು ಪ್ರಾಗೈತಿಹಾಸಿಕ ಕಾಲದ ನೆಲೆಯಾಗಿದೆ. ಇಲ್ಲಿಯೂ ಸಹ ವಿರಳವಾಗಿ ಕೆಲವು ರೇಖಾ ಚಿತ್ರಗಳು ಕಂಡುಬಂದಿವೆ.

ಚಳ್ಳಕೆರೆ ತಾಲೂಕು ಪ್ರಾಗೈತಿಹಾಸಿಕ ನೆಲೆಗಳು :

ನನ್ನಿವಾಳ–ಸಿದ್ದೇಶ್ವರಗುಡ್ಡದ ಪರಿಸರ ಚಳ್ಳಕೆರೆ ತಾಲೂಕು ಇತ್ತಿಚೀನ ವರ್ಷಗಳಲ್ಲಿ ಬೆಳಕಿಗೆ ಬಂದಿದೆ. ಬಯಲು ಬಂಡೆ ರೇಖಾಕೃತಿಗಳು ಮತ್ತು ವರ್ಣಚಿತ್ರಗಳ ಶೋಧದ ಬಗೆಗೆ ವಿರಳವಾದ ವರದಿಯಾಗಿದ್ದರೂ ನನ್ನಿವಾಳದ ಗುಡ್ಡದಲ್ಲಿರುವ ಕೊರೆದ ಚಿತ್ರಗಳು ಪಾಳೆಗಾರರ ಕಾಲದವು ಎಂದು ಊಹಿಸಲಾಗಿದೆ. ಆದರೆ ತೀರಾ ಪ್ರಾಚೀನವಲ್ಲದಿದ್ದರೂ ಕೃಷಿಕ ಸಮಾಜವನ್ನು ಪ್ರತಿನಿಧಿಸುವ ಪಶುಗಳಿಂದ ಕೂಡಿರುವ ಸಹಸ್ರ ಸಂಖ್ಯೆಯ ಕೊರೆದ ಚಿತ್ರಗಳು ನೇರಲಕುಂಟೆಯಿಂದ ನನ್ನಿವಾಳದವರಗೂ ಸುಮಾರು ೧೦. ಕಿ.ಮೀ. ವ್ಯಾಪ್ತಿಯಲ್ಲಿ ಕಾಣಸಿಗುತ್ತವೆ. ಇದೇ ತಾಲೂಕಿನ ಸಿದ್ದೇಶ್ವರ ಗುಡ್ಡದಲ್ಲಿ ಪ್ರಾಣಿ ಚಿತ್ರಗಳೊಡನೆ ಮಾನವ ಪಾದಾಕೃತಿಗಳೂ ವಿಶೇಷವಾಗಿ ಕಾಣಬಹುದು. ಈ ಪರಿಸರದಲ್ಲಿ ಕುಟ್ಟಿ ಮೂಡಿಸಿದ

[illegible]

ರೇಖಾಕೃತಿಗಳಿರುವುದನ್ನು ಕಾಣಬಹುದಾಗಿದೆ.

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಕಲೆಯ ಕುರಿತಾಗಿ ಹೇಳುವುದಾದರೆ ಗವಿವರ್ಣ ರೇಖಾಚಿತ್ರಗಳು ಮತ್ತು ಬಯಲು ಬಂಡೆಯ ರೇಖಾಚಿತ್ರಗಳು ಹಾಗೂ ಕಲ್ಲು ಗೋರಿಗಳ ಮೇಲೆ ಕಂಡುಬಂದ ರೇಖಾಚಿತ್ರಗಳು, ಇವುಗಳ ಜೊತೆಗೆ ತಾವು ಬಳಸಿದ್ದ ಕೆಲವು ವಸ್ತುಗಳ ಮೇಲೆ ಅಲಂಕಾರಿಕ ನಕ್ಷೆಯ ಚಿತ್ರಗಳು ಸಹ ಅಂದಿನ ಸಾಮಾಜಿಕ ವರ್ಗದವರ ವೃತ್ತಿಯನ್ನು ಪರಿಚಯಿಸುತ್ತವೆ. ಚಿತ್ರದುರ್ಗ ಪ್ರದೇಶಕ್ಕೆ ಸೀಮಿತವಾಗಿ ಹೇಳುವುದಾದರೆ ಇಂತಹ ಬಯಲು ಬಂಡೆಯ ರೇಖಾ ಚಿತ್ರ ಮತ್ತು ಗವಿವರ್ಣ ಚಿತ್ರಗಳವಿನ್ಯಾಸ ಉದ್ದೇಶ ನೇರವಾಗಿ ಒಂದೇ ಆಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು.

* * * * *

ಅಧ್ಯಾಯ : ನಾಲ್ಕು

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ತೌಲನಿಕ ಅಧ್ಯಯನ

ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬಂದ ಪ್ರಾಗೈತಿಒಹಾಸಿಕ ಚಿತ್ರಗಳು ಹೆಚ್ಚಾಗಿ ಆದಿಮಾನವರ ಜೀವನಕ್ರಮವನ್ನು ಅನುಸರಿಸಿದ ಹಿನ್ನೆಲೆಯಲ್ಲಿ ರಚನೆಗೊಂಡಿವೆ. ಕಾಡು ಪ್ರಾಣಿಗಳು, ಮಾನವಾಕೃತಿಗಳು ವೇಷಭೂಷಣಗಳು, ಹೋರಾಟಗಳು, ಗೂಳಿಕಾಳಗ, ಅಶ್ವಕಾಳಗ, ಗಜಕಾಳಗ, ಪಂದ್ಯಗಳು, ಉತ್ಸವಗಳು, ಸೂರ್ಯ, ಚಂದ್ರ, ನಕ್ಷತ್ರಗಳು, ರಥವಿನ್ಯಾಸ ಮಂಡಲ ಚಿತ್ರಗಳು, ಜೀವನದ ಕೆಲವು ಸಂಸ್ಕಾರಗಳ ಚಿತ್ರಗಳು, ಸಣ್ಣ ಸಣ್ಣ ಪ್ರಾಣಿಪಕ್ಷಿಗಳ ಸಂಕುಲಗಳು, ಸಾಂಕೇತಿಕ ಚಿಹ್ನೆಗಳು, ಆರಾಧನೆಗಳು ಮುಂತಾದ ಚಿತ್ರಗಳು ಜಿಲ್ಲೆಯ ವಿವಿಧ ನೆಲೆಗಳಲ್ಲಿ ಕಂಡುಬಂದಿವೆ. ಈ ಎಲ್ಲಾ ಚಿತ್ರಗಳನ್ನು ಗಮನಿಸಿದರೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ಚಿತ್ರಗಳಿಗೆ ಸಾಮ್ಯತೆ ವೈಸಮ್ಯತೆಗಳನ್ನು ಕಂಡುಬರುತ್ತವೆ.

ಚಿತ್ರರಚನೆಯಲ್ಲಾದ ವ್ಯತ್ಯಾಸಗಳು, ಮಾಧ್ಯಮಗಳು ಹಾಗೂ ಆ ಪರಿಸರದ ಭೌಗೋಳಿಕ ಹಿನ್ನೆಲೆಗಳು ಆದಿಮಾನವರ ಚಿತ್ರರಚನೆಗೆ ವಿವಿಧ ಆಯಾಮಗಳನ್ನು ಕಲ್ಪಿಸಿಕೊಟ್ಟಿರಬಹುದು. ಅಲ್ಲದೆ ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬಂದ ಪ್ರಾಗೈತಿಹಾಸಿಕ ಚಿತ್ರಗಳು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ಪ್ರಾಗೈತಿಹಾಸಿಕ ಚಿತ್ರಗಳಿಗಿಂತ ವಿಭಿನ್ನವಾಗಿವೆ ಎಂಬುದನ್ನು ತಿಳಿಯಬಹುದು. ಅಲ್ಲದೆ ಚಿತ್ರರಚನೆಯಲ್ಲಿ ವಿಶೇಷವಾಗಿ ಅಂಗರಚನೆಯಲ್ಲಿ ಬಹಳ ಪ್ರೌಢಿಮೆಯನ್ನು ಹೊಂದಿದೆ. ಚಿತ್ರರಚನೆಯಲ್ಲಿ ಬಗೆ ಬಗೆಯ ಆಯಾಮಗಳನ್ನು ಆದಿಮಾನವರು ಕಂಡುಕೊಂಡಿದ್ದರು. ಉದಾಹರಣೆಗೆ ಏಕರೇಖಾ ಚಿತ್ರರಚನೆ, ದ್ವಿರೇಖಾಚಿತ್ರ, ಚಪ್ಪಟೆವರ್ಣ ಲೇಪನ ಹಾಗೂ ಚಿತ್ರಗಳ ವರ್ಗೀಕರಣದಲ್ಲಿ ವಿಶೇಷ ಸಂಯೋಜನೆಯನ್ನು ಮಾಡಿಕೊಂಡು

[illegible]

[illegible]

[illegible]

ಚಿತ್ರಿಸಿದ್ದಾರೆ. ಹಾಗೂ ಬಯಲುಬಂಡೆಯ ರೇಖಾಚಿತ್ರಗಳನ್ನು ತಮ್ಮ ಅನುಕೂಲತೆಗಳಿಗೆ ಹೊಂದಿಸಿಕೊಂಡು ತಮಗೆ ಪ್ರಿಯವಾದ ಅನೇಕ ಕಾಡುಪ್ರಾಣಿಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಬಗೆಯ ಕೆಲವು ಚಿತ್ರಗಳನ್ನು ತೌಲನಿಕವಾಗಿ ಈ ಕೆಳಕಂಡಂತೆ ವಿವೇಚಿಸಬಹುದು.

ಆನೆಯ ಚಿತ್ರ : ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ ಪ್ರದೇಶದಲ್ಲಿ ಕಂಡುಬಂದ ಬೆಟ್ಟದ ಕೆಳಭಾಗದಲ್ಲಿ ತ್ರಿಶಂಕೇಶ್ವರ ದೇವಾಲಯದ ಬಳಿ ಇರುವ ಬೃಹತ್ ಕಲ್ಲುಬಂಡೆಯ ಮೇಲೆ ಆನೆಯ ಗಿರುಚಿತ್ರವನ್ನು ಕಾಣಬಹುದು. ಸಾಮಾನ್ಯವಾಗಿ ಈ ಬಗೆಯ ಬೃಹತ್ ಗಾತ್ರದ ಆನೆಯ ಚಿತ್ರ ಚಿತ್ರದುರ್ಗದ ಇನ್ಯಾವುದೇ ನೆಲೆಗಳಲ್ಲಿ ಕಂಡುಬಂದಿಲ್ಲ. ಆದರೆ ಇದೇ ಸ್ಥಳದ ಬ್ರಹ್ಮಗಿರಿಯ ಬೆಟ್ಟದ ಮೇಲೆ ಶ್ರೀ ಸಿದ್ದೇಶ್ವರ ಮಠವಿದೆ. ಇದರ ಬಲಭಾಗದಲ್ಲಿರುವ ಪ್ರಾಕೃತಿಕ ಗುಹೆಯೊಂದರಲ್ಲಿ ಕಪ್ಪುವರ್ಣದಿಂದ ರಚಿಸಲಾದ ಆನೆಯ ಚಿತ್ರವಿದೆ. ಗಾತ್ರದಲ್ಲಿ ಚಿಕ್ಕದಾಗಿದ್ದು, ಕೇವಲ ಬಾಹ್ಯ ರೇಖೆಯಿಂದ ದಪ್ಪನೆಯ ವರ್ಣ ಲೇಪನದಿಂದ ಈ ಚಿತ್ರವನ್ನು ರಚಿಸಿದ್ದಾರೆ.

ಮೊಳಕಾಲ್ಮೂರು ತಾಲೂಕು ಪ್ರದೇಶದ ಸಂತೆಗುಡ್ಡ ಪರಿಸರದಲ್ಲಿ ಮದಗವಿ ಮತ್ತು ಮ್ಯಾದರಪಡೆ ಎಂಬ ನೆಲೆಗಳಲ್ಲಿ ನಿಸರ್ಗ ನಿರ್ಮಿತ ಗುಹೆಗಳಿದ್ದು, ಅದರ ಒಳಭಾವಣಿಯಲ್ಲಿ ಅನೇಕ ವರ್ಣಚಿತ್ರಗಳನ್ನು ಚಿತ್ರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ಆನೆಯ ಚಿತ್ರವನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. ಆನೆಯ ಮೇಲೆ ಕುಳಿತ ಯೋಧನೊಬ್ಬ ಆಯುಧವನ್ನು ಹಿಡಿದು ಯುದ್ಧದಲ್ಲಿ ನಿರತನಾಗಿದ್ದಾನೆ. ಎದುರಾಗಿ ಮತ್ತೊಂದು ಆನೆಯ ಮೇಲೆ ಇನ್ನೊಬ್ಬ ಯೋಧನು ಸಹ ಆಯುಧವನ್ನು ಹಿಡಿದು ಯುದ್ಧದಲ್ಲಿ ನಿರತನಾಗಿದ್ದಾನೆ. ಚಿತ್ರಕ್ಕೆ ಕೆಂಪುವರ್ಣವನ್ನು ಬಳಸಿ ಚಿತ್ರಿಸಲಾಗಿದ್ದು, ಆನೆಯ ದೇಹ ಗಾತ್ರಕ್ಕೆ ಸರದೂಗುವಂತೆ ಇತರೆ ಚಿತ್ರಕ್ಕಿಂತ ದೊಡ್ಡದಾಗಿ ಚಿತ್ರಿಸಿದ್ದಾರೆ. ಆನೆಯ ಪೂರ್ಣ ವಿನ್ಯಾಸದ ರೂಪ ಕೊಡುವುದಕ್ಕಾಗಿ ಬಾಹ್ಯ ರೇಖೆಯಿಂದಲೇ ಚಿತ್ರಿಸಿದ್ದು, ಆನೆಯನ್ನು ಬೇರೆ ಪ್ರದೇಶಕ್ಕಿಂತ ವಿಭಿನ್ನ ಸನ್ನಿವೇಶದಲ್ಲಿ ಚಿತ್ರಿಸಿರುವುದು ಇಲ್ಲಿ ವಿಶೇಷವಾಗಿದೆ.

ಗೂಳಿಯ ಚಿತ್ರ : ಚಿತ್ರದುರ್ಗ ಕೋಟೆಯ ಪರಿಸರದಲ್ಲಿ ರಚನೆಗೊಂಡಿದ್ದು, ಆರನೇ ಕೋಟೆಯ ಬದಿ ಹಾಸುಬಂಡೆಯ ಮೇಲೆ ಉಜ್ಜಿ ಮೂಡಿಸಿದ ರೇಖಾಚಿತ್ರವಾಗಿದೆ. ಪ್ರಸ್ತುತ ಈ ಜಿಂಕೆಯ ಚಿತ್ರವನ್ನು ವಿದ್ವಾಂಸರು ಜಿಂಕೆ ಎಂದು ಪರಿಗಣಿಸಿದ್ದಾರೆ. ಆದರೆ ಚಿತ್ರದ ಅಂಗವಿನ್ಯಾಸದಲ್ಲಿ ಅನೇಕ ಬದಲಾವಣೆಗಳು ಕಂಡುಬಂದಿದ್ದು, ಗೂಳಿ ಎಂದು ಪರಿಗಣಿಸುವ ಕೆಲವು ಅಂಶಗಳು ಕಂಡುಬಂದಿವೆ. ದೇಹ ಪ್ರಮಾಣದಲ್ಲಿ ಸಾಮಾನ್ಯ ಗೂಳಿ ಎಂದು ಕಾಣುವ ಈ ಚಿತ್ರದಲ್ಲಿ ಬಾಗಿದ ಕೋಡು, ಭುಜ ಮತ್ತು ಕಾಲುಗಳ ವಿನ್ಯಾಸ ಸ್ಪಷ್ಟವಾಗಿ ಗೂಳಿ ಎಂದು ನಿರೂಪಿಸುತ್ತದೆ. ಈ ಬಗೆಯ ಗೂಳಿಗಳ ಚಿತ್ರಗಳು ಬೇರೆ ಬೇರೆ ನೆಲೆಗಳಲ್ಲಿ ರಚನೆಗೊಂಡಿವೆ. ಗಾತ್ರದಲ್ಲಿ ತೀರಾ ಚಿಕ್ಕವಾಗಿವೆ. ಹಿರಿಯೂರು ತಾಲೂಕಿನ ಉಡುವಳ್ಳಿ

ಪರಿಸರದ ಮುಳ್ಳಪ್ಪನ ಗುಡ್ಡದಲ್ಲಿ ನೂರಾರು ಬಗೆಯ ಗೂಳಿಗಳ ಚಿತ್ರಗಳು ರಚನೆಯಾಗಿದ್ದು, ಇಲ್ಲಿನ ಎಲ್ಲ ಚಿತ್ರಗಳು ಗಾತ್ರದಲ್ಲಿ, ವಿನ್ಯಾಸದಲ್ಲಿ ಒಂದೇ ಬಗೆಯನ್ನು ಹೋಲುತ್ತವೆ. ಸಪೂರಾದ ಕೋಡುಗಳು, ಚಪ್ಪಟೆಯಾದ ದೇಹವಿನ್ಯಾಸ, ಗೂಳಿಗಳ ಭುಜವನ್ನು ಅರ್ಧಚಂದ್ರಾಕೃತಿಯಲ್ಲಿ ಕೋಡಿನೆತ್ತರವೇ ಚಿತ್ರಿಸಿದ್ದಾರೆ. ಇವಲ್ಲದೆ ಚಿಕ್ಕ ಚಿಕ್ಕ ಗಾತ್ರದ ಗೂಳಿಗಳನ್ನು ಕುಟ್ಟುವ ಇಲ್ಲವೆ ಕೊರದು, ಉಜ್ಜಿ ಮೂಡಿಸಿದ ಚಿತ್ರಗಳು ಹಂತ ಹಂತವಾಗಿ ಬೆಳೆದುಬಂದದನ್ನು ತೋರುತ್ತವೆ.

ಸಂತೆಗುಡ್ಡದಲ್ಲಿ ಕೆಂಪುವರ್ಣದಿಂದ ಗೂಳಿಯ ಚಿತ್ರವನ್ನು ಚಿತ್ರಿಸಿದ್ದು, ಮೈಕಟ್ಟಾದ ದೇಹವಿನ್ಯಾಸ ದೇಹದ ಪ್ರಮಾಣಕ್ಕೆ ತಕ್ಕಂತೆ ಕೋಡುಗಳು ಮತ್ತು ಭುಜಗಳನ್ನು ತೋರಿಸಿದ್ದಾರೆ. ಈ ಚಿತ್ರದಲ್ಲಿ ನೈಜತೆಯನ್ನು ಕಾಣಬಹುದು. ಪರಸ್ಪರ ಎದುರಾಗಿ ನಿಂತ ಎರಡು ಗೂಳಿಗಳನ್ನು ಚಿತ್ರಿಸಿದ್ದು, ಗೂಳಿಗಳನ್ನು ಪ್ರತ್ಯೇಕಿಸಲು ಒಂದೊಂದು ಗೂಳಿಗೆ ಒಂದೊಂದು ರೀತಿಯ ವರ್ಣವಿನ್ಯಾಸ ಮಾಡಲಾಗಿದೆ. ಚಪ್ಪಟೆ ವರ್ಣಲೇಪನ ಮತ್ತೊಂದು ಬಾಹ್ಯ ರೇಖೆಯಿಂದ ಚಿತ್ರಿಸಿರುವುದು ವಿಶೇಷವಾಗಿದೆ. ಜಿಲ್ಲೆಯ ವಿವಿಧ ಸ್ಥಳಗಳಲ್ಲಿ, ವಿವಿಧ ಮಾಧ್ಯಮಗಳಲ್ಲಿ ಗೂಳಿಯ ಚಿತ್ರಗಳನ್ನು ವಿಭಿನ್ನ ಶೈಲಿಯಲ್ಲಿ, ನೈಜತರಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಕುದುರೆಯ ಚಿತ್ರ : ಪ್ರಾಗೈತಿಹಾಸಿಕ ಮಾನವರು ನಾಗರಿಕತೆಯನ್ನು ತಿಳಿದ ಸಂದರ್ಭದಲ್ಲಿ ಕುದುರೆಯನ್ನು ಬಳಕೆ ಮಾಡಿರುವುದು ತೀರಾ ಕಡಿಮೆ. ಕಾಲಕ್ರಮೇಣ ಕಳೆದಂತೆ ಯಾವ ಯಾವ ರೀತಿಯಲ್ಲಿ ಕುದುರೆಯನ್ನು ಬಳಕೆ ಮಾಡಿರಬಹುದು ಎಂದು ತಿಳಿಯಬಹುದು. ಸಂತೆಗುಡ್ಡದಲ್ಲಿ ರಚನೆಗೊಂಡ ಕುದುರೆಯ ಚಿತ್ರಗಳು ರಾಜರ ಇತಿಹಾಸ ಕಾಲಕ್ಕೆ ಸಂಬಂಧಪಟ್ಟಿರಬಹುದು. ಅಶ್ವಕಾಳಗ, ಕುದುರೆಯ ಸವಾರರು ಇತ್ಯಾದಿ ಅಂಶಗಳನ್ನು ಕುದುರೆಯ ಚಿತ್ರಗಳೊಂದಿಗೆ ಬೆಸೆದುಕೊಂಡು ಚಿತ್ರಿಸಿದ್ದಾರೆ. ಆದಿಮಾನವರಿಗೆ ಕುದುರೆಯ ಮೇಲೆ ಕುಳಿತರೆ ಅಥವಾ ಪ್ರಯಾಣಿಸಿದರೆ ಗಾಂಭೀರ್ಯತೆ ಬರುವುದೆಂಬ ತಿಳುವಳಿಕೆ ಬಂದಿರಬಹುದು. ಆ ಉದ್ದೇಶಕ್ಕಾಗಿ ಕೆಲವು ಐತಿಹಾಸಿಕ ಘಟನಾವಳಿಗಳನ್ನು ಚಿತ್ರಿಸಿದ್ದಾರೆ. ಈ ಬಗೆಯ ಕುದುರೆಯ ಚಿತ್ರಗಳು ಚಿತ್ರದುರ್ಗದ ಬೇರೆ ನೆಲೆಗಳಲ್ಲಿ ಕಾಣಿಸಿಗುವುದಿಲ್ಲ.

ಮಾನವಾಕೃತಿಗಳು : ಆದಿಮಾನವರ ಚಿತ್ರಗಳ ಪ್ರಥಮ ಸೃಷ್ಟಿಯೇ ಮಾನವಾಕೃತಿಗಳು ಎಂದರೆ ತಪ್ಪಾಗಲಾರದು. ತಾನು ಬೇಟೆಯಾಡು ಪ್ರಾಣಿಗಳ ಮೇಲೆ ಬಾಣ ಪ್ರಯೋಗ ಮಾಡುವ ರೀತಿಯಲ್ಲಿ ಚಿತ್ರಗಳನ್ನು ಚಿತ್ರಿಸಿದ್ದಾನೆ. ಬಹುತೇಕ ಕರ್ನಾಟಕದ ಅನೇಕ ನೆಲೆಗಳಲ್ಲಿ ಈ ಬಗೆಯ ಚಿತ್ರಗಳು ಕಂಡುಬರುತ್ತವೆ. ಬ್ರಹ್ಮಗಿರಿಯ ಬೆಟ್ಟದಲ್ಲಿ ಆದಿಮಾನವರು ಬಿಳಿವರ್ಣದಿಂದ ಕಡ್ಡರೂಪದ ಚಿತ್ರಗಳನ್ನು ಕೇವಲ ಎರಡೇ ರೇಖೆಗಳಲ್ಲಿ ಮಾನವನ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ. ಹೊಸದುರ್ಗ ತಾಲೂಕಿನ ನೆಲೆಯಲ್ಲಿ ತೀರಾ ಹಳೆಯದೆಂದು ಪರಿಗಣಿಸುವ ಬಳಿವರ್ಣದ ಮಾನವನ' ಚಿತ್ರವಿದ್ದು, ಈ ಚಿತ್ರವು ಮಂಗನ

[illegible]

ರೂಪದಲ್ಲಿ ಚಿತ್ರಿಸಿದ್ದು, ಬಹಳ ವಿಶೇಷವಾಗಿದೆ. ಅಂಗರಚನಾ ತಂತ್ರಗಾರಿಕೆಗೆ ಇಲ್ಲಿ ಯಾವುದೇ ಮಾನ್ಯತೆಗಳಿಲ್ಲ. ಮಾನವಾಕೃತಿಗಳನ್ನು ಕೇವಲ ಚಿನ್ಹೆಗಳಂತೆ ಚಿತ್ರಿಸಿರುವುದು ಕಂಡುಬರುತ್ತದೆ.

ಸಾಮಾನ್ಯವಾಗಿ ಮಾನವನ ಎಲ್ಲ ಚಿತ್ರಗಳು ಆಯುಧ ಹಿಡಿದು ಯುದ್ಧ ಮಾಡುತ್ತಿರುವುದು, ಪರಸ್ಪರ ಹೋರಾಟ ನಡೆಸುತ್ತಿರುವುದು, ಪ್ರಾಣಿಗಳ ಮೇಲೆ ಕುಳಿತು ಸವಾರಿ ಮಾಡುತ್ತಿರುವುದು, ವೇಷಭೂಷನವನ್ನು ತೊಟ್ಟ ಮಾನವಾಕೃತಿಗಳನ್ನು ಹೆಚ್ಚಾಗಿ ಕಾಣುತ್ತೇವೆ. ಆದರೆ ಹಿರಿಯೂರು ತಾಲೂಕಿನ ಉಡುವಳ್ಳಿ ಪರಿಸರದ ರೇಖಾಚಿತ್ರಗಳು ವಿಭಿನ್ನವಾಗಿವೆ. ಆಸುಬಂಡೆಯ ಮೇಲೆ ಕೆತ್ತಿದ ವಿವಿಧ ಗಾತ್ರದ ಮಾನವಾಕೃತಿಗಳು ಆಯುಧಗಳನ್ನು ಸೊಂಟಕ್ಕೆ, ಕೈಗಳಲ್ಲಿ ಅಲಂಕರಿಸಿಕೊಂಡು ಯುದ್ಧದಲ್ಲಿ ನಿರಂತರಾಗಿರುವಂತೆ ಚಿತ್ರಿಸಿದ್ದಾರೆ. ಅತ್ಯಂತ ಚಿಕ್ಕ ೪ ಅಂಗುಲ ದಿಂದ ೧೨ ಅಂಗುಲದ ವರೆಗೆ ಚಿತ್ರಗಳು ರಚನೆಯಾಗಿದ್ದು ಕಂಡುಬರುತ್ತದೆ. ಇಲ್ಲಿ ರಚನೆಗೊಂಡ ಚಿತ್ರಗಳು ಅಂಗರಚನೆಯ ನೈಪುಣ್ಯತೆ ಹೊಂದಿಲ್ಲವಾದರೂ ಉದ್ದೇಶಗಳನ್ನು ಸ್ಪಷ್ಟವಾಗಿ ಕಟ್ಟಕೊಡುವಂತೆ ಚಿತ್ರಿಸಿದ್ದಾರೆ. ಇತರೆ ನೆಲೆಗಳಲ್ಲಿ ಸಾಂಕೇತಿಕವಾಗಿ ವರ್ಣ ಮತ್ತು ವರ್ಣ ರಹಿತ ಚಿತ್ರಗಳಲ್ಲಿ ರಚನೆಗೊಂಡಿವೆ.

ಹುಲಿಯ ಗಿರು ಚಿತ್ರ : ಚಂದ್ರವಳ್ಳಿಯ ಪರಿಸರದಲ್ಲಿ ಬೃಹತ್ ಗಾತ್ರದ ಹುಲಿಯ ಚಿತ್ರವು ಕಲ್ಲುಬಂಡೆಯ ಮೇಲೆ ಸುಮಾರು ೮ ಅಡಿ ಉದ್ದನೆಯ ದೇಹ ವಿನ್ಯಾಸವನ್ನು ಹೊಂದಿದ್ದು, ಕಲಾಉಗಳನ್ನು ಮುಂಚಾಚಿ ಬಾಲವನ್ನು ಮೇಲಕ್ಕೆತ್ತಿರುವಂತೆ ಯಾವುದೋ ಬೇಟೆಗಾಗಿ ಹೊಂಚುಹಾಕಿ ನಿಂತಿರುವಂತೆ ರಚಿಸಿದ್ದಾರೆ. ದೇಹದ ಒಳಭಾಗದಲ್ಲಿ ಪಟ್ಟೆಗಳನ್ನು ತೋರಿಸಲು ಜಾಮಿತಿಯಂತಹ ರೇಖೆಗಳನ್ನು ಬಳಸಿಕೊಂಡು ಚಿತ್ರಿಸಿದ್ದಾರೆ. ಈ ಬಗೆಯ ಹುಲಿಯ ಚಿತ್ರ ವರ್ಣದಲ್ಲಾಗಲಿ, ರೇಖಾಚಿತ್ರದಲ್ಲಾಗಲಿ ಜಿಲ್ಲೆಯ ಇನ್ನಾವುದೇ ನೆಲೆಗಳಲ್ಲಿ ಕಂಡುಬಂದಿಲ್ಲ. ಇಲ್ಲಿ ರಚಿಸಲಾದ ಹುಲಿಯ ಚಿತ್ರವು ಅಂದಿನ ಆದಿಮಾನವರ ನೆಲೆಯ ಲಾಂಚನವಾಗಿದೆ. ಎಂದು ಊಹಿಸಲಾಗಿದೆ. ಇದೆ ಹೋಲಿಕೆಯಲ್ಲಿ ಬಾದಾಮಿ ಪ್ರದೇಶದಲ್ಲಿ ಹುಲಿಯ ಕೆಂಪುವರ್ಣದ ಚಿತ್ರವನ್ನು ಕುಟಕನಕೇರೆ ಭಾಗದಲ್ಲಿ ಕಾಣಬಹುದು. ಚಿತ್ರದ ವಿಶೇಷತೆ ಎಂದರೆ ಇದು ಗಾತ್ರದಲ್ಲಿ ಚಿಕ್ಕದಾಗಿದ್ದು, ಬಾಲವನ್ನು ಕತ್ತರಿಸಿದಂತಿದೆ. ದೇಹದ ಪಟ್ಟೆಗಳನ್ನು ತ್ರಿಭೂಜಾಕಾರಗಳಂತೆ ಚಿತ್ರಿಸಿದ್ದಾರೆ. ಈ ಹುಲಿಯು ಆ ಪ್ರದೇಶದ ವಿಶಿಷ್ಟ ಸಂಕುಲಕ್ಕೆ ಸೇರಿರಬಹುದೆಂದು ತರ್ಕಿಸಬಹುದಾಗಿದೆ.

ಕಾಡುಕೋನದ ಚಿತ್ರ : ಚಿತ್ರದುರ್ಗ ಕೋಟೆಯ ಎಡಭಾಗದ ಚನ್ನಕ್ಕಿ ಹೊಂಡದಲ್ಲಿರುವ ಕಾಡುಕೋಣದ ಕೊರೆದ ರೇಖಾಚಿತ್ರವಿದೆ. ಸುಮಾರು ನಾಲ್ಕು ಅಡಿ ಉದ್ದವಿದ್ದು, ಹಸಿರುಂಡು ಸೊಂಪಾಗಿಬೆಳೆದ ದೃಢಕಾಯ ಕೋನವಾಗಿದೆ. ಅಂಗರಚನೆಯಲ್ಲಿ ನೈಪುನ್ಯತೆ ಇದೆ. ಜನಾಂಗ, ಬಾಲ ಸಾಮಾನ್ಯವಾಗಿದ್ದು, ವಿಶೇಷವಾಗಿ ಮೂರು ಕೋಡುಗಳನ್ನು ರಚಿಸಲಾಗಿದೆ. ಪ್ರಸ್ತುತ ನಾವು ಕಂಡಂತೆ ವಿಚಿತ್ರಾಕಾರದ ಪ್ರಾಣಿಗಳು ಜನಿಸುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.

ಆ ಬಗೆಯ ಕಾಡುಕೋನ ಎಂದು ಊಹಿಸಬಹುದು.

ಇದೆ ರೀತಿಯ ಮತ್ತೊಂದು ಕಾಡುಕೋನದ ಚಿತ್ರವು ತಿಮ್ಮಣ್ಣನಾಯಕನ ಕೆರೆಯ ಬಯಲಿನಲ್ಲಿದೆ. ಚಿತ್ರದಲ್ಲಿ ದೇಹ ರಚನೆ ಕಾಡುಕೋನವೆಂದು ಊಹಿಸಬಹುದು. ಮುಂಗಾಲನ್ನು ಬಾಗಿಸಿ ಓಡುವ ಅಥವಾ ಜಿಗಿಯುವ ರೀತಿಯಲ್ಲಿ ರಚಿಸಲಾಗಿದೆ. ಇದು ಅತ್ಯಂತ ಪುರಾತನವಾದುದ್ದರಿಂದ ಅಂಗರಚನಾ ವಿನ್ಯಾಸದಲ್ಲಿ ನೈಜತೆ ಕಂಡುಬರುವುದಿಲ್ಲ. ಜಿಲ್ಲೆಯ ಕೆಲವು ನೆಲೆಗಳಲ್ಲಿ ವರ್ಣಚಿತ್ರಗಳಿಂದ ರಚನೆ ಮಾಡಿದ ಈ ಬಗೆಯ ಬೃಹತ್ ಗಾತ್ರದ ಕಾಡುಕೋನ ಬೆಳಕಿಗೆ ಬಂದಿಲ್ಲ. ಆದರೆ ಸಂತೆಗುಡ್ಡದ ಗವಿವರ್ಣ ಚಿತ್ರಗಳಲ್ಲಿ ಚಿಕ್ಕ ಗಾತ್ರದಲ್ಲಿ ಕಾಡುಕೋನವನ್ನು ವರ್ಣಚಿತ್ರದಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ.

ಮಂಡಲ ಚಿತ್ರಗಳು : ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಅತ್ಯಂತ ಕುತೂಹಲಕರವಾದ ಚಿತ್ರಗಳೆಂದರೆ ಮಂಡಲ ಚಿತ್ರಗಳು. ಪ್ರಾಚೀನ ಮಾನವರಲ್ಲಿ ಮೂಢನಂಬಿಕೆ ಎಂಬುವುದು ಎಷ್ಟರಮಟ್ಟಿಗೆ ಬೇರೂರಿತ್ತು ಎಂಬುದಕ್ಕೆ ಅವರು ಬರೆದ ಚಿತ್ರಗಳೇ ಸಾಕ್ಷಿಯಾಗಿವೆ. ನಿಖರವಾಗಿ ಯಾವುದನ್ನು ಸ್ಪಷ್ಟವಾಗಿ ಹೇಳಲಾಗದ ಯಾವುದೋ ಉದ್ದೇಶದಿಂದ ರಚನೆಯಾಗಿದೆ ಎಂಬುದಕ್ಕೆ ಅವರ ಹಿಂದಿನ ಆಚರಣೆಗಳು ಬಹುಮುಖ್ಯವಾಗಿವೆ. ಪ್ರಸ್ತುತ ಜಗತ್ತಿನಲ್ಲಿ ನಾವು ಕಂಡಂತೆ ಮಕ್ಕಳಿಗೆ ದೇವಿ ಹಾಕಿಸುವುದು, ಯಂತ್ರ ಕಟ್ಟಿಸುವುದು ನಿತ್ಯ ಸಂಗತಿಯೆ ಸರಿ. ಇಂತಹ ಸಂಪ್ರದಾಯಗಳು ಇತಿಹಾಸ ಪೂರ್ವಜರುದ್ದು ಮತ್ತು ಅವರು ನಮಗೆ ಹಾಕಿಕೊಟ್ಟ ಬುನಾದಿಯಾಗಿದೆ.

ಮಾಟ ಮಂತ್ರಗಳನ್ನು ಎರಡು ರೀತಿಯಲ್ಲಿ ಬಳಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಮೊದಲನೆಯದಾಗಿ ಒಳ್ಳೆಯ ಕಾರಣಕ್ಕಾಗಿ ಆದರೆ ಎರಡನೆಯದಾಗಿ ಕೆಟ್ಟ ಕಾರಣಕ್ಕಾಗಿ ಎಂದು ತಿಳಿಯಬಹುದು. ಒಳ್ಳೆಯ ಕಾರಣವೆಂದರೆ ದೈವಿಕ ಆಚರಣೆಗೆ ಸಂಬಂಧಪಟ್ಟಂತೆ, ಮಕ್ಕಳಿಗೆ ರೋಗ ರುಜನಿಗಳು ತಗಲುವ ಸಂದರ್ಭದಲ್ಲಿ ದೇವರನ್ನು ಪೂಜಿಸಿ ಒಂದು ರೀತಿಯ ಮಂಡಲ ಚಿತ್ರಗಳನ್ನು ಬರೆದು ತಾಯತ ರೂಪದಲ್ಲಿ ಕಟ್ಟುವುದು. ಹಾಗೂ ಸಮೃದ್ಧಿ ಆಹಾರ ಸಿಗಲೆಂದು ಸೂರ್ಯ, ಚಂದ್ರರ ಚಿತ್ರಗಳನ್ನು ಬರೆದು ಪೂಜಿಸಿರುವುದನ್ನು ಚಿತ್ರಗಳ ರೂಪದಲ್ಲಿ ಕಾಣುತ್ತೇವೆ. ಎರಡನೆಯದಾಗಿ ಯಾವ ಮನುಷ್ಯನನ್ನು, ಯಾವ ಪ್ರಾಣಿಯನ್ನು ಅಥವಾ ಇನ್ಯಾವುದೇ ಶತ್ರು ಕಾರಣಕ್ಕಾಗಿ ರೂಪಿತಗೊಂಡ ಕಟ್ಟಳೆಗಳು ಸ್ತ್ರೀ ವಶಿಕರಿಸುವುದು, ಗೊಂಬೆಯನ್ನು ಸೃಷ್ಟಿಸಿ ಮುಳ್ಳುಗಳಿಂದ ಚುಚ್ಚುವುದು, ದಿಕ್ಕುಗಳನ್ನು ಕಟ್ಟುವುದು, ದಿಗ್ಬಂದನ ಹಾಕುವುದು ಇತ್ಯಾದಿ ಅಂಶಗಳು ತನ್ನ ವೈಯಕ್ತಿಕ ಅಭಿಲಾಸೆಗಳನ್ನು ಇಡೇರಿಸಿಕೊಳ್ಳುವ ನಿಟ್ಟಿನಲ್ಲಿ ಇಂತಹ ಮಾಟ ಮಂತ್ರಗಳು ನಿಗೂಢ ಸ್ಥಳಗಳಲ್ಲಿ ರಚನೆಗೊಂಡಿರುವುದನ್ನು ಕಾಣುತ್ತೇವೆ.

ಚಿತ್ರದುರ್ಗ ಪ್ರದೇಶದ ಸಂತೆಗುಡ್ಡದ ಪ್ರದೇಶದಲ್ಲಿ ಬಿಳಿವರ್ಣ ಮತ್ತು ಕೆಂಪು

ವರ್ಣದಿಂದ ಅನೇಕ ಜಾಮಿತಿಯ ವಿನ್ಯಾಸದ ಮಂಡಲ ಚಿತ್ರಗಳು ರಚನೆಗೊಂಡಿವೆ. ಮಾನವರನ್ನು ಬಲಿಕೊಡುವ ಆಚರಣೆಗಳು ಆದಿಮಾನವರ ಚಿತ್ರಗಳಲ್ಲಿ ಕಂಡುಬಂದಿವೆ. ಅದೇ ರೀತಿ ಹಿರಿಯೂರಿನ ಮುಳ್ಳಪ್ಪನ ಗುಡ್ಡದಲ್ಲಿ ಕಂಡುಬಂದ ಮಂಡಲ ರೇಖಾಚಿತ್ರ ಅತ್ಯಂತ ಕುತೂಹಲಕಾರಿಯಾಗಿದ್ದು, ಈ ಬಗೆಯ ಮಂಡಲಚಿತ್ರ ಬೇರಾವುದೇ ನೆಲೆಯಲ್ಲಿ ಕಂಡುಬಂದಿಲ್ಲ. ಅರ್ಧವೃತ್ತಾರದ ವೃತ್ತಗಳು, ವಕ್ರರೇಖೆಯ ಕಿರಣಗಳು, ಬಗೆ ಬಗೆಯ ವೃತ್ತದೊಳಗೆ ವೃತ್ತಗಳು ಹಾಗೂ ನಿಗೂಢ ಸೂಚನೆಗಳನ್ನು ಹೋಲುವಂತಹ ಚಿತ್ರಗಳು ಕಂಡುಬಂದಿವೆ.

ಚಂದ್ರವಳ್ಳಿ ಪರಿಸರದ ಹುಲಿಯ ಚಿತ್ರದ ಹಿಂಭಾಗದಲ್ಲಿ ಮಂಡಲದಂತಹ ಕುಟ್ಟಿಕೊರೆದ ರೇಖಾಚಿತ್ರವಿದೆ. ಚೌಕಾಕಾರದ ಮನೆಗಳಲ್ಲಿ ಚಿಕ್ಕ ಚಿಕ್ಕ ಜಾಮಿತಿಯಾಕಾರದ ರೇಖೆಗಳನ್ನು ಎಳೆದಿದ್ದಾರೆ. ಒಟ್ಟಾರೆ ನಿಗೂಢ ಸಂದೇಶವನ್ನು ನೀಡುತ್ತದೆ. ಈ ಬಗೆಯ ಚಿತ್ರ ಸಂತೆಗುಡ್ಡದಲ್ಲಿ ಕೆಂಪುವರ್ಣದಲ್ಲಿ ಚಿತ್ರಿಸಿರುವುದು ಕಂಡುಬಂದಿದೆ.

ಪ್ರಾಣಿ ಸಂಕುಲಗಳ ಚಿತ್ರ : ಹಂಪಿ, ಕೊಪ್ಪಳ, ಬಾದಾಮಿ ಪರಿಸರಗಳಲ್ಲಿ ಇರುವಂತಹ ಪ್ರಾಣಿ, ಪಕ್ಷಿಗಳ ಚಿತ್ರಕ್ಕಿಂತ ವಿಭಿನ್ನವಾಗಿ ಚಿತ್ರದುರ್ಗ ಪ್ರದೇಶದಲ್ಲಿ ರಚನೆಗೊಂಡಿವೆ. ಸ್ವಾಭಾವಿಕವಾಗಿ ಹೇಳಬಹುದಾದರೆ ಈ ಭಾಗದಲ್ಲಿ ವಾಸಿಸಿದ ಆದಿಮಾನವರು ಚಿತ್ರದುರ್ಗ ಪ್ರದೇಶದ ನೆಲೆಗಳಿಗೆ ಒಲಸೆಬಂದು ಅಥವಾ ಆಹಾರದ ಕೊರತೆಯಿಂದಲೂ ಬಂದಿರಬಹುದು. ಅಲ್ಲಿ ರಚಿಸಿದ ಚಿತ್ರಗಳು ಹದಗೊಂಡು ಈ ಪ್ರದೇಶದಲ್ಲಿ ರೇಖಾಪಕ್ವತೆಯನ್ನು ಕಂಡುಕೊಂಡಿರಬಹುದು. ಏಕೆಂದರೆ ಜಿಂಕೆ, ನಾಯಿ, ಹಂದಿ, ಕುದುರೆ, ಕೋಳಿ ಹಾಗೂ ಮಂಗಗಳಂತಹ ಚಿತ್ರಗಳ ಅಂಗರಚನೆಯಲ್ಲಿ ನೈಜತೆಯನ್ನು ಬಿಂಬಿಸುವಂತೆ ರಚಿಸಿದ್ದಾರೆ.

ತನಿಗೆಗಲ್ಲು ಪರಿಸರದಲ್ಲಿ ರಚನೆಗೊಂಡ ಬಿಳಿವರ್ಣದ ಚಿತ್ರಗಳು ವಿಭಿನ್ನವಾಗಿವೆ. ವಿಶೇಷವಾಗಿ ಮಂಗನ ಚಿತ್ರ ರಚನೆಯಾಗಿದೆ. ಚಪ್ಪಟೆ ವರ್ಣಲೇಪನ ಕೈಗಳನ್ನು ಮೇಲಕ್ಕೆತ್ತಿ ನಿಂತು ನೋಡುವಂತೆ ಚಿತ್ರಿಸಿದ್ದಾರೆ. ಬಹುಶಃ ಆ ಪ್ರದೇಶದ ಆದಿಮಾನವರು ಆ ರೂಪದಲ್ಲಿ ಇದ್ದರೆಂದು ತರ್ಕಿಸಬಹುದು.

ಒಂಟೆಯ ಚಿತ್ರ : ಬಾಗಶಃ ಉತ್ತರ ಭಾರತದ ಪ್ರದೇಶದ ಮರುಗಾಡಿನಲ್ಲಿ ವಾಶಿಸುವಂತಹ ಪ್ರಾಣಿ ಒಂಟೆ. ಆದಿಮಾನವರು ಈ ಬಗೆಯ ಚಿತ್ರಗಳನ್ನು ಸಂತೆಗುಡ್ಡದಲ್ಲಿ ರಚಿಸಿದ್ದಾರೆ. ಈ ಮೂಲದ ಪ್ರಾಣಿ ಈ ಪ್ರದೇಶದಲ್ಲಿ ಕಾಣಸಿಗಲಾರದು. ಆದರೆ ಚಿತ್ರರಚನೆಯ ಹಿನ್ನೆಲೆ ಎಂಬುದು ಪ್ರಶ್ನಾರ್ಥ. ಸಾಮಾನ್ಯವಾಗಿ ಇತಿಹಾಸ ಆರಂಭದ ಅಂಚಿನಲ್ಲಿ ರಚನೆಯಾಗಿರಬಹುದೆಂದು ಊಹಿಸಬಹುದು. ನಾಯಕರ ಆಳ್ವಿಕೆಯಲ್ಲಿ ಒಂಟಯ ಮೇಲೆ ಯಾವುದೋ ರಾಜ್ಯದ ದೊರೆ ಆಗಮಿಸಿರಬಹುದು. ಇಂತಹ ಅಂಶಗಳನ್ನು ಮನಗಂಡು ಚಿತ್ರಿಸಿರಬಹುದು. ಅಥವಾ ಆದಿಮಾನವರೇ ಒಂಟೆಯ ಮೇಲೆ ಒಲಸೆ ಬಂದಿರಬಹುದೇ.

ಕಾರಣ ಏನೆ ಇರಲಿ ಈ ಬಗೆಯ ಚಿತ್ರರಚನೆ ಕುತೂಹಲಕಾರಿಯಾಗಿದೆ. ಸಂತೆಗುಡ್ಡವನ್ನು ಹೊರತುಪಡಿಸಿ ಜಿಲ್ಲೆಯ ಬೇರಾವುದೆ ನೆಲೆಗಳಲ್ಲಿ ಕಂಡುಬಂದಿಲ್ಲ.

ರಥಗಳ ವಿನ್ಯಾಸ : ಚಿತ್ರದುರ್ಗ ಪ್ರದೇಶದಲ್ಲಿ ಕಂಡ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಪ್ರಶ್ನಾರ್ಥ ವರ್ಣಚಿತ್ರಗಳೆಂದರೆ ಮೊಳಕಾಲ್ಮೂರು ತಾಲೂಕಿನ ಸಂತೆಗುಡ್ಡದಲ್ಲಿರುವ ರಥಗಳ ವಿನ್ಯಾಸ ದೇಗುಲಗಳ ಚಿತ್ರಗಳು. ಆದಿಮಾನವರಲ್ಲಿ ಉತ್ಸವ, ಹಾಡು, ಕುಣಿತ ಇತ್ಯಾದಿಗಳು ಇದ್ದದ್ದು ದೈನಂದಿನ ಚಟುವಟಿಕೆಯಾಗಿತ್ತು. ಆದರೆ ರಥಗಳ ವಿನ್ಯಾಸದ ಪರಿಕಲ್ಪನೆ ಹೇಗೆ ಎಂಬುದು ಅಸ್ಪಷ್ಟ. ಚಿತ್ರದಲ್ಲಿ ರಚನೆಗೊಂಡಂತೆ ಜಿಲ್ಲೆಯ ಚಳ್ಳಕೆರೆ ತಾಲೂಕು ನಾಯಕನಹಟ್ಟಿ ಎಂಬ ಸ್ಥಳದಲ್ಲಿ ತಿಪ್ಪೇರುದ್ರಸ್ವಾಮಿ ದೇವಾಲಯದ ವರ್ಷದ ಆಚರಣೆಯಲ್ಲಿ ತೇರುಗಳಗಳನ್ನು ಶೃಂಗರಿಸುವುದು ನಂಬಿಕೆ. ಈ ಬಗೆಯ ಮಾಹಿತಿಯನ್ನು ಪಡೆದು ಆದಿಮಾನವರು ಚಿತ್ರಗಳನ್ನು ಚಿತ್ರಿಸಿರಬಹುದೇ. ಅಥವಾ ಇವರೆ ಈ ಬಗೆಯ ಚಿತ್ರಗಳನ್ನು ರಚಿಸಿ ಅವರಿಗೆ ಮಾದರಿಯಾಗಿರಬಹುದಾದ ಸಂಶಯವು ಇದೆ. ಚಿತ್ರದಲ್ಲಿ ಅಲಂಕಾರಕ್ಕಾಗಿ ಪಟಗಳನ್ನು ಬಿಡಿ ಬಿಡಿಯಾಗಿ, ಸಮತೋಲನವಾಗಿ ಅಲಂಕರಿಸಿದಂತೆ ಚಿತ್ರಿಸಿದ್ದಾರೆ. ಪಕ್ಕದಲ್ಲಿ ನಾಗಾರಾಧನೆಯ ಸರ್ಪವಿನ್ಯಾಸ ಮತ್ತು ಶುಭ ಸಂಕೇತವಾಗಿ ರಂಗೋಲಿ ಆಕೃತಿಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಮತ್ತೊಂದು ಚಿತ್ರದಲ್ಲಿ ರಾಜನೊಬ್ಬ ಕುದುರೆಯ ಮೇಲೆ ದೇವರ ದರ್ಶನಕ್ಕೆ ಬಂದಿದ್ದಾನೆ. ದೇವಾಲಯ ಇಂತಹದ್ದೆ ಎಂಬ ಪರಿಕಲ್ಪನೆಗಾಗಿ ಪಕ್ಕದಲ್ಲಿ ಆಂಜನೆಯನ ಚಿತ್ರವನ್ನು ರಚಿಸಿದ್ದು, ದೇವಾಲಯದ ಗೋಪುರವನ್ನು ಜಾಮಿತಿ ಆಕೃತಿಗಳನ್ನು ಬಳಸಿ ಚಿಕ್ಕ ಚಿಕ್ಕ ಚೌಕಾಕಾರದ ನಕ್ಷೆಗಳನ್ನು ಬಳಸಿಕೊಂಡು ಚಿತ್ರಿಸಿದ್ದಾರೆ. ಇಂತಹ ಪರಿಕಲ್ಪನೆಗಳು ಆದಿಮಾನವರಿಗೆ ಎಷ್ಟರಮಟ್ಟಿ ತಿಳಿದಿತ್ತು ಎಂಬುದು ಪ್ರಶ್ನಾರ್ಥದ ಸಂಗತಿಯಾಗಿದೆ. ದುರ್ಗದ ಯಾವುದೇ ಪ್ರದೇಶದಲ್ಲಿ ರಥಶಿಲ್ಪಗಳ ವಿನ್ಯಾಸಗಳ ಕುರಿತಾದ ಬಯಲುಬಂಡೆ ಅಥವಾ ವರ್ಣರೇಖಾಚಿತ್ರಗಳು ಕಂಡುಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಬಾಣದ ಚಿತ್ರ : ಹೊಸದುರ್ಗ ಪ್ರದೇಶದ ತನಿಗೆಗಲ್ಲು ಪ್ರದೇಶದಲ್ಲಿ ಸಿಕ್ಕ ಹಾಸುಬಂಡೆಯ ಮೇಲೆ ಕೊರೆದಚಿತ್ರವಾಗಿದ್ದು, ಸುಮಾರು ೪ಅಡಿ ಅಗಲದ ಬಾಣ ಮತ್ತು ಬಿಲ್ಲು ಹೂಡಿರುವಂತೆ ಚಿತ್ರಿಸಿದ್ದಾರೆ. ಸಂಪೂರ್ಣವಾದ ನೈಜ ವಿನ್ಯಾಸ ಹೊಂದಿದ್ದು, ಬಾಣದ ದಿಕ್ಕನ್ನು ಗವಿಸಿದ್ದೇಶ್ವರ ಬೆಟ್ಟಕ್ಕೆ ಮಾರ್ಗಸೂಚಿಯಂತೆ ಚಿತ್ರಿಸಿದ್ದಾರೆ. ಇತರನಾದ ಬಾಣದ ಚಿತ್ರಗಳು ಇತರೆ ನೆಲೆಗಳಲ್ಲಿ ಲಭ್ಯವಾಗಿಲ್ಲ. ಕೆಲವು ಸಾಂದರ್ಭಿಕ ಚಿತ್ರಗಳಲ್ಲಿ ಬಾಣ ಬಿಲ್ಲುಗಳನ್ನು ಅಥವಾ ಇನ್ನಾವುದೇ ಆಯುಧಗಳನ್ನು ಹಿಡಿದು ಯುದ್ಧ ನಿರತರಾದ ಚಿತ್ರಗಳು ಕಂಡುಬಂದಿವೆ.

ನೃತ್ಯದ ಚಿತ್ರಗಳು : ಚಂದ್ರವಳ್ಳಿ ಮತ್ತು ನುಂಕಿಮಲೈ ಪ್ರದೇಶದಲ್ಲಿ ಕೈ ಕೈಹಿಡಿದು

[illegible]







ಅದ್ಯಾಯ : ಐದು

ಪ್ರಾಗೈತಿಹಾಸಿಕ ರಚನಾಕ್ರಮ, ತಂತ್ರಗಾರಿಕೆ ಮತ್ತು ಶೈಲಿ

ಇತಿಹಾಸ ಪೂರ್ವಜರು ಶತಮಾನಗಳ ಹಿಂದೆಯೇ ಪ್ರಕೃತಿಯೊಂದಿಗೆ ತಮ್ಮ ಇಡೀ ಜೀವನವನ್ನು ಬೆಸೆದುಕೊಂಡು ಕಾಡಿನ ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ, ನದಿತೀರಗಳು, ಗಿಡಮರಗಳು, ಹೂಬಳ್ಳಿ, ದಟ್ಟ ಅರಣ್ಯದೊಂದಿಗೆ ತಮ್ಮನ್ನು ಆಶ್ರಯಿಸಿದ ಕುಟುಂಬ ಗುಂಪುಗಳೂಂದಿಗೆ ಜೀವನ ನಡೆಸಿದ್ದಾರೆ. ನಿತ್ಯದ ಬದುಕಿನ ಹೋರಾಟದಲ್ಲಿ ಪ್ರಕೃತಿಯ ಹತ್ತು ಹಲವಾರು ವೈಪರಿತ್ಯಗಳನ್ನು ಎದುರಿಸಿ ಬೇಟೆಯಾಡಿ ಆಹಾರ ಪಡೆದು ತರುವ ಹರಸಾಹಸದ ಕೆಲಸವಾದರು ತನ್ನ ಮಕ್ಕಳು, ಹೆಂಡತಿಯರ ಹಸಿವನ್ನು ನೀಗಿಸುವ ಪ್ರಯತ್ನ ಅವನದಾಗತ್ತು. ಅದಾಗ್ಯೂ ದಿನವಿಡಿ ಶ್ರಮಿಸಿದ ದೇಹಕ್ಕೆ ಅಲ್ಪವಾದರು ವಿಶ್ರಾಂತಿ ಬೇಕಾದಿತು. ಕೆಲವು ಸಮಯವನ್ನು ತನ್ನ ಮಕ್ಕಳು ಕುಟುಂಬದ ಸದಸ್ಯರೊಂದಿಗೆ ಪ್ರಕೃತಿಯ ಸೌಂದರ್ಯ ಸವಿಯತೊಡಗಿದ. ಮಾನವನ ಎಲ್ಲ ಬೇಡಿಕೆಗಳನ್ನು ಈ ಪ್ರಕೃತಿಯಿಂದಲೇ ಪೂರೈಸಿಕೊಳ್ಳುತ್ತಿದ್ದರು. ಜೊತೆಯಲ್ಲಿ ಬ್ರಾಂತವಾಗಿ ಹಗಲು ರಾತ್ರಿಗಳೆಂಬ ಸೂರ್ಯ ಚಂದ್ರರನ್ನು ದೈವಿಕ ಮನೋಭಾವದಲ್ಲಿ ಕಂಡ ಎಲ್ಲ ಅನುಭವಗಳು ಇತರರಿಗೆ ತೋರ್ಪಡಿಸಲು ಚಿತ್ರಕಲೆಯೇ ಪ್ರಮುಖ ಮಾಧ್ಯಮವಾಗಿತ್ತೆಂದರೆ ತಪ್ಪಾಗಲಾರದು. ಅಂದಿನ ಸಮಯದಲ್ಲಿ ನಾಗರಿಕತೆಯನ್ನು ಸರಿಯಾಗಿ ತಿಳಿಯದ ಅವರಲ್ಲಿ ಪ್ರಕೃತಿಕ ಮನೆಗಳನ್ನು ನಿರ್ಮಿಸುವ ಹಂಬಲವೆ ಅವರಿಗೆ ಗೊತ್ತಿರಲಿಲ್ಲ. ಗುಂಪು ಗುಂಪಾಗಿ ನಿಸರ್ಗ ನಿರ್ಮಿತ ಗವಿ, ಕಲ್ಲಾಸರೆಗಳಲ್ಲಿಯೇ ಅವರ ಜೀವನ ನೆಡೆಸುತ್ತಿದ್ದರು. ಆ ಅರಣ್ಯದಲ್ಲಿ ಅಂಥ ಚಳಿ, ಗಾಳಿ, ಮಳೆ, ಬಿಸಿಲು ಇತ್ಯಾದಿಗಳಿಂದ ರಕ್ಷಣೆ ಇರುವಂತ ಕಲ್ಲಾಸರೆಯ ಮೇಲೆ ರಚಿಸತೊಡಗಿದರು.

[illegible]

ಇತಿಹಾಸ ಪೂರ್ವಕಾಲವು ಶಿಲಾಯುಗದಕಾಲ ಅದನ್ನು ಹಳೆಯ ಶಿಲಾಯುಗ, ಆದಿ ಹಳೆಯ ಶಿಲಾಯುಗ, ಮಧ್ಯಮ ಶಿಲಾಯುಗ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ನಂತರ ಇತಿಹಾಸ ಆರಂಭಿಕ ಕಾಲ ಎಂಬಂತೆ ಶಿಲಾಯುಗದಿಂದ ಶಿಲಾಯುಗಗಳು ಕಳೆದಂತೆ ಆದಿಮಾನವರ ಬದುಕು ವಿಕಾಸವಾದಂತೆ ದೈನಂದಿನ ಎಲ್ಲ ಚಟುವಟಿಕೆಗಳಲ್ಲೂ ಬದಲಾವಣೆ ಕಂಡರು. ಬೇಟೆಯಾಡುವುದರಲ್ಲಿ ತಂತ್ರಗಾರಿಕೆ, ಆಹಾರದಲ್ಲಿ ಹಸಿ ಮಾಂಸವನ್ನು ಸುಟ್ಟು ಇಲ್ಲವೇ ಬೇಯಿಸಿ ತಿನ್ನುವುದನ್ನು ಕಲಿತರು. ಕಲ್ಲಿನ ಆಯುಧಗಳಿಂದ ಲೋಹದ ಆಯುಧಗಳನ್ನು ಕಂಡುಕೊಂಡರು. ನಂತರ ಪ್ರಾಣಿ ಮತ್ತು ಪಕ್ಷಿಗಳನ್ನು ಸಾಕುವ ಪ್ರಯತ್ನ ಮಾಡಿದರು. ಆಹಾರ ಶೇಖರಣೆಗಾಗಿ ಕೆಲವು ಮಣ್ಣಿನ ಪಾತ್ರೆಗಳ ತಯಾರಿಕೆಯ ತಂತ್ರವನ್ನು ತಿಳಿದುಕೊಂಡರು. ಕಲ್ಲಾಸರೆಯಿಂದ ನದಿಯ ಬಯಲಿನ ಪ್ರದೇಶದಲ್ಲಿ ವಾಸಿಸತೊಡಗಿದರು. ಆಶ್ರಯಕ್ಕಾಗಿ ಗುಡಿಸಲು ನಿರ್ಮಿಸಿದ ವ್ಯವಸಾಯವನ್ನು ಕಂಡುಕೊಂಡರು. ಇವುಗಳ ಜೊತೆ ಜೊತೆಯಲ್ಲೇ ನಾಯಕತ್ವದ ಗುಣಗಳನ್ನು ಅರಿತು ಗುಂಪಿನ ಒಡೆಯನಾದ. ಈ ರೀತಿಯಾಗಿ ಅನಾಗರಿಕತೆಯಿಂದ ನಾಗರಿಕತೆಯವರೆಗೆ ಹೀಗೆ ರೂಪಾಂತರಗೊಂಡರು. ಅದೇ ರೀತಿ ತಮ್ಮ ಚಿತ್ರಕಲೆಯಲ್ಲಿಯೂ ಸಹ ಆನೇಕ ತಂತ್ರಗಳನ್ನು ಬಳಸಿ ಚಿತ್ರ ರಚನೆ ಮಾಡತೊಡಗಿದರು.

ಮೊಟ್ಟಮೊದಲು ಕೇವಲ ಕಡ್ಡಿ ಚಿತ್ರಗಳಂತೆ, ಸನ್ನೆಗಳಂತೆ ಚಿತ್ರಗಳು ರಚಿಸುತ್ತಿದ್ದ ಇತಿಹಾಸ ಪೂರ್ವಜರು ಶಿಲಾಯುಗದಿಂದ ಶಿಲಾಯುಕ್ಕೆ ರೂಪಾಂತರಿಸಿದಂತೆ ಚಿತ್ರಗಳಲ್ಲಿಯೂ ಭಾವನೆಯ ಸ್ಪಷ್ಟತೆ ಮೂಡಿಸತೊಡಗಿದರು. ಹಾಗೆ ಮಾಧ್ಯಮಗಳು ಬದಲಾದವು. ಕಲ್ಲಾಸರೆಗೆ ಸೀಮಿತವಾಗದೆ ಬಯಲಿನ ಬಂಡೆಗಳ ಮೇಲೂ ಕುಟ್ಟಿ, ಕೊರೆದು ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು. ಅದೇ ರೀತಿ ತವು ರಚಿಸುವ ಚಿತ್ರಗಳು ಮತ್ತು ವರ್ಣಗಳ ಬಳಕೆ, ಆಕೃತಿಗಳ ರಚನೆಗಳಲ್ಲಿಯೂ ತಂತ್ರಗಾರಿಕೆಗಳನ್ನು ಅಳವಡಿಸಿಕೊಂಡರು. ಮೊದಮೊದಲು ಕೇವಲ ಬೆರಳುಗಳಿಂದಲೇ ಚಿತ್ರ ರಚಿಸುತ್ತಿದ್ದರು.

ನಂತರ ಅದರಲ್ಲೂ ಬದಲಾವಣೆಯನ್ನು ಕಂಡುಕೊಂಡರು. ಬೆರಳುಗಳ ಬದಲು ಗಿಡದ ಟೊಂಗೆಯ ತುದಿಯನ್ನು ಜಜ್ಜಿ ಕುಂಚಗಳನ್ನು ತಯಾರಿಸಿಕೊಳ್ಳಲು ಪ್ರಾರಂಭಿಸಿದರು. ನಂತರ ಮೃದುವಾದ ಗರಿಕೆಯಂತಹ ಬೇರುಗಳನ್ನು ಬಳಸಿದರು. ಹಾಗೆ ಪ್ರಾಣಿಗಳ ರೋಮಗಳನ್ನು ಬಳಸಿ ಕುಂಚಗಳನ್ನು ತಯಾರಿಸಿಕೊಂಡು ಚಿತ್ರಗಳನ್ನು ರಚಿಸುತ್ತಿದ್ದರು. ತಂತ್ರಗಾರಿಕೆ ಮುಂದುವರೆದಂತೆ ಹರಿತ ಮೊನೆಯುಳ್ಳ ಒಂದು ಕಲ್ಲಿನ ಚೆಕ್ಕೆ (Burill) ಯನ್ನು ಪ್ರಾಣಿಯ ಎಲುಬಿನ ದಂತದ ಮೇಲೆ ಬಲವಾಗಿ ಊರುವುದರಿಂದ ಅಥವಾ ಹಿಡಿಯಲು ಅನುಕೂಲವಾದ ಸಪೂರವಾದ ಮೊಂಡ ತುದಿಯುಳ್ಳ ಉದ್ದನೆ ಕಲ್ಲು ತುಂಡಿನಂದ

[illegible]

ಬಯಲು ಬಂಡೆಯಮೇಲೆ ಒಂದೇ ಪ್ರಕಾರವಾಗಿ ಕುಟ್ಟುವುದರಿಂದ ಕೊರೆಯುವುದರಿಂದ ಅಥವಾ ಗಾಳಿಸಿದ ಕಲಸು ಮಣ್ಣಿನಿಂದ ಬೇಕಾದ ಗಾತ್ರದಂತ ಚೂರುಗಳನ್ನು ಕೆತ್ತುವುದರಿಂದ ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಂಡ ಚಿತ್ರಗಳನ್ನು ಗೋಡೆಗಳ ಮೇಲೆ ಸೃಷ್ಟಿಸಲು ಶುರುಮಾಡಿದ. ಇತಿಹಾಸ ಪೂರ್ವಜರು ಚಿತ್ರಗಳಲ್ಲಿನ ವರ್ಣ ಬಳಕೆ ಕೇವಲ ರೇಖಾಚಿತ್ರಕ್ಕೆ ಸೀಮಿತವಾಗದೆ ಚಪ್ಪಟೆ ಬಣ್ಣ ನೆರಳಿನ ಪ್ರಕ್ಷೇಪದಂತ ಜೋಡು ರಂಬೆಗಳಿಂದ ಚಿತ್ರಿಸಿದ್ದಾರೆ. ಮುಂದುವರೆದು ಹಸ್ತಗಳಿಗೆ ಬಣ್ಣ ಹಚ್ಚಿ ಮುದ್ರೆ ತೆಗೆಯುವ ರೀತಿ ಚಿತ್ರಿಸಿದ್ದಾರೆ. ಬಾಯಿಯಲ್ಲಿ ಬಣ್ಣಗಳನ್ನು ಇಟ್ಟು ಸಿಂಪರಣೆ ಮಾಡುವ ರೀತಿ ಬೆರಳುಗಳಿಂದ ಚುಕ್ಕಿ ತೆಗೆಯುವ ರೀತಿಯಲ್ಲಿ ಆನೇಕ ಪ್ರಯೋಗಗಳನ್ನು ಮಾಡಿ ಚಿತ್ರ ರಚನೆ ಮಾಡಿದ್ದಾರೆ.

ತಾವು ರಚಿಸಿದ ಚಿತ್ರಗಳಿಗೆ ಕೆಂಪು, ಕಾವಿ, ಬಿಳಿ, ಕಪ್ಪು, ಹಳದಿ, ಹಸಿರು ಬಣ್ಣಗಳನ್ನು ಸೇರಿಸಿ ಅದಕ್ಕೆ ಪ್ರಾಣಿ ಕೊಬ್ಬು ಮತ್ತು ಮರಗಳ ಅಂಟು ದ್ರಾವಣಗಳನ್ನು ಬಳಸಿದ್ದಾರೆ. ಚಿತ್ರಗಳ ಬಾಳಿಕೆಗೆ ಮತ್ತು ಪ್ರಕೃತಿಯ ಹವಾಮಾನ ವೈಪರಿತ್ಯಗಳಿಂದ ರಕ್ಷಣೆ ಇರಬೇಕೆಂಬ ಅವರ ಅಂದಿನ ಗಟ್ಟಿಯಾದ ನಿಲುವುಗಳು ಇಂದಿಗೂ ಕಾಣಿಸುವ ಕಲ್ಲಾಸರೆಯ ಚಿತ್ರಗಳಿಗೆ ಸಾಕ್ಷಿಯಾಗಿವೆ. ಇತಿಹಾಸ ಪೂರ್ವಜರ ಚಿತ್ರರಚನಾತಂತ್ರ, ಸಾಮಗ್ರಿಗಳು ಕುತೂಹಲಕರವಾಗಿ ಕಂಡುಬಂದಿವೆ. ಗವಿವರ್ಣ ಮತ್ತು ಬಂಡೆ ಚಿತ್ರಗಳ ರಚನೆಯಲ್ಲಿ ಬಳಕೆಯಾದ ಸಾಮಗ್ರಿಗಳನ್ನು ಆಯಾ ಚಿತ್ರ ಪ್ರಕಾರಗಳ ಸ್ವರೂಪಕ್ಕೆ ಅನುಗುಣವಾಗಿ ತರ್ಕಿಸಬಹುದು.

ವರ್ಣಚಿತ್ರಗಳ ಶೈಲಿ :

ಪ್ರಪಂಚದ ಯಾವುದೇ ಇತಿಹಾಸ ಪೂರ್ವದ ಕಲ್ಲಾಸರೆ ಚಿತ್ರಗಳನ್ನು ಹೆಚ್ಚಾಗಿ ಕಾವಿ ಮಣ್ಣು (ಕೆಂಪು) ವರ್ಣಗಳನ್ನು ಬಳಸಿ ರಚಿಸಿದ್ದಾರೆ. ಅತಿ ಹಳೆಯದೆಂದರೆ ಪ್ರಾಚೀನ ಶಿಲಾಯುಗಕ್ಕೂ ನಡುವಿನ ಮಧ್ಯಶಿಲಾಯುಗ, ಅನಂತರ ಇತಿಹಾಸ ಕಾಲದ್ದು. ಬಹಶಃ ಸೆಳೆಗೊಂಬುಗಳಿಂದ ಮಾಡಿದ ತೆಳುವಾದ ಕುಂಚಗಳ ನೆರವಿನಿಂದ ಚಿತ್ರಿಸಲಾಗಿದೆ. ರೇಖಾ ವರ್ಣ ಪ್ರಧಾನ ಚಪ್ಪಟೆ ಚಿತ್ರಗಳು ಪ್ರಾಣಿಗಳ ಮತ್ತು ಮಾನವರ ಆಕಾರಗಳನ್ನು ಒಳಗೊಂಡಿವೆ. ಜಟಿಲ ವಿನ್ಯಾಸಗಳು, ಸವಾರರು, ಮೆರವಣಿಗೆಯ ದೃಶ್ಯಗಳು, ಬೇಟೆ ಕಾದಾಟದ ದೃಶ್ಯಗಳು, ಸಂಗೀತ ಮತ್ತು ನೃತ್ಯ ಕುರಿತು ಚಿತ್ರಗಳಲ್ಲದೆ ಇನ್ನೂ ವೈವಿಧ್ಯಮಯ ರೂಪ ಕಲ್ಪನೆಗಳಿವೆ. ಬಹುತೇಕ ಚಿತ್ರಗಳು ಕೆಂಪು ಕಾವಿ ಮತ್ತು ಬಿಳಿಯ ಬಣ್ಣಗಳು ಹಾಗೂ ಮಿಶ್ರ ಛಾಯೆಗಳನ್ನು ಹೊಂದಿವೆ. ಕೆಲವು ಚಿತ್ರಗಳು ಹಸಿರು ಮತ್ತು ಹಳದಿಯ ಬಣ್ಣಗಳನ್ನು ಲೇಪಿಸಿಕೊಂಡಿದ್ದಾರೆ. ಛಾವಣಿಗಳಲ್ಲಿ ಕೆಲವೂಮ್ಮೆ ಹತ್ತಲಾಗದ ಎತ್ತರಗಳಲ್ಲಿ ಅಲ್ಲದೆ ತೀರ ಕೆಳಭಾಗ (ಸಂತೆಗುಡ್ಡ) ದಲ್ಲು ಈ ಚಿತ್ರಗಳಿವೆ. ಮ್ಯಾಂಗನೀಸ್, ಹೆಮಟಾಯಿಸ್ ಮೃದುಕೆಂಪುಶಿಲೆ ಮತ್ತು ಮರದ ಇದ್ದಿಲಿನಂದ ವರ್ಣಗಳನ್ನು ಸಂಯೋಜಿಸಲಾಗಿದೆ. ಪ್ರಾಣಿಗಳ ಕೊಬ್ಬು ಮತ್ತು ಮರದ ಎಲೆಗಳ ರಸವನ್ನು ಈ ಬಣ್ಣಗಳೂಂದಿಗೆ ಮಿಶ್ರಣಮಾಡಿ ಚಿತ್ರಿಸಲಾಗಿದೆ. ಚಿತ್ರದ ಅಕಾಶದ

ಬಂಡೆಗಳಲ್ಲಿ ಆಕ್ಸಾಯಿಡ್ ಹಾಜರಿಯಿಂದ ಉಂಟಾಗಿರುವ ರಾಸಾಯನಿಕ ಪ್ರಕ್ರಿಯೆಯನ್ನು ಶತಮಾನಗಳ ನಂತರವು ಈ ವರ್ಣಗಳು ಬಂಡೆಯಿಂದ ಬೇರ್ಪಟ್ಟಿಲ್ಲ.

ವಿವಿದ ಕಾಲಘಟ್ಟದಲ್ಲಿ ಬೇರೆ ಬೇರೆ ರೀತಿಯ ಬಣ್ಣಗಳ ಬಳಕೆಯಾಗಿರುವುದು ಕಂಡುಬರುತ್ತದೆ. ಸೂಕ್ಷ್ಮ ಶಿಲಾಯುಗದಲ್ಲಿ ಕೆಂಪು, ಕಂದು, ಕಪ್ಪು ಬಣ್ಣಗಳು ನವಶಿಲಾಯುಗ ಶಿಲಾತಾಮ್ರಯುಗದಲ್ಲಿ ಕೆಂಪು ಅಥವಾ ಕಂದು, ಕೆಂಪು, ಬಿಳಪು, ತಿಳಿಹಳದಿ ಮಿಶ್ರಿತ ಬಿಳಪು, ಕಿತ್ತಳೆ ನಂತರದಲ್ಲಿ ಕೆಂಪು, ಕಂದು, ಬಳಪದ ಬಣ್ಣಗಳಲ್ಲಿ ಚಿತ್ರ ರಚಿಸಲಾಗಿದೆ. ಚಿತ್ರದುರ್ಗ ಪ್ರದೇಶದ ಸುತ್ತಮುತ್ತಲಿನ ಪರಿಸರದ ಜಟಿಂಗರಾಮೇಶ್ವರ ಬೆಟ್ಟ, ಬ್ರಹ್ಮಗಿರಿ ಬೆಟ್ಟ ಹಾಗೂ ನುಂಕೆಮಲ್ಲೈ ಸ್ಥಳಗಳು ಪ್ರಾಯಶಃ ಸೂಕ್ಷ್ಮ ಶಿಲಾಯುಗದ ಚಿತ್ರಗಳಿಂದ ನವಶಿಲಾಯುಗ ಶಿಲಾತಾಮ್ರಯುಗದ ವರೆಗೆ ರಚಿತವಾಗಿದೆ. ಚಿತ್ರದುರ್ಗದ ಚಂದ್ರವಳ್ಳಿ, ತಾಳ್ಯ ಚಿತ್ರದುರ್ಗದ ಕೋಟೆಯಲ್ಲಿನ ಚಿತ್ರಗಳು ಅತಿಹಳೆಯ ಶಿಲಾಯುಗದಿಂದ ಮಧ್ಯಮಶಿಲಾಯುಗದ ವರೆಗೆ ರಚನೆಗೊಂಡಿವೆ.

ಸಂತೆಗುಡ್ಡ ಪ್ರದೇಶದಲ್ಲಿನ ಚಿತ್ರಗಳು ಇತಿಹಾಸ ಆರಂಭದಿಂದ ಇತಿಹಾಸ ಇಂದಿನ ಕಾಲದವರೆಗೆ ಪ್ರಧಾನ ಕೆಮ್ಮಣ್ಣಿನ ಬಣ್ಣವನ್ನು ಬಳಸಿ ರಚಿಸಿದ್ದಾರೆ. ಜೊತೆಗೆ ಆರಂಭಿಕ ಕಾಲದಲ್ಲಿ ಬಿಳಿ ವರ್ಣಗಳಿಂದ ಕೆಲವು ಚಿತ್ರಗಳಿದ್ದು ಅತಿ ಹೆಚ್ಚು ಚಿತ್ರಗಳು ಕೆಂಪು ವರ್ಣಗಳಿಂದ ರಚಿತವಾಗಿದ್ದು ಚಿತ್ರಗಳಲ್ಲಿನ ವಸ್ತುವಿಷಯಗಳು ಸ್ಪಷ್ಟವಾಗಿದ್ದು ನೈಜತೆಯನ್ನು ಸ್ಪಷ್ಟಪಡಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಜಾನಪದೀಯ ಆಚರಣೆಗಳು, ಮೂಡನಂಭಿಕೆಗಳು, ತಂತ್ರ ಮಂತ್ರ ಮಂಡಲಗಳ ಚಿತ್ರಗಳು, ಉತ್ಸವ, ರಥ, ಗೋಪುರಗಳು, ನಾಗದೇವತೆಯ ಚಿತ್ರಗಳು, ದೇವಿಗೆ ರಕ್ತಶಾಂತಿ, ಬಲಿ, ಯುದ್ಧ, ಬೇಟೆ, ಕಾಳಗ ಇತ್ಯಾದಿ ಪ್ರಾಣಿ, ಪಕ್ಷಿಗಳ ನೂರಾರು ಚಿತ್ರಗಳು ಈ ಸ್ಥಳದಲ್ಲಿ ರಚಿವಾಗಿದೆ.

ಬಣ್ಣಗಳ ಪರಿಚಯ :

ಇತಿಹಾಸ ಪೂರ್ವಕಾಲದ ಮಾನವರು ಚಿತ್ರಕಲೆಗೆ ಬಳಸಿದ ಬಣ್ಣಗಳ ಕುರಿತು ನಮಗೆ ಸಿಗುವ ಲಭ್ಯ ಆಕಾರಗಳಲ್ಲಿ ನಮಗೆ ಸಿಗುವ ಶಾಸ್ತ್ರಗ್ರಂಥಗಳ ಮೊರೆ ಹೋಗಬೇಕಾಗಿದೆ. ಇದರಲ್ಲಿ ತಿಳಿಸಿದಂತೆ ಬ್ರಾಹ್ಮಣ ಹೊಕ್ಕಳ ಕಮಲ ದಂಟಿನಿಂದ ಎಲೆಗಳನ್ನು ಪಡೆದು ದೇವಲ ಮಹರ್ಷಿಯು ಬರುತ್ತಿದ್ದಾಗ ಎದುರಾದ ಐವರ ರಾಕ್ಷಸರನ್ನು ಕೊಂದನಂತೆ ಆಗ ಅವರ ದೇಹದಿಂದ ಹಳದಿ, ಕೆಂಪು, ಬಿಳಿ, ಹಸಿರು ಮತ್ತು ಕಪ್ಪು ಬಣ್ಣದ ರಕ್ತ ಬಂದಿತೆಂದು ಅದರಲ್ಲಿ ಬ್ರಹ್ಮ ನೀಡಿದ ಎಲೆಗಳನ್ನೂ ದೇವಲ ಅಲ್ಲಿ ಮೊದಲಬಾರಿಗೆ ವರ್ಣಯುಕ್ತ ನೂಲನ್ನು ತಯಾರಿಸಿದನೆಂದು ಬಣ್ಣ ಮೂಲದ ಬಗ್ಗೆ ದೇವಾದ ಜನರಲ್ಲಿ ಪೌರಾಣಿಕ ಕಥೆಯೊಂದು ಪ್ರಚಲಿತದಲ್ಲಿದೆ. ಆದರೆ ಯಾವುದೇ ಪೌರಾಣಿಕ ಕಥೆ ಕಟ್ಟಿಕೊಡುವಾಗ ಅದರ ಹಿನ್ನೆಲೆ ಇತಿಹಾಸ ಪೂರ್ವಜರಿಗೆ ದಕ್ಕುತ್ತದೆ. ಮಾನವನು ಕಥೆಯನ್ನು ಸೃಷ್ಟಿಸಲು

[illegible]

ಹುಟ್ಟಿನಿಂದಲೆ ಸಾಧ್ಯವಿಲ್ಲ ಯುಗ ಯುಗಾಂತರದ ವರೆಗೆ ಆದಿಮಾನವನ ಜ್ಞಾನರ್ಜನೆ ಪರಿಪಕ್ವವಾದಂತೆ ಇಂಥ ಸೃಷ್ಟಿಯೂ ಕಾರಣವಾಗುತ್ತದೆ.

ಬಣ್ಣಗಳ ತಯಾರಿಕೆ ಮತ್ತು ತಂತ್ರಗಾರಿಕೆ :

ಇತಿಹಾಸ ಪೂರ್ವ ಮಾನವರು ನಿಸರ್ಗದಲ್ಲಿ ದೊರೆಯುವಂತ ವಸ್ತುಗಳನ್ನೆ ಬಳಸಿ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರು. ವಿಶೇಷವಾಗಿ ಖನಿಜ ಶಿಲೆಗಳಿಂದ ಬೇಕಾದ ಬಣ್ಣಗಳಿಗೆ ರಸಾಯನಿಕ ಕ್ರಿಯೆಗೊಳಪಡಿಸಿದಂತೆ ನೇರಳೆ ಬಣ್ಣಕ್ಕಾಗಿ ಮ್ಯಾಂಗನೀಸ್ ಆಕ್ಸಡನ್ನು, ಕಪ್ಪು ಬಣ್ಣಕ್ಕೆ ಪ್ರಾಣಿಗಳ ಎಲುಬು ಮತ್ತು ಮರದ ಕಾಂಡದಿಂದ ಇದ್ದಿಲುಗಳನ್ನು ಹಾಗೂ ಕಲ್ಲಿದ್ದಲುಗಳನ್ನು ಬಳಸಿದ್ದಾರೆ. ಕಂದು, ಕೆಂಪು, ಹಳದಿ, ಕಿತ್ತಳೆ ಬಣ್ಣಗಳಿಗೆ ಕಬ್ಬಿಣದ ಆಕ್ಸೈಡನ್ನು ಬಳಸುತ್ತಿದ್ದರೆಂದು ಹೇಳಲಾಗಿದೆ.

ಖನಿಜ ಮೂಲದ ಬಣ್ಣಗಳಿಗೆ ಪ್ರಾಣಿಗಳಿಗೆ ಪ್ರಾಣಿಗಳ ಕೊಬ್ಬನ್ನು, ಮೂತ್ರವನ್ನು ಕೆಲವು ಸಲ ಪ್ರಾಣಿಯ ರಕ್ತದೊಂದಿಗೆ ಮಿಶ್ರಣಮಾಡಿ ಬಣ್ಣಗಳನ್ನು ಸಿದ್ದಪಡಿಸಿಕೊಂಡಿದ್ದಾರೆ. ಚಿತ್ರದುರ್ಗದ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಬಹುದಾದ ಕೆಂಪು ವರ್ಣ ಅತಿ ಹೆಚ್ಚು ಬಳಸಿದ್ದಾರೆ. ಪ್ರಾಣಿಗಳ ರಕ್ತದ ಬಳಕೆಯಾಗಿದ್ದರು ಅದು ಕೇವಲ ತತ್ ಸಮಯದಲ್ಲಿ ಅದು ಉತ್ತಮವಾಗಿ ಕಂಡರು ನಂತರ ಅದರ ಶಕ್ತಿ ಕಳೆದುಕೊಂಡು ಕಪ್ಪಾಗಿ ಮರೆಯಾಗುತ್ತದೆ. ವೈಜ್ಞಾನಕವಾಗಿ ರಕ್ತವು ಒಂದು ಆಹಾರ ಪದಾರ್ಥವಾಗಿರುವುದರಿಂದಲೂ ಕ್ರಿಮಿ ಕೀಟಗಳಿಗೆ ಆಹಾರವಾಗಿರಬಹುದು ಎಂದರೆ ಬಹುಶಃ ತಪ್ಪಾಗಲಾರದು.

ಕೆಂಪು ವರ್ಣವನ್ನು ಸ್ಥಳೀಯ ಜನರು ಸುರುಮ ಅಥವಾ ಹುರಿಮಂಜು ಎಂದು ಕರೆಯುತ್ತಾರೆ. ಸುರುಮ ಎಂಬುದು ಒಂದು ಖನಿಜ ವಸ್ತು ಅದಕ್ಕೆ ವೈಜ್ಞಾನಿಕವಾಗಿ ಆಂಟಿಮನಿ ಎಂದು ಕರೆಯುತ್ತಾರೆ. ನ್ಸಿಚಿನೈಟ್ ಎನ್ನುವುದು ಆಂಟಿಮನಿಯ ಒಂದು ಅದಿರು ಇದು ಉಕ್ಕಿನ ಅಥವಾ ಬೂದು ಬಣ್ಣದಲ್ಲಿರುವ ಮೆದುವಿನ ಖನಿಜ. ಇದು ಈಗಲೂ ಬಳಕೆಯಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿ ಯಾವುದೇ ಹಬ್ಬ ಹರಿದಿನ ಉತ್ಸವಗಳಿಗೆ ಮನೆ, ಗುಡಿಸಲನ್ನು ಸಾರಿಸಿ ಅಲಂಕರಿಸಲು ಬೆಟ್ಟದಲ್ಲಿ ಸಿಗುವ ಕೆಮ್ಮಣ್ಣನ್ನು ತಂದು ಬಳಸಿದ್ದಾರೆ. ಇದು ಪೂರ್ವಜರು ಹಾಕಿಕೊಟ್ಟ ತಳಪಾಯವೆಂದರೆ ತಪ್ಪಾಗಲಾರದು. ಉದಾಹರಣೆಗೆ ಸಹಿತವಾಗಿ ಇಂದು ಮಹಾರಾಷ್ಟ್ರದಲ್ಲಿ ಇಂದು ದೇಶಿಯ ಕಲೆಯಾಗಿ ಪ್ರಚಲಿತವಿರುವ ವಾರ್ಲಿ ಅಥವಾ ವರಾಳಿ ಚಿತ್ರಕ್ಕೆ ಕೆಮ್ಮಣ್ಣಿ ಮತ್ತು ಬಿಳಿ ಮಣ್ಣಿನಿಂದ ತಯಾರಿಸಿದ ಬಣ್ಣಗಳನ್ನೆ ಇದಕ್ಕೆ ಬಳಸುತ್ತಾರೆ.

ಮಾಂತ್ರಿಕ ಕಟ್ಟಳೆಗೆ ಸಂಬಂಧಿಸಿ ಚಿತ್ರಗಳೆಂದು ತೋರುವ ಚಿತ್ರಗಳಿಗೆ ಬಹುಶಃ ಮೇಲೆ ತಿಳಿಸಿದ ರೀತಿ ಪ್ರಾಣಿಗಳ ರಕ್ತಗಳನ್ನು ಬಳಸಿರಬಹುದು. ಬಿಳಿ ಬಣ್ಣಕ್ಕಾಗಿ ಸುಣ್ಣವನ್ನು ಬಳಸಿದ್ದಾರೆ. ಸುಣ್ಣದ ಬೂದಿಯನ್ನು ಬೆರೆಸಿ ಕೆಲವು ಚಿತ್ರಗಳನ್ನು ಚಿತ್ರಿಸಿದ್ದಾರೆ. ಟಾಲ್ಕಿ

[illegible]

ಎಂದು ಕರೆಯುವ ಒಂದು ರೀತಿಯ ಮೆದು ಬಿಳಿ ಶಿಲೆಯು ಸುಂತಿಮತ್ತಿ, ಸಂತೆಗುಡ್ಡ, ಬ್ರಹ್ಮಗಿರಿ ಇತ್ಯಾದಿ ಸ್ಥಳಗಳಲ್ಲಿ ದೊರೆಯುತ್ತಿತ್ತು ಎಂಬ ಹೇಳಿಕೆಗಳಿವೆ. ಇತಿಹಾಸ ಪೂರ್ವಜರ ಜೊತೆಯಲ್ಲಿ ಬಣ್ಣಗಳು ವೈವಿಧ್ಯಮಯ ಸಂಬಂಧಗಳಿದ್ದವು ಎಂಬುದಕ್ಕೆ ತಾನು ಬರೆದ ಕಲ್ಲಾಸರೆಯಲ್ಲಿರುವ ಚಿತ್ರಗಳೇ ಸಾಕ್ಷಿಯಾಗಿವೆ. ಯಾವ ರೀತಿ ತಯಾರಿಸಿಕೊಳ್ಳುತ್ತಿದ್ದರು. ಅದರ ತಾಂತ್ರಿಕತೆಯ ವಿವರವನ್ನು ಸ್ಥೂಲವಾಗಿ ನಾಲ್ಕು ವಿಧದಲ್ಲಿ ವಿಂಗಡಿಸಬಹುದಾಗಿದೆ.

ಬಣ್ಣಗಳ ವಿಧಗಳು :

೧. ಖನಿಜ ಮೂಲ ಬಣ್ಣಗಳು. (ರಾವಿ ಮಣ್ಣು, ಸುಣ್ಣದಕಲ್ಲು)

೨. ಪ್ರಾಣಿ ಮೂಲದ ಬಣ್ಣಗಳು. (ಕೊಬ್ಬು, ರಕ್ತ)

೩. ಸಸ್ಯ ಮೂಲದ ಬಣ್ಣಗಳು. (ಸುಟ್ಟ ಇದ್ದಿಲು, ಅಂಟು ದ್ರಾವಣ, ಹಸಿರು ಎಲೆ)

೪. ಲೋಹ ಮೂಲದ ಬಣ್ಣಗಳು. (ಸಿಲ್ವರ್, ಗೋಲ್ಡ್)

೧. ಖನಿಜ ಮೂಲದ ಬಣ್ಣಗಳು :

ನಿಸರ್ಗದಲ್ಲಿ ದೊರೆಯುವಂತ ಕಲ್ಲು, ಮಣ್ಣುಗಳಿಂದ ಪಡೆಯುವ ಬಣ್ಣಗಳೆ ಖನಿಜ ಮೂಲ ಬಣ್ಣಗಳಾಗಿವೆ. ನಮಗೆ ತಿಳಿದಿರುವ ಹಾಗೆ ಬಣ್ಣ ಬಣ್ಣದ ಅದಿರುಗಳು (ಗ್ರಾನೈಟ್) ನ್ನು ಭೂಮಿಯಿಂದ ಹೊರತೆಗೆಯುವ ಕೆಲಸ ನಿರಂತರವಾಗಿದೆ. ಪ್ರಾಚೀನರು ವಿವಿಧ ರೀತಿಯ ಬಣ್ಣದ ಕಲ್ಲು, ಮಣ್ಣಿನ ಗಟ್ಟಿ, ಕಬ್ಬಿಣದ ಅದಿರುಗಳಂತ ಬೇರೆ ಬೇರೆ ಅದಿರುಗಳಿಂದ ಪ್ರಾಚೀನರು ಬಣ್ಣಗಳನ್ನು ತಯಾರಿಸಿಕೊಂಡು ಚಿತ್ರ ರಚನೆ ಮಾಡಿದ್ದಾರೆ. ಸುಣ್ಣವು ಪ್ರಾಚೀನ ಮಾನವರು ರಚಿಸಿದ ಚಿತ್ರಗಳಲ್ಲಿ ಬಹುಮುಖ್ಯವಾದ ಖನಿಜಮೂಲದ ಬಣ್ಣವಾಗಿದೆ. ಕೆಲವು ಬಣ್ಣಗಳಂತೆ ಸುಣ್ಣವು ಸಹ ಪ್ರಕೃತಿಯ ಕೆಲವು ಹವಾಮಾನಕ್ಕೆ ಪ್ರತಿರೋಧಕ ಗುಣವನ್ನು ಹೊಂದಿದೆ. ಇದರಿಂದ ಕಲ್ಲಾಸರೆಯಲ್ಲಿನ ಚಿತ್ರಗಳು ಇಂದಿಗೂ ಜೀವಂತವಾಗಿವೆ.

೨. ಪ್ರಾಣಿ ಮೂಲದ ಬಣ್ಣಗಳು :

ಪ್ರಾಣಿಗಳ ಮೂಲದಿಂದ ನಿರ್ಮಾಣವಾದ ಬಣ್ಣಗಳು ಈ ರೀತಿಯಾಗಿವೆ. ಪ್ರಾಣಿಗಳ ಕೊಬ್ಬು, ಪ್ರಾಣಿಗಳ ರಕ್ತಗವನ್ನು ಕೆಲವು ಖನಿಜ ವಸ್ತುಗಳಿಗೆ ಮಿಶ್ರಣಮಾಡಿ ಚಿತ್ರಕ್ಕೆ ಲೇಪಿಸಿದ್ದಾರೆ. ಈ ಚಿತ್ರಗಳಲ್ಲಿ ಇರುವ ಮುಖ್ಯ ದ್ರವ್ಯವನ್ನು ಹಿರಿಯ ಸಂಶೋಧಕರು ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಪ್ರಾಣಿಗಳ ರಕ್ತದ ಅಂಶವಿದೆ ಎಂಬುದು ಖಚಿತವಾಗಿದೆ. ಈ ಆದಾರದ ಮೇಲೆ ಕೆಂಪು ವರ್ಣದ ಉಪಯೋಗದ ಸಂದರ್ಭದಲ್ಲಿ ಕೆಲವು ಸಲ ನೇರವಾಗಿ ಪ್ರಾಣಿಗಳ ರಕ್ತವನ್ನೇ ಉಪಯೋಗಿಸಿರುವ ಸಾಧ್ಯತೆಗಳೂ ಇವೆ.

ಸುಮಾರು ೬೦೦೦ ವರ್ಷಗಳ ಪೂರ್ವದಲ್ಲೇ ಮೆಡಿಟರೇನಯನ್ ಸಮುದ್ರ ತೀರದ ಜನರು "ಯುರೆಕ್ಸ್" ಎಂಬ ಪಟ್ಟೆ ಮೃದ್ವಂಗಿ ಜಾತಿಯ ಚಿಪ್ಪು ಮೀನುಗಳನ್ನು ಹಿಡಿದು ಅವುಗಳಿಂದ ರಸವನ್ನು ಪಡೆದು ಶೇಖರಿಸಿ ನಂತರ ಅದನ್ನು ಒಣಗಿಸಿ

[illegible]

[illegible]

[illegible]

[illegible]

[illegible]

ಪುಡಿಮಾಡಿದಂತಹ ಎಲ್ಲವನ್ನು ಶೇಖರಿಸಿಟ್ಟುಕೊಂಡು ತಮಗೆ ಬೇಕಾದ ಯೋಗ್ಯ ಬಂದಕ (ಅಂಟುದ್ರಾವಕ) ಗಳನ್ನು ಬೆರೆಸಿ ಉಪಯೋಗಿಸುತ್ತಿದ್ದರು. ಇದಕ್ಕೆ ಪರ್ಷಲೆ ವರ್ಣವೆಂದು ಕರೆಯಲಾಗುತ್ತದೆ. ದಕ್ಷಿಣ ಅಮೇರಿಕಾದ ಮೈಕ್ಷಿಕೊದಲ್ಲಿ ಲಭ್ಯವಿರುವ "ಕ್ಯಾಕಸ್ ಕಾಕ್ಷಿ" ಎಂಬ ಕೀಟವನ್ನು ಒಣಗಿಸಿ ಕೇಸರಿ ಬಣ್ಣವನ್ನು ಪಡೆಯುತ್ತಿದ್ದರು. ಇದೇ ಕೀಟಗಳನ್ನು ಚೆನ್ನಾಗಿ ಒಣಗಿಸಿ ಅರೆದು ಪುಡಿಮಾಡಿ ನೀರಿನಲ್ಲಿ ಕುದಿಸಿದಾಗ ಕೋಬೆನಲ್ ಎಂಬ ಹೆಸರಿನ ಕೇಸರಿ ಬಣ್ಣವನ್ನು ಪಡೆಯುತ್ತಿದ್ದರು. ಹೀಗೆ ಪ್ರಾಣಿ ಜನ್ಯ ವರ್ಣಗಳನ್ನು ಪಡೆಯುವ ಕೆಲವು ವಿವರಗಳು ದೊರೆಯುತ್ತವೆ.

೩. ಸಸ್ಯಮೂಲ ಬಣ್ಣಗಳು :

ಇತಿಹಾಸ ಪೂರ್ವ ಮಾನವರು ತಾವು ರಚಿಸುವ ಚಿತ್ರಕ್ಕನುಗುಣವಾಗಿ ಅವುಗಳಿಗೆ ಸರಿದೂಗುವ ಅವಶ್ಯವೆನಿಸುವಂತ ಕೆಲವು ಗಿಡಗಳ ಎಲೆಗಳು, ಹೂವುಗಳು, ಬೀಜ, ಕಾಂಡ, ಚಿಗುರೆಲೆ ಬೇರೆ ಹಾಗೂ ಅಂಟುದ್ರಾವಣಗಳನ್ನು ಸಸ್ಯಗಳಿಂದ ಪಡೆದು ಬಣ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂದಿಗೂ ಸಸ್ಯದಿಂದ ನೀಲಿ ಬಣ್ಣ, ಬರ್ಚ ಎಂಬ ಗಿಡದ ಎಲೆಗಳಿಂದ ಹಳದಿ ಬಣ್ಣ, ಮ್ಯಾಡರ್ ಎಂಬ ಬಳ್ಳಿಯ ಬೇರುಗಳಿಂದ ಕೆಂಪು ಬಣ್ಣವನ್ನು ಬಹಳ ಪೂರ್ವದಲ್ಲಿಯೇ ಪಡೆಯುತ್ತಿದ್ದರು ಎಂದು ತಿಳಿದುಬರುತ್ತದೆ. ಸಸ್ಯಮೂಲಗಳಿಂದ ಪಡೆದ ಅನೇಕ ಬಣ್ಣಗಳನ್ನು ಇತಿಹಾಸ ಪೂರ್ವದಲ್ಲಿ ಬಳಸುತ್ತಿದ್ದ ಉಲ್ಲೇಖಗಳಿವೆ. ಸಸ್ಯಮೂಲದ ಬಣ್ಣಗಳನ್ನು ಖನಿಜಮೂಲ ಬಣ್ಣದೊಂದಿಗೆ ಮಿಶ್ರಣಮಾಡಿ ಚಿತ್ರಗಳಿಗೆ ಲೇಪಿಸುವುದು ವೈಜ್ಞಾನಿಕವಾಗಿ ಕಂಡುಬಂದಿದೆ. ಆದರೆ ಪ್ರತ್ಯೇಕ ಖನಿಜಮೂಲದ ಬಣ್ಣಗಳಿಗೆ ಹೋಲಿಸಿದರೆ ಸಸ್ಯಮೂಲದ ಬಣ್ಣಗಳ ಚಿತ್ರಗಳು ವಿರಳ ಮತ್ತು ರಚಿಸಲಾದ ಚಿತ್ರಗಳು ಸಹ ಪ್ರಕೃತಿಯ ವೈಪರಿತ್ಯಗಳಿಂದ ನಾಶಹೊಂದಿರಬಹುದೆಂದು ತರ್ಕಿಸಬಹುದಾಗಿದೆ.

ಕುಂಚಗಳ ತಯಾರಿಕೆಯ :

ಇತಿಹಾಸ ಪೂರ್ವಜರು ಮೊಟ್ಟಮೊದಲು ಕೈ ಬೆರಳಿನಿಂದಲೂ ಚೂಪಾದ (ಹರಿತವಾದ) ಕಲ್ಲಿನ ಆಯುಧಗಳಿಂದ ಗೀಚುವುದರ ಮೂಲಕ ತಮ್ಮ ಸನ್ನೆಗಳನ್ನು ಅಥವಾ ಚಿತ್ರಗಳನ್ನು ರಚಿಸಿರಬಹುದೆಂದು ಊಹಿಸಲಾಗಿದೆ. ಆದರೆ ಕ್ರಮೇಣ ಬಣ್ಣಗಳ ತಯಾರಿಕೆ ಹಲವು ರೂಪಾಂತರ ಮಾಧ್ಯಮಕ್ಕೆ ಸರಿದೂಗುವಂತೆ ಕೆಲವು ತಂತ್ರಗಳನ್ನು ಕಂಡುಕೊಂಡ ಅವುಗಳೆಂದರೆ ಉದಾ. ಬೇಟೆಯಾಡುವ ತಂತ್ರ, ಆಯುಧಗಳ ಬದಲಾವಣೆ ಮತ್ತು ತಂತ್ರ, ಅದರಂತೆ ಬಣ್ಣದ ದ್ರವದಲ್ಲಿ ಅದ್ದಿ ಬರೆಯಲು ಒಂದು ರೀತಿಯ ಕುಂಚಗಳನ್ನು ಕಂಡುಕೊಂಡ. ವಿವಿಧ ಬಗೆಯ ವಿವಿಧ ಮಾಧ್ಯಮದ ಕುಂಚಗಳ ತಯಾರಿಕೆ ಹಂತ ಹಂತವಾಗಿ ಬೆಳಸಿಕೊಂಡ. ನಾರುಳ್ಳ ಗಿಡದ ರೆಂಬೆಯ ತುದಿಯನ್ನು ಕತ್ತರಿಸಿ ಸಮತಟ್ಟಾಗಿ

[illegible]

[illegible]

[illegible]

[illegible]

[illegible]

ಜಜ್ಜಿ ತೊಗಟೆಯನ್ನು ಸೊಚ್ಚಗೊಳಿಸಿ ಎಳೆ ಎಳೆಯಾದ ಕೂದಲಿನಂತೆ ತಯಾರಿಸಿದ ಅದರಿಂದ ರೇಖಾಚಿತ್ರಗಳು, ಚಪ್ಪಟೆ ವರ್ಣ ಲೇಪನ, ದ್ವಿರೇಖಾ ಕ್ರಮ ಇತ್ಯಾದಿ ಮಾಧ್ಯಮಗಳಲ್ಲಿ ರಚಿಸತೊಡಗಿದ. ಚಿತ್ರಗಳ ಪ್ರಮಾಣಕ್ಕೆ ತಕ್ಕಂತೆ ಬೇರೆ ಬೇರೆ ಪ್ರಾಣಿಗಳ ರೋಮಗಳನ್ನು ಬಳಸಿ ವಿವಿಧ ಬಗೆಯ ಅಳತೆಯ ಕುಂಚಗಳನ್ನು ತಯಾರಿಸಿಕೊಂಡು ಸಣ್ಣ ಅಳತೆ ಎಂದರೆ ಕುಂಚವನ್ನು ಹಿಡಿದು ೧/೨ ಸೆಂಟಿಮೀಟರ್ ದಪ್ಪದ ಕುಂಚ ಅಥವಾ ಅರ್ಧ ಸೆಂಟಿಮೀಟರ್ ಒಳಗಿನ ಚಿತ್ರಗಳಿಗಾಗಿ ಕಡ್ಡಿ ಇಲ್ಲವೆ ಪ್ರಾಣಿಗಳ ಪುಕ್ಕದ ಕಡ್ಡಿಯ ತುದಿಯಲ್ಲಿ ರಚನೆ ಮಾಡಿರುವುದನ್ನು ಚಿತ್ರದುರ್ಗದ ಹಲವಾರು ಪ್ರದೇಶಗಳಲ್ಲಿ ಕಾಣಬಹುದು.

ಕೆಲವು ನಿಸರ್ಗ ನಿರ್ಮಿತ ಗುಹೆಗಳಲ್ಲಿ ಕಲ್ಲಾಸರೆ ಚಿತ್ರಗಳಲ್ಲಿ ಗುಂಪಿನಲ್ಲಿರುವ ಸಣ್ಣ ಸಣ್ಣ ನಾಯಿ, ಮನುಷ್ಯ, ನವಿಲು ಚಿತ್ರಗಳನ್ನು ಇಂತಹ ಕುಂಚಗಳಿಂದಲೆ ರಚಿಸಿರಬೇಕೆಂಬ ಅಭಿಪ್ರಾಯವಿದೆ. ಕೆಲವು ಚಿತ್ರಗಳಿಗೆ ಕಡ್ಡಿಯನ್ನು ಉಪಯೋಗಿಸಿದ್ದು ಕಂಡುಬರುತ್ತದೆ, ಹಾಗಾಗಿ ಇವರು ಏಕಕಾಲದಲ್ಲಿ ಕುಂಚಗಳನ್ನು ಸಿದ್ಧಮಾಡಿ ಚಿತ್ರ ರಚನೆಯಲ್ಲಿ ತೊಡಗುತ್ತಿದ್ದರೆಂದು ತರ್ಕಿಸಬಹುದು. ಸಂತೆಗುಡ್ಡದಲ್ಲಿ ಬೃಹತ್ ಶಿಲಾಶ್ರಯದಲ್ಲಿ ರಚಿಸಿ ಎಲ್ಲ ಚಿತ್ರಗಳು ಏಕಕಾಲದಲ್ಲೇ ರಚಿಸಿದಂತಿದೆ. ಬಣ್ಣಗಳು ಹೆಚ್ಚಾಗಿ ಸಿದ್ಧಪಡಿಸಿ ಅದನ್ನು ಕೊಂಬುಗಳಲ್ಲಿ, ಎಲೆಗಳಲ್ಲಿ, ತೊಗಟೆಗಳಲ್ಲಿ, ಬಿದಿರಿನ ಬೊಂಬಿನಲ್ಲಿ ಇಲ್ಲವೇ ಮಣ್ಣಿನ ಕುಡಿಕೆಗಳಲ್ಲಿ ಶೇಖರಿಸಿಟ್ಟು ಚಿತ್ರ ರಚನೆ ಮಾಡಿರಬಹುದೆಂದು ತಿಳಿಯಬಹುದಾಗಿದೆ.

ಚಿತ್ರ ರಚನೆಯಲ್ಲಿ ಹಸ್ತಗಳ ಬಳಕೆ :

ಇತಿಹಾಸ ಪೂರ್ವಜರು ಸಪೂರಾದ ಸಮತಟ್ಟ ಜಾಗದಲ್ಲಿ ತಮ್ಮ ಹಸ್ತಗಳಿಗೆ ಬಣ್ಣವನ್ನು ಬಳಿದು ಇಲ್ಲವೇ ಬಣ್ಣದ ಪಾತ್ರೆಯಲ್ಲಿ ಹಸ್ತವನ್ನು ಅದ್ದಿ ಒಂದರ ಪಕ್ಕದಲ್ಲಿ ಒಂದರಂತೆ ಹಚ್ಚಿ ಮುದ್ರೆ ತೆಗೆದಂತೆ ಚಿತ್ರಿಸಿದ್ದಾರೆ. ಇದೂ ಸಹ ಚಿತ್ರ ರಚನಾ ಸಾಮಗ್ರಿಯೆ ಎಂದು ಪರಿಗಣಿಸಬಹುದು. ಇಂತಹ ಹಸ್ತ ಮುದ್ರಿಕೆಗಳು ತಾಮ್ರಯುಗದ ನವಶಿಲಾ ಸಂಸ್ಕೃತಿ ಮತ್ತು ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳಲ್ಲಿಯು ಚಿತ್ರದುರ್ಗ ಪ್ರದೇಶದ ಬ್ರಹ್ಮಗಿರಿ, ಚಂದ್ರವಳ್ಳಿ ಸ್ಥಳಗಳಲ್ಲಿ ಮತ್ತು ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಈ ರೀತಿಯ ಸಂಸ್ಕೃತಿಯ ಆಚರಣೆ ಸಂದರ್ಭದಲ್ಲಿ ಈಗಲೂ ಮನೆಯ ಒಳಭಾಗ ಮತ್ತು ಹೊರಭಾಗದಲ್ಲಿ ಹಸ್ತಗಳಿಂದ ಮುದ್ರೆ ತೆಗೆಯುವ ಪದ್ಧತಿ ಈಗಲೂ ಇದೆ. ಇದು ಇತಿಹಾಸ ಪೂರ್ವಜರ ಒಂದು ರೀತಿಯ ಸಿದ್ಧಾಂತವೇ ಇರಬಹುದೆಂದು ಊಹಿಸಲಾಗಿದೆ.

ಚಿತ್ರ ರಚನೆಯಲ್ಲಿ ಕೈ ಬೆರಳುಗಳ ಪ್ರಾಮುಖ್ಯತೆ :

ಪ್ರಾರಂಭಿಕ ಹಂತದಲ್ಲಿ ಆದಿ ಮಾನವರು ರಚಿಸಿದ ಚಿತ್ರಗಳಲ್ಲಿ ಬಿಳಿವರ್ಣದ ಚಿತ್ರಗಳೇ ಹೆಚ್ಚಾಗಿ ಕಂಡುಬರುತ್ತವೆ. ಚಿತ್ರರಚನೆಯಲ್ಲಿ ಬೆರಳಿನಿಂದ ಮಾಡಿರುವ ಚಿತ್ರಗಳ

[illegible]

ರೇಖೆಗಳು ಅನೇಕ ಚಿತ್ರಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ವಿಶೇಷವಾಗಿ ಸಣ್ಣ ಸಣ್ಣ ಕಡ್ಡಿ ಆಕಾರದ ಮನುಷ್ಯ, ಪ್ರಾಣಿ, ಪಕ್ಷಿಗಳ ಚಿತ್ರಗಳು ಮತ್ತು ಮಂಡಲಗಳ ಚಿತ್ರಗಳನ್ನು ಬೆರಳುಗಳಿಂದ ಮಾಡಿರುವುದನ್ನು ಸಹ ಇಲ್ಲಿ ನೊಡಬಹುದಾಗಿದೆ. ಇಂಥ ಚಿತ್ರಗಳು ಜಟಿಂಗರಾಮೇಶ್ವರ, ಬ್ರಹ್ಮಗಿರಿ ಬೆಟ್ಟ, ನುಂಕಿಮಲ್ಲೈ, ಸಂತೆಗುಡ್ಡ, ಚಂದ್ರವಳ್ಳಿ ಸ್ಥಳಗಳಲ್ಲಿ ಇಂದಿಗೂ ಕಾಣಸಿಗುತ್ತವೆ. ಕಲ್ಲಾಸರೆಯಲ್ಲಿ ಚಿತ್ರಿತ ಕೆಲವು ಸ್ಥಳಗಳು ನೆಲದಿಂದ ಎತ್ತರದಲ್ಲಿದ್ದವುಗಳನ್ನು ಪ್ರಾಯಶಃ ಅಟ್ಟಣಿಗೆಗಳನ್ನು ಕಟ್ಟಿಕೊಂಡು ಚಿತ್ರಿಸಿರಬಹುದೆಂದು ನಾವು ತಿಳಿಯಬಹುದು.

ಬಯಲು ಬಂಡೆ ಚಿತ್ರಗಳ ರಚನಾಕ್ರಮ, ತಂತ್ರಗಾರಿಕೆ ಮತ್ತು ಶೈಲಿ :

ಮಾನವನ ಪ್ರಾಚೀನತೆಯನ್ನು ಆದಿಮಾನವನ ಹಂತದೆಂದು ಪರಿಗಣಿಸಿದಾಗ ಅವನ ಬದುಕಿನ ಊಹಾಚಿತ್ರವನ್ನು ಕಲ್ಪಿಸಿದಾಗ ಅವನ ಭಯ ಆತಂಕ ರೋಗರುಜನಗಳು, ಭೂಕಂಪದಂತಹ ಪ್ರವಾಗಳಿಗೆ ಅವನು ತೋರುತ್ತಿದ್ದ ಪ್ರತಿಕ್ರಯೇ ಹೇಗಿರಬಹುದಿತ್ತು ಬುದ್ದಿ ಬೆಳೆದ ನಂತರ ಅವನ ಪ್ರತಿಕ್ರಿಯೇ ದೇವ ದೈವದೊಡನೆ ಆಚಾರ ವಿಚಾರದೊಡನೆ ಹೇಗಿರಬಹುದಿತ್ತು, ಈ ಒಂದು ಪ್ರಶ್ನೆ ಹಾಕಿಕೊಂಡಾಗ ತನ್ನ ಸಮಾದಾನಕ್ಕಾಗಿ ಸ್ವಾರ್ಥದ ಸುಖಕ್ಕಾಗಿ ದೈವ ಪ್ರತೀಕಾರಕ್ಕಾಗಿ ಹುಟ್ಟಿಕೊಂಡ ಚಟುವಟಿಕೆಗಳೆ ಕಲೆಗಳಾಗಿವೆ ಎನ್ನಬಹುದು.

ಆಧುನಿಕ ಚಿತ್ರಕಲೆಯಂತೆ ಇತಿಹಾಸ ಪೂರ್ವ ಕಾಲದ ಚಿತ್ರಕಲೆ ಕಂಡುಬರುತ್ತದೆಂದರೆ ತಪ್ಪಲ್ಲ. ಕರ್ನಾಟಕದಲ್ಲಿ ಇಂಥ ಪ್ರಾಚೀನ ಚಿತ್ರಕಲೆಯ ವಿವರ ದೊರೆಯುತ್ತದೆ. ಆದಿಮಾನವ ಮೊದಲ ಪಾಠ ಚಿತ್ರಕಲೆ, ಭಾಷಾ ಪೂರ್ವದಲ್ಲಿ ಸಂಜ್ಞೆ, ಲಿಪಿ ಪೂರ್ವದಲ್ಲಿ ಚಿತ್ರಕಲೆ ಇತಿಹಾಸ ಪೂರ್ವಜರಲ್ಲಿ ಬಳಕೆಯಲ್ಲಿತ್ತು. ಹರಪ್ಪ, ಮೆಹೆಂಜೋದಾರೋ, ಚೀನಾದ ಲಿಪಿಗಳು ಇಂದಿಗೂ ಚಿತ್ರಮಯವಾಗಿರುವುದನ್ನು ಕಾಣುತೇವೆ. ಕರ್ನಾಟಕದ ಪ್ರಾಚೀನ ಜನತೆ ಕೂಡ ಅಂಥದೊಂದು ಮಾಧ್ಯಮದಲ್ಲಿ ನಿರಂತರ ಬದುಕನ್ನು ಸಾಗಿಸಿರಬೇಕು. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಕಂಡುಬರುವ ಪ್ರಾಚೀನ ಚಿತ್ರಕಲೆ ಹೀಗೆ ತಿಳಿಸಬಹುದು. ಚಿತ್ರದುರ್ಗದ ಚಂದ್ರವಳ್ಳಿ, ಬ್ರಹ್ಮಗಿರಿಯಲ್ಲಿ ಹೆಚ್. ಶ್ರೀ ಶೈಲ ಆರಾಧ್ಯರು ವರ್ಣಚಿತ್ರ ಗವಿಗಳನ್ನು ಬಯಲು ಬಂಡೆಯ ಚಿತ್ರಗಳನ್ನು ಶೋಧಿಸಿದ್ದಾರೆ.

ಬಯಲು ಬಂಡೆಯ ಮೇಲೆ ಬೆಟ್ಟದ ಕರಿಯ ಕಲ್ಲಿನ ಬಂಡೆಗಳ ಮೇಲೆ ಕುಟ್ಟಿದ ಅಂದರೆ "ಕಚ್ಚು" ಮಾಡಿದ ಚಿತ್ರಗಳಿವೆ. ಕೆಲವು ಕಡೆ ಕೆತ್ತನೆ (ಊರಿದ) ಮಾಡಿ ನಿರ್ಮಿಸಿದ ರೇಖಾವಿನ್ಯಾಸ ಚಿತ್ರಗಳು ಬಯಲು ಬಂಡೆಯಲ್ಲಿ ಕಂಡು ಬಂದಿವೆ. ಇವಕ್ಕೆ ಗೀರು ಅಥವಾ ಕೊರೆದ ಚಿತ್ರಗಳೆಂದು ಕರೆಯಲಾಗುವುದು. ಈ ಬಯಲುಬಂಡೆಯ ಮೇಲೆ ಶಿಲಾಶ್ರಯದ ಚಿತ್ರಗಳಲ್ಲಿ ಕೆಲವೂಮ್ಮೆ ವರ್ಣಗಾರಿಕೆ ಹೆಚ್ಚಾಗಿರದೆ ರೇಖಾಚಿತ್ರಗಳೆ ಹೆಚ್ಚಾಗಿ ಕಂಡುಬರುತ್ತವೆ.

ಬಯಲು ಬಂಡೆಯ ಕುಟ್ಟೆ ಕೊರೆದ ಚಿತ್ರಗಳ ಪರಿಕರಗಳು :

ಇತಿಹಾಸ ಪೂರ್ವಜರು ತಮ್ಮ ದೈನಂದಿನ ಚಟುವಟಿಕೆ ಬೇಟೆಯಾದ್ದರಿಂದ ತಾವು

ಬಳಸಿದ ಆಯುಧಗಳಿಂದಲೆ ಮೊಟ್ಟಮೊದಲು ಇಂಥ ಕುಟ್ಟಿ ಇಲ್ಲವೆ ಕೊರೆದ ಚಿತ್ರಗಳಿಗೆ ಬಳಸಿದ್ದುಂಟು ಕ್ರಮೇಣ ಇಂಥ ಚಿತ್ರ ರಚನೆಗೆ ಪ್ರತ್ಯೇಕ ಉಪಕರಣಗಳನ್ನು ಬಳಸಿದ್ದಾರೆ, ಚಿತ್ರಗಳ ಹಲವು ಅಳತೆಗಳಿಗೆ ಸರಿದೂಗುವಂತ ಉಳಿಯ, ತಿರುಗುಳಿಗಳು, ಲೋಹದ ಉಳಿ, ಇಲ್ಲಿವೆ ಗಟ್ಟಿಶಿಲೆಯ ದಪ್ಪ ಚೂಪಾದ ಆಯುಧಗಳನ್ನು ಬಳಸಿದ್ದಾರೆಂದು ತಿಳಿಯಬಹುದು. ಬಂಡೆಯ ಚಿತ್ರಗಳಲ್ಲಿ ಕೊರೆದ, ಕುಟ್ಟಿದ ಚಿತ್ರವನ್ನು ರಚಿಸುವ ಮೊದಲು ಸಂಪೂರ್ಣ ವಿನ್ಯಾಸವುಳ್ಳ ಪ್ರಾಣಿ, ಇಲ್ಲಿ ಮನುಷ್ಯನೆ ರೇಖಾವಿನ್ಯಾಸವನ್ನು ರಚಿಸಿ ನಂತರ ಅದರ ಮೇಲೆ ಸಣ್ಣ ಸಣ್ಣ ಉಳಿಯ ಹೊಡೆತಗಳನ್ನು ಒಂದರ ಪಕ್ಕ ಒಂದರಂತೆ ಮೂಡಿಸುತ್ತ ನಂತರ ಲೋಹದ ಆಯುಧದಿಂದ ಸತತವಾಗಿ ಒಂದೆ ಕಡೆ ಕುಟ್ಟುವುದರಿಂದ ಚಿತ್ರ ವಿನ್ಯಾಸಗಳು ಮೂಡಿವೆ.

ಬಯಲು ಬಂಡೆಯ ಕಲಾ ಸೃಷ್ಟಿಯಲ್ಲಿ ಎರಡು ರೀತಿಯ ಕಾಣುತ್ತವೆ. ಮೇಲೆ ತಿಳಿಸಿದಂತೆ ಕುಟ್ಟಿದಚಿತ್ರ, ಕೊರೆದಚಿತ್ರ ಇವೆರಡಕ್ಕೂ ಮಧ್ಯದ ಬಂಡೆ ಇದ್ದು, ಪರಿಕರಗಳು ಬೇರೆ ಬೇರೆಯಾಗಿರುತ್ತವೆ ಜೊತೆಯಲ್ಲಿ ಕಾಲಮಾನಗಳು ಸಹ ಬೇರೆಯಾಗಿವೆ. ಸಾವಿರಾರು ವರ್ಷಗಳ ಹಿಂದೆ ರಚಿಸಿದ ಚಿತ್ರಕಲಾ ಸಾಮಗ್ರಿಗಳಲ್ಲಿ ನಿರ್ಧಿಷ್ಟ ವಿವರಣೆಯನ್ನು ಹೇಳಲಾಗುವುದಿಲ್ಲವಾದರು ಹಲವು ಆಯಾಮಗಳಲ್ಲಿ ಪರಿಭಾವಿಸಬಹುದು.

ಬಯಲು ಬಂಡೆಯ ಚಿತ್ರಗಳ ವಿಧಗಳು :

೧. ಈ ಚಿತ್ರಗಳು ಕೊರೆದ ಇಲ್ಲಿವೆ ಉಜ್ಜಿದ ಹಾಗೂ ಕುಟ್ಟಿದ ಚಿತ್ರಗಳಾಗಿವೆ.

೨. ಬಯಲು ಬಂಡೆಯ ಈ ಚಿತ್ರಗಳಿಗೂ ಗವಿವರ್ಣಗಳಿಗೂ ಹೋಲಿಕೆ ಕಂಡುಬರುತ್ತದೆ.

೩. ಈ ಚಿತ್ರಗಳನ್ನು ಹೆಚ್ಚಾಗಿ ಕಲ್ಲಾಸರೆಯಲ್ಲಿ ಬಯಲಿನಲ್ಲಿ ಚಿತ್ರಿಸಿದ್ದಾರೆ.

೪. ಬಯಲು ಬಂಡೆಯ ಹಾಗೂ ಗವಿಯೊಳಗಿನ ವರ್ಣಚಿತ್ರಗಳು ಒಂದೆ ಕಡೆಯಲಿ ಲಭಿಸುತ್ತವೆ.

೫. ಗವಿವರ್ಣ ಚಿತ್ರಗಳಿಗಿಂತ ಬಯಲು ಬಂಡೆಯ ಚಿತ್ರಗಳು ಹೆಚ್ಚು ಕಾಲ ಬಾಳಿಕೆ ಬರುವಂಥವುಗಳಿವೆ.

೬. ಬಯಲುಬಂಡಯ ಮತ್ತು ಗವಿವರ್ಣ ಚಿತ್ರಗಳ ವಸ್ತುವಿಷಯ ಒಂದೇ ಆಗಿರುತ್ತದೆ.

೭. ಉಬ್ಬು ಶಿಲ್ಪಗಳಂತೆ ಕೆಲವು ಶಿಲ್ಪಗಳು ಕಲ್ಲಿನಿಂದ ನಿರ್ಮಿಸಿದ್ದಾರೆ.

೮. ಸಾಮಶಧಿ ಇಲ್ಲವೆ ಪ್ರತ್ಯೇಕ ಗುಂಪನ್ನು ತೋರ್ಪಡಿಸಲು ದೊಡ್ಡ ದೊಡ್ಡ ಕಲ್ಲುಗಳ ಶಿಲ್ಪ ಮಾದರಿಯ ಭೂಮಿಕೆಯನ್ನು ನಿರ್ಮಿಸುತ್ತಾರೆ.

೯. ಬಯಲು ಬಂಡೆಯ ಗಟ್ಟಿ ಕಲ್ಲುಗಳಿಂದ ಮಾಡಿದ ಬೇಟೆಯ ಆಯುಧಗಳ ತಯಾರಿಕೆ ಮುಂದುವರೆದು ಶಿಲ್ಪ ಕಲಾಕೃತಿ ರಚನೆಯಾಗಿದೆ.

೧೦. ಮಕ್ಕಳ ಆಟಿಕೆಗಳಂತ ಸಂಪೂರ್ಣ ವಿನ್ಯಾಸ (ಮನುಷ್ಯ, ಪ್ರಾಣಿ, ಪಕ್ಷಿ)ದ ಸ್ಪಷ್ಟ

ಮಾಡಿದ ಶಿಲ್ಪಗಳು ಕಲ್ಲಿನಿಂದ ನಿರ್ಮಿತವಾಗಿವೆ.

ಇತಿಹಾಸ ಪೂರ್ವಜರು ತಮ್ಮ ನಿತ್ಯಬದುಕಿನ ಅನುಭವಗಳು, ನಂಬಿಕೆಗಳು, ಸಂಕೇತಗಳ ಮೂಲಕ ಹಂಚಿಕೊಳ್ಳುವ ಕಲಾಕೃತಿಗಳಾಗಿವೆ. ಮುಖ್ಯವಾಗಿ ಇವರ ಕಲೆಯನ್ನು ಧರ್ಮಗಳಲ್ಲಿ ಕಾಣುವಂತೆ ಪ್ರತ್ಯೇಕತೆಗೆ ಲಾಂಛನಗಳ ಮಾದರಿಗಳು ಇವರ ಚಿತ್ರಗಳಿಲ್ಲಿವೆ. ಆದಿಮಾನವ ಶೈಲಿಯ ಪ್ರಭಾವವಿದ್ದರೂ ಅಲ್ಲಿ ಭಾವನೆಗಳ ಸಂಕೇತ ವಿಜೃಂಬಿಸಿವೆ. ಹೀಗಾಗಿ ಇವು ಚಿತ್ರಕಲಾವಿದರ ಸೃಜನಶೀಲತೆ ಬೆಳವಣಿಗೆಯ ಮೊದಲ ಹೆಜ್ಜೆಗಳಾಗಿವೆ.

ಬಯಲು ಬಂಡೆಯ ಚಿತ್ರಗಳ ರಚನಾ ಉದ್ದೇಶ :

ಬಯಲು ಬಂಡೆ ಹಾಗೂ ಗವಿ ವರ್ಣ ಚಿತ್ರಗಳು ಆಕಾರ ಪಡೆಯಲು ಸೌಂದರ್ಯ ಪ್ರಕಾರಕ್ಕೆ ಸ್ವಪ್ರಯೋಜನಕ್ಕಾಗಿ ಮಾಡಿದ ತಾಂತ್ರಿಕ ಹಿನ್ನೆಲೆಗಳೇ ಪ್ರಮುಖ ಕಾರಣಗಳೆನಿಸಿದೆ. ಈ ಎರಡೂ ಉದ್ದೇಶಗಳನ್ನು ಇಲ್ಲಿ ವಿವರವಾಗಿ ಪರೀಶಿಲಿಸಬಹುದಾಗಿದೆ.

ಸೌಂದರ್ಯ ಪ್ರಕಟಣೆಯ ಹಿನ್ನೆಲೆ :

ಸೂಕ್ತವಾದ ಬಾಹ್ಯ ಪ್ರೇರಣೆ ಒಳಗೊಂಡಂತೆ ಪ್ರಾಚೀನ ಮಾನವನು ತಾನು ಕಂಡುಕೊಂಡ ಸೌಂದರ್ಯದ ಅಭಿವ್ಯಕ್ತಿಗಾಗಿ ಚಿತ್ರಕಲೆಯನ್ನು ಮಾಧ್ಯಮವಾಗಿ ರೂಪಿಸಿಕೊಂಡಿರಬೇಕು ಅದುದರಿಂದ ಚಿತ್ರಕಲೆಯ ಮೂಲ ಉದ್ದೇಶವೆಂದರೆ ಸೌಂದರ್ಯವನ್ನು ಪ್ರಕಟಿಸುವುದೇ ಆಗಿದೆಯೆಂದು ಈ ಮೂಲಕ ತಿಳಿಯಬಹುದು.

ಸ್ವಪ್ರಯೋಜನಕ್ಕಾಗಿ ಮಾಡಿದ ತಾಂತ್ರಿಕ ಹಿನ್ನೆಲೆ :

ತನ್ನ ದೈನಂದಿನ ಬದುಕು ಸುಲಲಿತವಾಗಿ ಸಾಗಿಸುವ ಸಲುವಾಗಿ ಪ್ರಾಚೀನ ಮಾನವರು ನಿಸರ್ಗದ ಮಾರುಹೊಕ್ಕು ಆಗೋಚರ ಶಕ್ತಿಗಳ ಆರಾಧನೆಗೆ ತೊಡಗಿ ಮತ್ತು ಆರಾಧಿಸಲು ಚಿತರ ರಚನೆ ಮಾಡತೊಡಗಿದ ಈಗಲೂ ಕೆಲವು ಗುಹೆಗಳು ತೀರ ದುರ್ಗಮವಾದ ಪ್ರವೇಶಿಸಲು ಅಸಾದ್ಯವಾದ ಸ್ಥಳಗಳಲ್ಲಿರಬೇಕು ಪ್ರವೇಶಿಸದ ಗೌಪ್ಯ ಸ್ಥಳಗಳಲ್ಲಿ ಉದ್ದೇಶ ಈಡೇರಿಸಿಕೊಳ್ಳಲು ಆರಾಧನೆ ಮಾಡಿರಬೇಕು. ಈಗಲೂ ಮಾಟ ಮಂತ್ರ, ಭಾನಾಮತಿಯಂತಹ ತಂತ್ರಕರು ಗೌಪ್ಯ ಸ್ಥಳಗಳಲ್ಲಿ ಸಾಧನೆ ಆರಾಧನೆ ಮಾಡುವುದುಂಟು. ಅಂದಿನ ತನ್ನ ಅವಶ್ಯಕತೆಯಾದ ಪ್ರಾಣಿಗಳ ಬೇಟೆ ಅವುಗಳ ವಶೀಕರಣದ ಅಂಗವಾಗಿ ಒಂದು ರೀತಿಯಲ್ಲಿ ಪೂಜಾ ವಿಧಾನದ ಕುರುಹಾಗಿ ಈ ಚಿತ್ರಗಳನ್ನು ಪರಿಬಾವಿಸಬಹುದು.

ಪ್ರಸ್ತುತ ಸಂದರ್ಭದಲ್ಲಿ ಮಕ್ಕಳಿಗೆ ದೇವಿ ಹಾಕಿಸುವ ನಿಟ್ಟಿನಲ್ಲಿ ಮಂತ್ರ ಪೂಜಾರಿಯಿಂದ ಮಕ್ಕಳಿಗೆ ಯಂತ್ರಗಳನ್ನು ಬರೆದು ಯಂತ್ರರೂಪದಲ್ಲಿ ಸಿದ್ಧಪಡಿಸಿ ಮಕ್ಕಳಿಗೆ ಪುಸ್ತಕದಲ್ಲಿ ನೀಡಿರುವ ಕಟ್ಟುನಿಯಮ ಪ್ರಕಾರ ಕಟ್ಟಲಾಗುವುದು. ಮುಂದುವರೆದು ಇದೇ ರೀತಿಯ ಯಂತ್ರ ಮಂತ್ರಗಳ ಪೂರ್ಣ ವಿಧಿ ವಿಧಾನಗಳು ಕಾರಿರುಳ ರಾತ್ರಿಯಲ್ಲಿ ಶವ ಸಂಸ್ಕಾರ ಜಾಗದಲ್ಲಿ ಇಂದಿಗೂ ನೆಡೆಯುತ್ತಿವೆ. ಮೂರು ಹಾದಿಗಳು ಸಂಧಿಸುವ ಜಾಗದಲ್ಲಿ ನಾಲ್ಕು

[illegible]

ಹಾದಿ ಸಂಧಿಸುವ ಜಾಗದ ಮಧ್ಯ ಭಾಗದಲ್ಲಿ ಇಂಥಹ ಪೂಜಾ ವಿಧಾನಗಳನ್ನು ನಾಲ್ಕು ದಿಕ್ಕಿಗೆ ದಿಕ್ಕನ್ನು ಕಟ್ಟಿ ತಮ್ಮ ತಂತ್ರ ಸಾಧನೆಗೈವ ಪದ್ಧತಿ ನೋಡುತ್ತಿದ್ದೇವೆ.

ಕುಟ್ಟಿದ ಮತ್ತು ಕೊರೆದ ಚಿತ್ರಗಳಲ್ಲಿ ಹೆಚ್ಚಾಗಿ ವಿವಿಧ ಬಗೆಯ ಪ್ರಾಣಿಗಳ ಬೃಹತ್ ಚಿತ್ರ, ಯಂತ್ರ ಮಂತ್ರಗಳಂತಹ ಮಂಡಲಗಳ ಚಿತ್ರ ಹಾಗೂ ಜಾನಪದೀಯ ಅಂದಿನ ಆಟದ ನಕಾಶೆಗಳನ್ನು ಚಿತ್ರಿಸಿದ್ದಾರೆ. ಕೆಂಪು ಬಾರಿ ಸಮತಟ್ಟಾದ ಕಲ್ಲಿನ ಮೇಲ್ಭಾಗದಲ್ಲಿ ಸಮನಾಂತರವಾಗಿ ಗುಳಿಗಳನ್ನು ತೋಡಿದ ಆಟಿಕೆ ಚಿತ್ರಗಳನ್ನು ರಚಿಸಿದ್ದಾರೆ. ಅತಿವಿರಳವಾಗಿ ಮುಖವಾಡಗಳಂತ ಶಿಲ್ಪಗಳು ಸಿಕ್ಕಿವೆ. ಉದಾಹರಣೆಗೆ ವಿಲಿಯನ್ ಡಾರ್ಫ ವಿನಸ್ ಕ್ರಿಪೂ ೩೦.೦೦೦ ವರ್ಷಗಳ ಹಿಂದೆ ರಚಿಸಲಾಗಿದೆ ಎಂದು ಹೇಳಲಾಗಿದೆ.

ತಂತ್ರಗಾರಿಕೆ :

ಈ ಪ್ರದೇಶದ ನೂತನ ಶಿಲಾಯುಗದ ಉಪಕರಣಗಳನ್ನು ರೂಪಿಸುವಲ್ಲಿ ಬಳಸಿರುವ ತಾಂತ್ರಿಕತೆಯು ಈಗಾಗಲೇ ಬಹು ಚರ್ಚಿತವಾಗಿ ಪ್ರಸಿದ್ಧವಾಗಿರುವ ತಾಂತ್ರಿಕತೆಯ ವಿಧಾನವನ್ನೇ ಬಳಸಿ ರೂಪಿಸಿರುವುದು ಕಂಡುಬರುತ್ತದೆ. ಅದರಲ್ಲಿಯೂ ಪ್ರಮುಖ ಉಪಕರಣಗಳ ಎರಡೂ ಮುಖಗಳಲ್ಲಿಯೂ ಕಂಡುಬರುವ ತೆಳು ಚಕ್ಕೆಗಳನ್ನೆಬ್ಬಿಸಿರುವುದು ಹಾಗೂ ನೀಳ ಮತ್ತು ಅಷ್ಟೇನೂ ಆಳವಲ್ಲದ ತಗ್ಗುಗಳಿರುವುದು ಕಂಡುಬರುತ್ತವೆ. ಕಲ್ಲು-ಸುತ್ತಿಗೆ ಮತ್ತು ಮರದ ಇಲ್ಲವೇ ಮೂಳೆಯ ಸುತ್ತಿಗೆಯಿಂದ ನಿಯಮಿತ ಮತ್ತು ಕೇಂದ್ರೀಕೃತ ಬಲಪ್ರಯೋಗ ವಿಧಾನವನ್ನು ಬಳಸಿರುವುದು ಕಂಡುಬರುತ್ತದೆ. ವಿವಿಧ ತಯಾರಿಕಾ ಹಂತಗಳ ಉಪಕರಣಗಳು ದೊರೆತಿರುವುದರಿಂದ ತಾಂತ್ರಿಕತೆಯ ಹಲವು ವಿಷಯಗಳನ್ನು ಅವಲೋಕಿಸಲು ಸಹಾಯಕವಾಗಿದೆ.

ಅದರಂತೆ ನೂತನ ಶಿಲಾಯುಗದ ಸೂಕ್ಷ್ಮ ಶಿಲೋಪಕರಣಗಳನ್ನು ಸಿದ್ಧಗೊಳಿಸಲು ಪ್ರಮುಖವಾಗಿ ಅರೆ ಪ್ರಶಸ್ತ ಶಿಲೆಯ ಬಳಕೆ ಪ್ರಮುಖವಾದುದಾಗಿದೆ. ಹಾಗಾಗಿ ತಾಂತ್ರಿಕತೆಯ ಸೂಕ್ಷ್ಮತೆಯನ್ನು ಗುರುತಿಸಬಹುದಾಗಿದೆ. ನೀಳಚಕ್ಕೆ, ಹೆರೆಚಕ್ಕೆಯ ಗುಂಪಿನ ಉಪಕರಣಗಳನ್ನು ಎರಡನೆಯ ಸಲ ಸೂಕ್ಷ್ಮ ಚಕ್ಕೆಗಳನ್ನೆಬ್ಬಿಸಿ ಹರಿತಗೊಳಿಸಿ ಬಳಸಿರುವುದು ಕಂಡುಬರುತ್ತದೆ. ಒಟ್ಟಾರೆ ಸೂಕ್ಷ್ಮತೆಯಿಂದ ರೂಪಿಸಿದ ಉಪಕರಣಗಳ ತಾಂತ್ರಿಕತೆ ಬಳಕೆಯಲ್ಲಿದ್ದಿತೆಂಬುದನ್ನು ಕಂಡುಕೊಳ್ಳಬಹುದಾಗಿದೆ.

ಶಿಲಾತಾಮ್ರಯುಗ :

ನೂತನ ಶಿಲಾಯುಗ ಸಂಸ್ಕೃತಿಯ ಹಂತದಿಂದ ಲೋಹದ ಅದಿರನ್ನು ಸಂಗ್ರಹಿಸುವುದು, ಲೋಹವನ್ನು ಪರಿವರ್ತಿಸುವುದು, ಲೋಹದ ವಿವಿಧ ವಸ್ತುಗಳನ್ನು ಸಿದ್ಧಪಡಿಸುವುದು ಮಾನವನ ಜೀವಮಾನದ ಒಂದು ಪ್ರಮುಖ ಘಟ್ಟವಾಗಿದೆ. ಅದರಂತೆಯೇ ಶಿಲಾ ಉಪಕರಣಗಳ ಬಳಕೆ ಕಡಿಮೆಯಾಗಿ ತಾಮ್ರ ಅಥವಾ ಕಂಚಿನ ವಸ್ತುಗಳು, ಸೂಕ್ಷ್ಮ

ಶಿಲೋಪಕರಣಗಳಾದ ಇಬ್ಬದಿ ಅಲಗಿನ ಉಪಕರಣಗಳ ಬಳಕೆ ಹಾಗೂ ಸುಟ್ಟ ಮಣ್ಣಿನ ಪಾತ್ರೆಗಳ ಉಪಯೋಗ, ಬಿಸಿಲಿನಲ್ಲಿ ಒಣಗಿಸಿದ ಸುಟ್ಟ ಇಟ್ಟಿಗೆಯ ಉಪಯೋಗ ಮೊದಲಾದ ಹಲವಾರು ಬೆಳವಣಿಗೆಗಳನ್ನು ಕಂಡುಕೊಂಡಂತಹ ಹಂತವೇ "ಶಿಲಾತಾಮ್ರಯುಗ" ವೆಂದು ಕರೆಯಲಾಗಿದೆ.

* * * * *









ಅದ್ಯಾಯ : ಆರು
ಸಮಾರೋಪ

ಪ್ರಾಗೈತಿಹಾಸಿಕ ಕಾಲದಿಂದ ಅಧುನಿಕ ಕಾಲದವರೆಗೆ ಚಿತ್ರದುರ್ಗ ಪ್ರದೇಶವು ಚಿತ್ರಕಲೆ, ಶಿಲ್ಪಕಲೆ, ಜಾನಪದ ಆಚರಣೆಗಳನ್ನು ಉಳಿಸಿ ಬೆಳೆಸುತ್ತಾ ಬಂದಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಚಿತ್ರದುರ್ಗ ಪರಿಸರದಲ್ಲಿ ಕಲೆಯ ಭವ್ಯ ಪರಂಪರೆ ಭವ್ಯವಾಗಿ ಬೆಳೆದುಬಂದಿದೆ. ಜೊತೆಗೆ ಪ್ರಾದೇಶಿಕ ವಿಶಿಷ್ಟ ಅಂಶಗಳನ್ನೊಳಗೊಂಡಿವೆ. ನಿಸರ್ಗದ ಆಸರೆಯಲ್ಲಿ ಸಹಜವಾಗಿಯೇ ಬೆಳೆಸಿಕೊಂಡು ಬಂದ ಅದಿಮಾನವರ ಸರಳ ವೈವಿಧ್ಯಮಯ ಕಲಾಸಂಪತ್ತು ತರುವಾಯ ಇತಿಹಾಸ ಕಾಲದ ಶಿಷ್ಟಪದ ಸಾಂಪ್ರದಾಯಿಕ ಕಲೆಗೆ ಬುನಾದಿಯಾಗಿರುವುದು ಈ ಪ್ರದೇಶದಲ್ಲಿ ಕಂಡುಬರುತ್ತದೆ. ಸೂಕ್ಷ್ಮ ಶಿಲಾಯುಗದಿಂದ ಬೃಹತ್‌ಶಿಲಾಯುಗದ ವರೆಗಿನ ಕಾಲಮಾನದ ಗವಿವರ್ಣ ಚಿತ್ರಗಳು ಬಯಲು ಬಂಡೆಯ ಚಿತ್ರಗಳು ಈ ಪ್ರದೇಶದಲ್ಲಿ ಸಂಶೋಧನೆಯಿಂದ ಬೆಳಕಿಗೆ ಬಂದಿದ್ದು ಇನ್ನು ಬರುತ್ತಲೆ ಇವೆ.

ಈ ಪ್ರದೇಶದ ಚಿತ್ರಗಳಲ್ಲಿ ರೇಖಾ ವಿನ್ಯಾಸಗಳು ಬಾಗುಬಳುಕುವ ಚಿಕ್ಕ ತಲೆ ಮಿತಿಮೀರಿದ ಉದ್ದನೆಯ ಮುಂಡ ಚಲನೆಯಿಂದ ಕೂಡಿದ ಕಾಲುಗಳು ಮೊದಲಾದ ಲಕ್ಷಣಗಳನ್ನು ನೈಜತೆಯಿಂದ ಕೂಡಿರದೆ ಸಾಂಕೇತಿಕವಾಗಿವೆ. ಬಯಲು ಬಂಡೆಯ ಮೇಲೆ ಕುಟ್ಟಿ ಕೊರೆದು ಚಿತ್ರಿಸಲು ಚೂಪಾದ ಗಟ್ಟಿಕಲ್ಲಿನ ಅಥವಾ ಲೋಹದ ಉಪಕರಣ ಬಳಸಿದ್ದಾರೆ. ಗೀರು ಚಿತ್ರಗಳು ಈ ಪ್ರದೇಶದ ಮಾನವರಿಗೆ ಪ್ರಿಯವಾಗಿದ್ದು, ತನಗೆ ಬೇಕಾದ ಪ್ರಾಣಿಗಳು ಅದರಲ್ಲೂ ವಿಶೇಷವಾಗಿ ಗೂಳಿ, ಜಿಗರೆ, ಕಾಡುಕೋಣ, ಜಿಂಕೆ ಇತ್ಯಾದಿ ಪ್ರಾಣಿಗಳನ್ನು ಚಿತ್ರಿಸಿರುವುದು ಕಾಣುತ್ತೇವೆ. ಸಾಮಾಜಿಕವಾಗಿ ಸಮೂಹ ನೃತ್ಯ, ಬೇಟೆಗಾರಿಕೆ, ಶವಸಂಸ್ಕಾರ,

[illegible]

[illegible]

ಮಾಟ ಮಂತ್ರಗಳಂತಹ ವಿವಿಧ ಪ್ರಕಾರದ ಆಚರಣೆಗಳು ಹಾಗೂ ತಮ್ಮ ದೈನಂದಿನ ಚಟುವಟಿಕೆಗಳು, ನಿತ್ಯ ಬಳಕೆಯ ವಸ್ತುಗಳ ಚಿತ್ರಗಳಿರುವುದು ಕಂಡುಬರುತ್ತದೆ. ಮಣ್ಣಿನ ಪಾತ್ರೆಗಳು, ಆಯುಧಗಳು, ಆಭರಣಗಳು ಮತ್ತು ಕಟ್ಟಳೆಗಳಿಗನುಸಾರವಾಗಿ ಮಣ್ಣಿನ, ಎಲುಬಿನ ಗೊಂಬೆಗಳ ಮೇಲೂ ವರ್ಣ ಚಿತ್ರಕಲೆ ಕಂಡುಬಂದಿದೆ. ಈ ಪ್ರದೇಶದ ಚಿತ್ರಗಳಲ್ಲಿ ವರ್ಣ ವೈವಿಧ್ಯತೆ ಮನಸೆಳೆಯುತ್ತದೆ. ಕೆಂಪು, ಹಳದಿ, ಬಿಳಿ, ಕಪ್ಪುವರ್ಣಗಳನ್ನು ಇಲ್ಲಿ ಹೆಚ್ಚಾಗಿ ಬಳಕೆಯಾಗಿದೆ. ಇವುಗಳ ಜೊತೆಗೆ ಹಸಿರು, ನೀಲಿ ವರ್ಣಗಳು ಕೆಲವು ಕಡೆ ಗೋಚರಿಸುತ್ತವೆ. ಹೀಗೆ ವೈವಿಧ್ಯಮಯವಾಗಿರುವ ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸ ಚಿತ್ರಕಲೆಯ ಬಗೆಗಿರುವ ಈ ಅಧ್ಯಯನವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಹೊರಹೊಮ್ಮಿರುವ ಫಲಿತಗಳ ಸಂಕ್ಷಿಪ್ತ ನೋಟ ಕೆಳಗಿನಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅದ್ಯಯನದ ಉದ್ದೇಶ ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತಾಗಿ ಹೇಳಲಾಗಿದೆ. ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲು ಇರುವ ಕಾರಣಗಳು, ಅವಶ್ಯಕತೆಗಳು ಪ್ರಸ್ತುತತೆ ಮತ್ತು ಮಹತ್ವವನ್ನು ಬಿಂಬಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕತೆ ಮತ್ತು ಸಾಂಸ್ಕೃತಿಕ ಪರಿಸರದ ಬಗ್ಗೆ ಹೇಳಲಾಗಿದೆ. ಜಿಲ್ಲೆಯ ಪ್ರತಿ ತಾಲೂಕುವಾರು ಬರುವ ಪ್ರಾಗೈತಿಹಾಸಿಕ ನೆಲೆಗಳ ಭೌಗೋಳಿಕ ಲಕ್ಷಣ, ಅಲ್ಲಿದೊರೆತ ಶಿಲಾಯುಧ, ಉಪಕರಣ, ಶಿಲಾಗೋರಿಗಳು, ವಾಸದನೆಲೆ, ಮೃತ್ ಪಾತ್ರೆಗಳು, ಹಾಗೂ ಚಿತ್ರಗಳಲ್ಲದೆ ಚಿತ್ರದುರ್ಗದ ಸ್ಥಳನಾಮ, ಅಲ್ಲಿನ ನೆಲ, ಜಲ, ಬೆಟ್ಟ, ಗುಡ್ಡ, ನದಿ, ಸರೋವರಗಳ ಪ್ರಾಚೀನದ ಬಗ್ಗೆ ಹೇಳಲಾಗಿದೆ. ಅಲ್ಲದೆ ಚಿತ್ರದುರ್ಗದ ಪರಂಪರೆ, ಆಡಳಿತ ವ್ಯವಸ್ಥೆ, ಪ್ರಮುಖ ಅರಸರು, ಅವರು ನಿರ್ಮಿಸಿದ ದೇವಾಲಯ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಚಿತ್ರಕಲೆಗಳನ್ನು ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ತಿಳಿಸಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳು, ಪ್ರತಿ ನೆಲೆಗಳ ಚಿತ್ರಗಳ ವಸ್ತುವಿಷಯ, ಚಿತ್ರಗಳ ವಿವರಣೆ ವಿಶಿಷ್ಟತೆಗಳನ್ನು ಕಟ್ಟಿಕೊಡಲಾಗಿದೆ. ಇಲ್ಲಿ ಪ್ರತಿ ತಾಲೂಕು, ಅವುಗಳಲ್ಲಿನ ನೆಲೆಗಳು, ನೆಲೆಗಳಲ್ಲಿನ ಗುಹೆಗಳು, ಶಿಲಾಶ್ರಯಗಳು, ಬಯಲುಬಂಡೆಯ ಚಿತ್ರಗಳು ಎಲ್ಲವನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಕಲೆಯ ವಸ್ತುವಿಷಯಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಪ್ರತಿಯೊಂದು ಸ್ಥಳದಲ್ಲಿ ಬರುವ ಗವಿವರ್ಣಚಿತ್ರ, ಬಯಲುಬಂಡೆಯ ಚಿತ್ರಗಳ ವಿವರಣೆಯ ಜೊತೆಗೆ ಸ್ಥೂಲವಾಗಿ ಚಿತ್ರಗಳ ಸಾಮ್ಯತೆ, ವೈರುಧ್ಯ ಮುಂತಾದ ಅಂಶಗಳನ್ನು ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ವಿವಿಧ ಬಗೆಯ ಸಾಂಕೇತಿಕ ಚಿತ್ರಗಳು ಅದರಲ್ಲಿ ಇರಬಹುದಾದ ಕೆಲವು ನಿಗೂಢ ನಂಬಿಕೆಗಳು,

[illegible]

[illegible]

[illegible]

ಸಮೂಹ ಜೀವನ, ಕೃಷಿಕ ಜೀವನ, ಪಶುಸಂಗೋಪನೆ ಮುಂತಾದ ಚಿತ್ರಗಳ ಕುರಿತಾಗಿಯು ತೌಲನಿಕವಾಗಿ ಗಮನಿಸಿರುವುದು ಪ್ರಸ್ತುತ ಅಧ್ಯಯನದಲ್ಲಿದೆ.

ಐದನೆಯ ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ರಚನಾಕ್ರಮ, ತಂತ್ರಗಾರಿಕೆ, ಶೈಲಿ, ಪರಿಕರಗಳ ಸಿದ್ದತಾ ವಿಧಾನಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಬಯಲು ಬಂಡೆಯ ರೇಖಾಚಿತ್ರಗಳ ರಚನೆಯ ಸಾಮಗ್ರಿಗಳು, ಹಾಗು ವರ್ಣರೇಖಾ ಚಿತ್ರ ರಚನೆಗೆ ಬೇಕಾದ ಬಣ್ಣಗಳ ಪರಿಚಯ, ಕುಂಚಗಳ ತಯಾರಿಕೆ, ಲೇಪನವಿಧಾನ ಹಸ್ತಗಳ ಬಳಕೆ ಬಗ್ಗೆ ತಿಳಿಸಲಾಗಿದೆ. ಪ್ರಾಗೈತಿಹಾಸಿಕ ಮಾನವರು ಸೌಂದರ್ಯ ಪ್ರಜ್ಞೆಗೆ ಎಷ್ಟು ಒತ್ತುಕೊಡುತ್ತಿದ್ದರು ಎಂಬುದು ಅವರು ರಚಿಸಿದ ಶಿಲಾಶ್ರಯ, ವರ್ಣಚಿತ್ರಗಳಲ್ಲಿ, ಬಯಲು ಬಂಡೆಯ ಕುಟ್ಟಿದ, ಕೊರೆದ ಚಿತ್ರಗಳಲ್ಲಿ ಕಾಣಬಹುದಾಗಿದೆ. ಇಂಥ ಹತ್ತು ಹಲವಾರು ಅಂಶಗಳನ್ನು ಸ್ಥೂಲವಾಗಿ ತಿಳಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಎಲ್ಲ ಅಧ್ಯಯನಗಳ ಫಲಿತಗಳನ್ನು ಸಮಿಕ್ಷಿಸಲಾಗಿದೆ. ಪ್ರಸ್ತುತ ಅಧ್ಯಯನದಿಂದ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಗಿದೆ :

೧. ಚಿತ್ರದುರ್ಗ ಪ್ರದೇಶದಲ್ಲಿ ಅತಿ ಹೆಚ್ಚಿನ ಪ್ರಾಗೈತಿಹಾಸಿಕ ಚಿತ್ರಗಳು ಕಂಡುಬಂದಿದ್ದು, ಈ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಚಿತ್ರಗಳು ಕಂಡುಬಂದಿರುವುದು ಪ್ರಮುಖ ಅಂಶವಾಗಿದೆ.

೨. ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬಂದಿರುವ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ವೈವಿಧ್ಯತೆ ಗೋಚರಿಸುತ್ತದೆ. ಸಾಮಾನ್ಯವಾಗಿ ಬಯಲುಬಂಡೆಯ ಚಿತ್ರಗಳಲ್ಲಿ ಕುಟ್ಟಿದ ಮತ್ತು ಕೊರೆದ ಚಿತ್ರ ಪ್ರಕಾರಗಳು ಕಂಡುಬರುತ್ತವೆ. ಅದೇ ಪ್ರಕಾರ ಗುಹಾವರ್ಣ ಚಿತ್ರಗಳಲ್ಲಿ ರೇಖಾಚಿತ್ರಗಳು ಮತ್ತು ಚಪ್ಪಟೆಬಣ್ಣ ಲೇಪನದ ಚಿತ್ರಗಳು ಕಂಡುಬರುತ್ತವೆ. ಈ ನಾಲ್ಕು ಪ್ರಕಾರದ ಚಿತ್ರರಚನೆಗಳು ಚಿತ್ರದುರ್ಗ ಪ್ರದೇಶದಲ್ಲಿ ರಚನೆಯಾಗಿರುವುದು ಮಹತ್ವದ ಅಂಶವಾಗಿದೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ.

೩. ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ಈ ಅಧ್ಯಯನದಲ್ಲಿ ತಾಲೂಕುವಾರು ಕಂಡುಬಂದಿರುವ ನೆಲೆಗಳನ್ನು ಅನುಕಗರಮವಾಗಿ ವಿಶ್ಲೇಷಿಸುವ ಜೊತೆಗೆ ಅಲ್ಲಿ ಕಂಡುಬಂದಿರುವ ಪ್ರಾಗೈತಿಹಾಸಿಕ ಕಾಲದ ಇನ್ನಿತರೆ ಕಲಾಪರಿಕರಗಳ ಬಗ್ಗೆ ತಿಳಿದುಕೊಳ್ಳಲಾಗಿದೆ. ಇವುಗಳಲ್ಲಿ ಶಿಲಾಗೋರಿ, ವಾಸದ ನೆಲೆಗಳು, ಆಯುಧಗಳು, ಉಪಕರಣಗಳು, ಆಭರಣಗಳು, ಮೃತ್‌ಪಾತ್ರೆಗಳು, ಬೂದಿದಿಬ್ಬಗಳು, ಮಣ್ಣಿನ ಗೊಂಬೆಗಳು ಒಳಗೊಳ್ಳುತ್ತವೆ.

೪. ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳನ್ನು ವಿಶ್ಲೇಷಿಸುವುದರ ಜೊತೆಗೆ ಪ್ರತಿಯೊಂದು ಚಿತ್ರಗಳ ನೆಲೆಗಳನ್ನು ತೌಲನಿಕವಾಗಿ ವಿವೇಚನೆ ಮಾಡಿರುವ ಪ್ರಯತ್ನವು ಪ್ರಸ್ತುತ ಅಧ್ಯಯನದಲ್ಲಿದೆ.

೫. ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ವಿಶ್ಲೇಷನೆಯ ಸಂದರ್ಭದಲ್ಲಿ ಆ ಜನರ

[illegible]

ನಂಬಿಕೆ, ಆಚರಣೆ, ವೇಷಭೂಷಣಗಳು, ವಿಧಿಕ್ರಿಯೆಗಳು, ಮಾಟಮಂತ್ರಗಳಂತಹ ತಂತ್ರಗಾರಿಕೆ, ನೃತ್ಯದಂತಹ ಚಟುವಟಿಕೆಗಳು ಮತ್ತು ನಿತ್ಯ ಬದುಕುಗಳನ್ನು ಚಿತ್ರಿಸಿದ ಹಿನ್ನೆಲೆಯಲ್ಲಿ ಬಿಂಬಿಸಲಾಗಿದೆ.

ಮೇಲಿನ ಗಮನಾರ್ಹವಾದ ಫಲಿತಗಳನ್ನು ಬಿಂಬಿಸಿದ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ಬಗೆಗಿನ ಈ ಅಧ್ಯಯನವು ಪರಿಪೂರ್ಣ ಅಧ್ಯಯನವಾಗಿರದೆ, ನಿಗದಿತ ಸಮಯ ಮತ್ತು ವ್ಯಾಪ್ತಿಗೊಳಪಟ್ಟ, ಸಿಮೀತ ಅಧ್ಯಯನವಾಗಿದೆ. ಹಾಗಾಗಿ ಇಲ್ಲಿ ಕೆಲವು ವಿಚಾರಗಳು ಮಾತ್ರ ವಿಶ್ಲೇಷಣೆಗೆ ಒಳಪಟ್ಟಿದ್ದು, ಇನ್ನು ಹಲವಾರು ದೃಷ್ಟಿಕೋನಗಳಿಂದ ಈ ಚಿತ್ರಗಳನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಮುಂದಿನ ಅಧ್ಯಯನಕಾರರಿಗೆ ಒಂದು ಪ್ರಮುಖವಾದ ಆಕರ ಸಾಮಗ್ರಿಯ ಅಡಿಪಾಯವನ್ನು ಒದಗಿಸುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

* * * * *

ಅನುಬಂಧಗಳು

ಗ್ರಂಥ ಋಣ

೦೧. **ಆಲೇಖ್ಯ** — ಡಾ. ಅ.ಲ. ನರಸಿಂಹನ್
ಸಂಯೋಜಿತ, ಸಮಕಾಲೀನ
ಕಲಾವಿದರ ಸಂಸ್ಥೆ, ಬೆಂಗಳೂರು
೧೯೯೯

೦೨. **ಇತಿಹಾಸ ಪೂರ್ವ ಕಲೆ** — ಎನ್. ಮರಿಶಾಮಾಚಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು – ೨೦೦೨

೦೩. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ — ಡಾ. ಯಾದಪ್ಪ ಪರದೇಶಿ
ಅ.ಪ್ರ. ಪಿಹೆಚ್.ಡಿ ಮ.ಪ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೧

೦೪. **ಕರ್ನಾಟಕದಲ್ಲಿ ಚಿತ್ರಕಲೆ** — ಡಾ. ಕೆ. ಶಿವರಾಮ ಕಾರಂತ.
ಪ್ರಸಾರಾಂಗ ಮೈ.ವಿ.ವಿ. ಮೈಸೂರು – ೧೯೭೨

೦೫. **ಕಲೆಗಳು — ೬೪** — ಎಂ. ಶ್ರೀಧರಮೂರ್ತಿ.
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – ೧೯೭೪

೦೬. **ಕಲಾನುಭವ** — ವೀ. ಸೀತಾರಾಮಯ್ಯ
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – ೧೯೭೬

೦೭. **ಕಲೆ ಮತ್ತು ಹಬ್ಬ** — ಎಸ್.ಕೆ. ಹೂಗಾರ
ಪಠ್ಯಪುಸ್ತಕ ನಿರ್ದೇಶನಾಲಯ,
ಕ.ವಿ.ವಿ. ಧಾರವಾಡ – ೧೯೭೭

೦೮. **ಕಲೆಯ ದರ್ಶನ** — ಡಾ. ಕೆ. ಶಿವರಾಮ ಕಾರಂತ.
ರಾಜಲಕ್ಷ್ಮಿ ಪ್ರಕಾಶನ ಬೆಂಗಳೂರು – ೧೯೮೨

೦೯. **ಕರ್ನಾಟಕದ ಗತವೈಭವ** — ಆಲೂರು ವೆಂಕಟರಾಯ
ವಿಶ್ವ ಕನ್ನಡ ಸಮ್ಮೇಳನ,
ಬೆಂಗಳೂರು – ೧೯೮೩

೧೦. **ಕರ್ನಾಟಕದ ಭಿತ್ತಿ ಚಿತ್ರಗಳು** — ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು – ೧೯೮೩

೧೧. **ಕರ್ನಾಟಕ ಜನಪದ ಚಿತ್ರಕಲೆ** — ಡಾ. ಎಸ್.ಸಿ. ಪಾಟೀಲ.
ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು
ತೋಂಟದಾರ್ಯ ಸಂಸ್ಥಾನ ಮಠ ಗದಗ – ೧೯೯೩

೧೨. **ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ** — ಪ್ರಸಂ. ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು – ೧೯೯೪

೧೩. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** — ಡಾ. ಹೆಚ್. ತಿಪ್ಪೇರುದ್ರಸ್ವಾಮಿ.
ಪಿ.ವಿ.ಕೆ ಮೂರ್ತಿ ಪ್ರಕಾಶನ ಮೈಸೂರು – ೧೯೯೮

೧೪. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** — ಕೆ.ವಿ. ಕಾಳೆ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦

೧೫. **ಕರ್ನಾಟಕದ ಪುರಾತತ್ವ ನೆಲೆಗಳು** — ಕೆ.ಬಿ. ಶಿವತಾರಕ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೧

೧೬. **ಕರಕುಶಲ ಕಲೆಗಳು** — ಸಂ. ಡಾ. ಕರೀಗೌಡ ಬೀಚನಳ್ಳಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. **ಕಲಾ ಚರಿತ್ರೆ** — ಎನ್. ಮರಿಶಾಮಾಚಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು – ೨೦೦೨

೧೮. **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ** — ಮಹದೇವ ಬಡಿಗೇರ
ಅದ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕ, ವಿ, ವಿ.
ಹಂಪಿ – ೨೦೦೭

೧೯. **ಕರ್ನಾಟಕ ಚರಿತ್ರೆ** — ಪ್ರೊ. ಬಿ. ಶೇಕ್ ಅಲಿ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. **ಚಿತ್ರಕಲಾ ಪ್ರವೇಶ** — ಗೋ.ಶ್ರೀ. ಹುದ್ದಾರ
ಸಮಾಜ ಪುಸ್ತಕಾಲಯ,
ಧಾರವಾಡ – ೧೯೭೪

೨೧. **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** — ಪ್ರಸಂ. ಪ್ರಾ. ಸುರೇಶ. ಡಿ. ಹಾಲಭಾವಿ
ರೇಣುಕಾ ಮುದ್ರಣಾಲಯ, ಧಾರವಾಡ — ಸಂ. ಡಾ. ಎಸ್.ಸಿ. ಪಾಟೀಲ

೨೨.	**ಚಿತ್ರದುರ್ಗ ಜಿಲ್ಲಾ ಗ್ಯಾಸಿಟಿಯರ್** (ಮೈಸೂರು ರಾಜ್ಯ) ಕರ್ನಾಟಕ ಸರ್ಕಾರ, ಬೆಂಗಳೂರು – ೧೯೬೭	ಬಿ.ಎನ್. ಸತ್ಯನ್
೨೩.	**ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು** ರೇಣುಕ ಪ್ರಕಾಶನ ಚಿತ್ರದುರ್ಗ - ೨೦೦೮	ಎನ್.ಎಸ್. ಮಹಂತೇಶ್
೨೪.	**ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ – ೨೦೦೫	ಡಾ. ಆರ್. ಗೋಪಾಲ್
೨೫.	**ಸಮಗ್ರ ಭಾರತ ಇತಿಹಾಸ** ಸ್ವರ್ಣ ಪ್ರಕಾಶನ ಶಿವಮೊಗ್ಗ - ೨೦೦೫	ಟಿ.ಜಿ. ಚಂದ್ರಶೇಖರಪ್ಪ

ಅನುಬಂಧ ೨

ಚಿತ್ರದರ್ಗ ಪ್ರದೇಶ ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಗಳು ಮತ್ತು ಬಯಲು ಬಂಡೆ ಚಿತ್ರಗಳ ನೆಲೆಗಳ ಕಾಲಮಾನ

ಚಿತ್ರದುರ್ಗ ತಾಲ್ಲೂಕು.

ಕ್ರಸಂ.	ನೆಲೆಗಳ ಹೆಸರು	ವರ್ಣಚಿತ್ರಗಳು	ಬಯಲುಬಂಡೆಚಿತ್ರಗಳು	ಶಿಲಾಯುಗಗಳು
೧	ಬೂದಿರದಿಬ್ಬ – ಕೋಟೆ ಪರಿಸರ	*	*	ನೂತನಶಿಲಾಯುಗ
೨	ನಗರ – ತಮಟಕಲ್ಲು ಪರಿಸರ	*	*	ಆದಿಚಾರಿತ್ರಿಕ ಕಾಲ
೩	ಚೋಳಗುಡ್ಡ– ಕವಾಡಿಗರಹಟ್ಟಿ ಸೊಲ್ಲಾಪುರ ಪರಿಸರ	*	*	ಇತಿಹಾಸ ಆರಂಭಿಕಗಳು
೪	ಗಂಜಿಗಟ್ಟೆ –ಪಂಥರಹಳ್ಳಿ ಪರಿಸರ	*	*	ಬೃಹತ್ ಶಿಲಾಯುಗ
೫	ಕುಂಚಿಗನಹಾಳು		*	ಬೃಹತ್ ಶಿಲಾಯುಗ
೬	ದೊಡ್ಡ ಸಿದ್ದವನಹಳ್ಳಿ ಗುಡ್ಡ, ಸಂಗೇನಹಳ್ಳಿ ಕೆರೆ ಪರಿಸರ		*	ನೂತನ ಶಿಲಾಯುಗ
೭	ಬೆಳಗಟ್ಟ ಪರಿಸರ		*	ಇತಿಹಾಸ ಅರಂಭ ಕಾಲ
೮	ಚಂದ್ರವಳ್ಳಿ ಪರಿಸರ	*	*	ಶಿಲಾತಾಮ್ರ ಯುಗ
	ಮೊಳಕಾಲ್ಮೂರು ತಾಲ್ಲೂಕು			
೧	ಬ್ರಹ್ಮಗಿರಿ – ಪರಿಸರ	*	*	ಇತಿಹಾಸ ಆರಂಭ ಮತ್ತು ತಾಮ್ರಯುಗ
೨	ಜಟಿಂಗರಾಮೇಶ್ವರ – ಪರಿಸರ	*	*	ನೂತನಶಿಲಾಯುಗ
೩	ನುಂಕಿಮಲ್ಲೆ – ಪರಿಸರ	*	*	ನೂತನಶಿಲಾಯುಗ
೪	ಸಂತೆಗುಡ್ಡ	*	*	ನೂತನಶಿಲಾಯುಗ
	ಚಳ್ಳಕೆರೆ ತಾಲ್ಲೂಕು			
೧	ನನ್ನಿವಾಳ, ಪರಿಸರ	*	*	ನೂತನಶಿಲಾಯುಗ
೨.	ನೇರಲಕುಂಟೆ ಪರಿಸರ		*	ಇತಿಹಾಸ ಆ.ಕಾಲ
೩.	ಸಿದ್ದೇಶ್ವರಗುಡ್ಡ ಪರಿಸರ		*	ಇತಿಹಾಸ ಆ.ಕಾಲ
	ಹೊಸದುರ್ಗ ತಾಲ್ಲೂಕು			
೧	ತಣಿಗೆಕಲ್ಲು ಪರಿಸರ	*	*	ನವಶಿಲಾಯುಗ
೨	ಜಾನಕಲ್ಲು ಪರಿಸರ		*	ನವಶಿಲಾಯುಗ
	ಹಿರಿಯೂರು ತಾಲ್ಲೂಕು			
೧	ಸೊಂಡೆಕೆರೆ, – ಪರಿಸರ		*	ನವಶಿಲಾಯುಗ
೨	ಉಡವಳ್ಳಿ – ಪರಿಸರ		*	ನವಶಿಲಾಯುಗ
	ಹೊಳಲ್ಕೆರೆ ತಾಲ್ಲೂಕು			
೧	ತಾಳ್ಯ – ಪರಿಸರ		*	ನವಶಿಲಾಯುಗ
೨	ಘಟ್ಟಿಹೊಸಹಳ್ಳಿ		*	ನವಶಿಲಾಯುಗ

[illegible]

ಆಯ್ದ ನಿಯತಕಾಲಿಕೆಗಳು :

೧. ಸಾಂಸ್ಕೃತಿಕ ಅಧ್ಯಯನಕ್ಕೆ ಗುಹೆಯ ತೆರೆದ ಬಾಗಿಲು (ಲೇ) : ಡಾ.ಮಲ್ಲೆಪುರಂ ಜಿ. ವೆಂಕಟೇಶ
ಪುಸ್ತಕ ಪ್ರಪಂಚ – ೧೯೮೩

೨. ಮಹತ್ವಪೂರ್ಣ ಸಂಶೋಧನ ಕೃತಿ (ಲೇ) : ಬಿ.ಟಿ. ಮೊಕಾಶಿ
ಸಂಯುಕ್ತ ಕರ್ನಾಟಕ, ನಿತ್ಯ ಸೌರಭ – ೧೯೮೩

೩. ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಸಂಶೋಧನೆಯ ಹಾದಿಯಲ್ಲಿ (ಲೇ) : ಶಕ
ಪ್ರಜಾವಾಣಿ ದಿನಪತ್ರಿಕೆ – ೧೯೮೪

೪. ಗಿರಿಮಾಲೆಯ ಗುಹಾ ಗರ್ಭದಲ್ಲಿ ಆದಿಮಾನವರ ಅನಂತ ಸೃಷ್ಟಿ
ಕನ್ನಡಪ್ರಭ – ೧೯೮೩

೫. ಚಿತ್ರದುರ್ಗ ಪರಿಸರದ ಗುಹಾಚಿತ್ರಗಳು (ಲೇ) : ಎಚ್. ಶ್ರೀಶೈಲ ಆರಾಧ್ಯ
ಪ್ರಿಯ ದೀಪಾವಳಿ ವಿಶೇಷಾಂಕ – ೧೯೮೪

೬. ಅಮೃತಫಲ ನೀಡಿದ ಆರಾಧ್ಯರು (ಲೇ) : ಎಚ್. ಶ್ರೀಶೈಲ ಆರಾಧ್ಯ
ಬ್ರಹ್ಮಗಿರಿ ಆರನೆಯ ವಿಶೇಷ ಸಂಚಿಕೆ – ೧೯೮೩

ಚಿತ್ರದುರ್ಗ ಜಿಲ್ಲೆ



